
ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 13 | ಸಂಚಿಕೆ 31 | ಜುಲೈ 29–ಆಗಸ್ಟ್ 4, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com






ಕುದುರೆ ವ್ಯಾಪಾರಿಯೊಬ್ಬರ ಮರುಪಟ್ಟಾಭಿಷೇಕ



ಭಾರತೀಯರ ಭದ್ರತೆ ಧ್ವಂಸ ಮಾಡುವತ್ತ..



ಅಮೆರಿಕ ರಥಕ್ಕೆ ಇನ್ನೊಂದು ಗಾಲಿ –ಭಾರತ



ಅರಣ್ಯ ಹಕ್ಕುಗಳಿಗಾಗಿ ಅರಣ್ಯವಾಸಿಗಳ ದೇಶವ್ಯಾಪಿ ಪ್ರತಿಭಟನೆ

ಕಾರ್ಮಿಕ ಸಂಹಿತೆಗಳ ಹೇರಿಕೆಯ ವಿರುದ್ಧ ಆಗಸ್ಟ್ 2ರಂದು ಅಖಿಲ ಭಾರತ ಪ್ರತಿಭಟನಾ ದಿನಾಚರಣೆ

“ಸಬ್ ಕಾ ಸಾಥ್, ಸಬ್ ಕಾ ವಿಶ್ವಾಸ್” ಘೋಷಣೆಯನ್ನು ಹುಸಿಗೊಳಿಸುವ ಬಿಜೆಪಿ ಸರಕಾರದ ಪ್ರಜಾಪ್ರಭುತ್ವ–ವಿರೋಧಿ ನಡೆಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಪ್ರಬಲ ವಿರೋಧ

ಕಾರ್ಮಿಕ ಆಂದೋಲನದ ಬಲವಾದ ಆಕ್ಷೇಪಗಳನ್ನು ಬದಿಗೆ ಸರಿಸಿ ಕಾರ್ಮಿಕ ಕಾನೂನುಗಳನ್ನು ಸಂಹಿತೆಗಳಾಗಿ ರೂಪಿಸುವ ತನ್ನ ಇರಾದೆಯನ್ನು ಹೇರಲು ಸರಕಾರ ಮುಂದಾಗಿದೆ ಎಂದು ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಹಲವು ಅಖಿಲ ಭಾರತ ಕಾರ್ಮಿಕರ, ನೌಕರರ ಸಂಘಗಳು ಹಾಗೂ ಒಕ್ಕೂಟಗಳು ಬಲವಾದ ಆಕ್ಷೇಪವನ್ನು ವ್ಯಕ್ತಪಡಿಸಿವೆ. ಸರಕಾರದ ಇಂತಹ ಕಾರ್ಮಿಕ-ವಿರೋಧಿ ನಡೆಯನ್ನು ಖಂಡಿಸುತ್ತ, ಆಗಸ್ಟ್ 2, 2019ನ್ನು ಪ್ರತಿಭಟನಾ ದಿನವಾಗಿ ಆಚರಿಸಬೇಕು, ದೇಶಾದ್ಯಂತ ಪ್ರತಿಭಟನೆಗಳನ್ನು ನಡೆಸಬೇಕು, ಮತ್ತು ಎಲ್ಲ ಅಂತರ್ರಾಷ್ಟ್ರೀಯ ಕಾರ್ಮಿಕ ಮಾದರಿಗಳ ಎಲ್ಲ ನಿಯಮಾವಳಿಗಳನ್ನು ಉಲ್ಲಂಘಿಸಿ ತಂದಿರುವ ಪ್ರಸ್ತಾವಿತ ಕಾರ್ಮಿಕ–ವಿರೋದಿ ಶಾಸನಗಳನ್ನು ಹಿಂತೆಗೆದುಕೊಳ್ಳಬೇಕು ಎಂಬ ಬೇಡಿಕೆಯನ್ನು ಎತ್ತಬೇಕು ಎಂದು ಎಲ್ಲ ಕಾರ್ಮಿಕರಿಗೆ, ಅವರ ಸಂಘಗಳಿಗೆ, ಒಕ್ಕೂಟಗಳಿಗೆ ಕರೆ ನೀಡಿವೆ.

ವಿವಿಧ ಕಾನೂನುಗಳನ್ನು ಒಟ್ಟು ಸೇರಿಸುವ ತನ್ನ ಆಶಯವನ್ನು ಜುಲೈ 5ರ ಬಜೆಟ್ ಭಾಷಣದ ಭಾಗವಾಗಿ ಸರಕಾರ ತಿಳಿಯಪಡಿಸಿತ್ತು. ಇದು ಸಂವಿಧಾನಬಾಹಿರ ವಿಧಾನ, ಮತ್ತು ಸಂವಿಧಾನದ ಸಮವರ್ತಿ ಪಟ್ಟಿಗೆ ಸೇರಿದ ಈ ವಿಷಯಗಳಲ್ಲಿ ರಾಜ್ಯಗಳ ಅಧಿಕಾರಗಳ ವ್ಯಾಪ್ತಿಯನ್ನು ಉಪೇಕ್ಷಿಸಿದೆ ಎಂದು ಕಾರ್ಮಿಕ ಸಂಘಟನೆಗಳು ಹೇಳಿದ್ದವು.

ಈಗ ಜುಲೈ 23ರಂದು ಸರಕಾರ ‘ವೇತನ ಕುರಿತ ಸಂಹಿತೆ ಮಸೂದೆ 2019’ ಮತ್ತು ವೃತ್ತಿಸಂಬಂಧಿ ಸುರಕ್ಷಿತತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳು ಸಂಹಿತೆ ಮಸೂದೆ 2019ನ್ನು ಲೋಕಸಭೆಯಲ್ಲಿ ಮಂಡಿಸಿದೆ. ಇವೆರಡೂ ಮಸೂದೆಗಳಲ್ಲಿನ ವಿವಿಧ ಅಂಶಗಳು, ಇವು ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುತ್ತವೆ ಮತ್ತು ಅವರ ಹಿತಗಳಿಗೆ ಮಾರಕವಾಗಿವೆ ಎಂದು ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಎತ್ತಿದ ಅಂಶಗಳನ್ನು, ವಿರೋಧ ಮತ್ತು ಭಿನ್ನಾಭಿಪ್ರಾಯಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿವೆ.

ಸರಕಾರದ ದಾವೆಗಳಿಗೆ ತದ್ವಿರುದ್ಧವಾಗಿ ಈ ಸಂಹಿತೆಗಳು ಈ ಕಾನೂನುಗಳ ಅನ್ವಯಕ್ಕೆ ಬೇಕಾದ ಕಾರ್ಮಿಕರ ಕನಿಷ್ಟ ಸಂಖ್ಯೆಯ ಮಟ್ಟವನ್ನೇ ಮೇಲಕ್ಕೇರಿಸಿ ಈಗ ಕಾರ್ಮಿಕರಿಗೆ ಈ ಕಾನೂನುಗಳಿಂದ ಸಿಗುತ್ತಿದ್ದ ಪ್ರಯೋಜನಗಳು ಇನ್ನು ಮುಂದೆ ಸಿಗಲಾರದಂತೆ ಅವರನ್ನು ಕಾನೂನಿನ ರಕ್ಷಣೆಯ ವ್ಯಾಪ್ತಿಯಿಂದಲೆ ಹೊರಹಾಕುವ ಪ್ರಕ್ರಿಯೆಯನ್ನು ಬಲಗೊಳಿಸಿವೆ.

ವೇತನ ಸಂಹಿತೆ 15ನೇ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ) ಒಪ್ಪಿದ ಸೂತ್ರ, ಮತ್ತು ಅದರ 25% ವನ್ನು ಅದಕ್ಕೆ ಸೇರಿಸಬೇಕೆಂಬ ರಪ್ತಕೊಸ್ ಕೇಸಿನಲ್ಲಿ ಸುಪ್ರಿಂ ಕೋರ್ಟಿನ ನಿರ್ದೇಶನವನ್ನು, ನಂತರ ಮತ್ತೆ–ಮತ್ತೆ ಅಂಗೀಕರಿಸಿದ್ದ, ಹಾಗೂ 44ನೇ ಮತ್ತು 45ನೇ ಐಎಲ್‌ಸಿಗಳು ಸರ್ವಸಮ್ಮತಿಯಿಂದ ಸ್ವೀಕರಿಸಿದ್ದ ವಿಧಾನವನ್ನು ನಿರಾಕರಿಸುತ್ತದೆ. ಕೇಂದ್ರ ಸರಕಾರ ಒಂದು ಪರಿಣಿತರ ಸಮಿತಿಯನ್ನು ರಾಷ್ಟ್ರೀಯ ಕನಿಷ್ಟ ಕೂಲಿ ನಿರ್ಧಾರದ ವಿಧಾನವನ್ನು ನಿರ್ಧರಿಸಲೆಂದು ನೇಮಿಸಿತ್ತು. ಇದರಲ್ಲಿ ಯಾವುದೇ ಕಾರ್ಮಿಕ ಸಂಘ ಭಾಗವಹಿಸದಂತೆ ಹೊರಗಿಟ್ಟಿತ್ತು. ಅದು ಈ ಮೇಲಿನ ಶಿಫಾರಸುಗಳ ವಿರುದ್ಧ ಹೋಯಿತು. ಈಗ ಅದೂ ಸಾಲದೆಂಬಂತೆ ಕಾರ್ಮಿಕ ಮಂತ್ರಿಗಳು ಜುಲೈ 10ರಂದು ಮಾಸಿಕ ರೂ.4628 ರಾಷ್ಟ್ರೀಯ ಕನಿಷ್ಟ ಕೂಲಿಯಾಗಿರುತ್ತದೆ ಎಂದು ಪ್ರಕಟಿಸಿದ್ದಾರೆ. 7ನೇ ಕೇಂದ್ರೀಯ ವೇತನ ಆಯೋಗವೇ 1.1.2016 ರಿಂದ ಕನಿಷ್ಟ ಮಾಸಿಕ ವೇತನ ರೂ.18,000 ಎಂದು ಹೇಳಿತ್ತು ಎಂಬ ಸಂಗತಿಯತ್ತ ಕಾರ್ಮಿಕ ಸಂಘಟನೆಗಳು ಗಮನ ಸೆಳೆದಿವೆ.

‘ವೃತ್ತಿಸಂಬಂಧಿ ಸುರಕ್ಷಿತತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳು ಸಂಹಿತೆ ಮಸೂದೆ 2019’ ಈಗಿರುವ 13 ಕಾನೂನುಗಳನ್ನು ತೆಗೆದು ಹಾಕಿ ಅವುಗಳ ಸ್ಥಾನದಲ್ಲಿ ಬರುತ್ತಿದೆ. ಇವು ಹತ್ತು ಕಾರ್ಮಿಕರಿರುವ ಸಂಸ್ಥೆಗಳಿಗೆ ಅನ್ವಯವಾಗುವಂತವು. ಆದರೆ ಈಗ ಅವನ್ನೆಲ್ಲ ತೆಗೆಯುವ ಮೂಲಕ 90%ದಷ್ಟು ಕೆಲಸಗಾರರನ್ನು ಈ ಕಾನೂನುಗಳಿಂದ ಸಿಗುತ್ತಿದ್ದ ಪ್ರಯೋಜನಗಳಿಂದ ಹೊರಹಾಕಲಾಗಿದೆ. ಇವೆಲ್ಲ ಅಸಂಘಟಿತ ಅಥವ ಅನೌಪಚಾರಿಕ ಹೊರಗುತ್ತಿಗೆ, ಗೃಹ ಆಧಾರಿತ ವಲಯಕ್ಕೆ ಸೇರಿದವುಗಳು.

ಇವುಗಳಲ್ಲಿ ಹೆಚ್ಚಿನವು ಕಾರ್ಮಿಕರ ಮತ್ತು ನೌಕರರ ವಿವಿಧ ವಿಭಾಗಗಳ ಸೇವಾಶರತ್ತುಗಳ ನಿಯಂತ್ರಣಕ್ಕೆಂದು ತಂದವುಗಳು– ಮಾರಾಟ ಪ್ರಾಯೋಜನೆ ನೌಕರರು, ಗಣಿಗಳು, ಬೀಡಿ, ಕಟ್ಟಡ ನಿರ್ಮಾಣ, ದುಡಿಯುವ ಪತ್ರಕರ್ತರು ಮತ್ತು ವೃತ್ತಪತ್ರಿಕೆ ನೌಕರರು ಮುಂತಾದವರ ವಿಶಿಷ್ಟ ವೃತ್ತಿ ಸಂಬಂಧಿ ಅಂಶಗಳನ್ನು ಗಮನಕ್ಕೆ ತಗೊಂಡು ರಚಿಸಿದವುಗಳು. ಇವನ್ನೆಲ್ಲ ರದ್ದು ಮಾಡಿ, ಅವುಗಳಲ್ಲಿ ಮಾಲಕರಿಗೆ ಪ್ರಯೋಜನಕಾರಿಯಾದ ಅಂಶಗಳನ್ನಷ್ಟೇ ಹೆಕ್ಕಿಕೊಂಡು ಈ ಸಂಹಿತೆ ಮಸೂದೆಯಲ್ಲಿ ಸೇರಿಸಲಾಗಿದೆ. ಒಟ್ಟಾರೆಯಾಗಿ ಕಾರ್ಮಿಕರ ಹಕ್ಕುಗಳನ್ನು ಮತ್ತು ಅವರಿಗಿರುವ ರಕ್ಷಣೆಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಈ ಮೂಲಕ ಕಾರ್ಮಿಕರ ಹಕ್ಕುಗಳನ್ನು ತೀವ್ರವಾಗಿ ಕಡಿತ ಮಾಡಿ ಸರಕಾರ ‘ಅವರನ್ನು ಅವರ ಕಾರ್ಪೋರೇಟ್ ಯಜಮಾನರುಗಳ ಅತ್ಯಂತ ವಿಧೇಯ ಸೇವಕರನ್ನಾಗಿ ಮಾಡಿದೆ ಎಂದು ಕೇಂದ್ರ ಕಾರ್ಮಿಕ ಸಂಘಗಳು ಆಪಾದಿಸಿವೆ

ಆರೋಗ್ಯ ಮತ್ತು ಸುರಕ್ಷಿತತೆಯ ವಿಷಯಗಳಲ್ಲೂ ಕಾರ್ಮಿಕರು ಮತ್ತು ಅವರ ಸಂಘಗಳು ಅವುಗಳ ಸರಿಯಾದ ಜಾರಿ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ಮತ್ತು ಹಕ್ಕುಗಳನ್ನು ಎತ್ತಿ ಹಿಡಿಯಲು ಸಾಧ್ಯವಾಗದಂತೆ ಮಾಡಲಾಗಿದೆ. ಆರೋಗ್ಯ ಮತ್ತು ಸುರಕ್ಷಿತತೆಯ ಮೂಲ ಅಂಶಗಳನ್ನು ಮಾಲಕರು ಉಲ್ಲಂಘಿಸುವುದು, ಸಾಮಾನ್ಯ ಸಂಗತಿ. ಇದರಿಂದಾಗಿ ಕಾರ್ಮಿಕರು ಗಾಯಗೊಳ್ಳುವುದು, ಸಾವುಗಳೂ ಸಂಭವಿಸಿವೆ. ಆದರೆ ಈ ಸಂಹಿತೆಯ ಇಂತಹ ಉಲ್ಲಂಘನೆಗಳಿಗೆ ಮಾಲಕರನ್ನು ಹೊಣೆಯಾಗಿಸಲು ಸಾಧ್ಯವಾಗದಂತೆ ಮಾಡಲಾಗಿದೆ ಎಂದೂ ಕಾರ್ಮಿಕ ಸಂಘಗಳು ಹೇಳಿವೆ.

ಕಾರ್ಮಿಕರು ಬಹುವಾಗಿ ದ್ವೇಷಿಸಿದ್ದ ಮೋಟಾರು ವಾಹನಗಳ ಮಸೂದೆಯನ್ನು, ಸಾರಿಗೆ ಕಾರ್ಮಿಕರ ಒಕ್ಕೂಟಗಳು 2014ರಿಂದ ಭಾರೀ ಮುಷ್ಕರಗಳ ಮೂಲಕ ವಿರೋಧಿಸಿಕೊಂಡು ಬಂದಿರುವ ಮಸೂದೆಯನ್ನು ಜುಲೈ 23ರಂದು ಕೇಂದ್ರ ಸರಕಾರ ಸಂಸತ್ತಿನಲ್ಲಿ ತನ್ನ ಪಾಶವೀ ಬಹುಮತದ ಮೂಲಕ ಪಾಸು ಮಾಡಿಸಿಕೊಂಡಿದೆ.

ಇದು “ಸಬ್ ಕಾ ಸಾಥ್, ಸಬ್ ಕಾ ವಿಶ್ವಾಸ್ “ಎಂಬಿತ್ಯಾದಿ ಘೋಷಣೆಗಳ ಹೊರತಾಗಿಯೂ ಬಿಜೆಪಿ ಸರಕಾರ ಎಷ್ಟು ಪ್ರಜಾಪ್ರಭುತ್ವ–ವಿರೋಧಿಯಾಗಿ ಕೆಲಸ ಮಾಡುತ್ತದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ ಎಂದು ಕಾರ್ಮಿಕ ‘ಸಂಘಗಳು ಅಭಿಪ್ರಾಯ ಪಟ್ಟಿವೆ.

ಈ ಹಿನ್ನೆಲೆಯಲ್ಲಿ, ಕೇಂದ್ರ ಕಾರ್ಮಿಕ ಸಂಘಟನೆಗಳು ಸರಕಾರದ ಇಂತಹ ಕಾರ್ಮಿಕ–ವಿರೋಧಿ ನಡೆಯನ್ನು ಖಂಡಿಸುತ್ತ, ಆಗಸ್ಟ್ 2, 2019ನ್ನು ಪ್ರತಿಭಟನಾ ದಿನವಾಗಿ ಆಚರಿಸಬೇಕೆಂದು ಕರೆ ನೀಡಿವೆ.

ಈ ಕಾರ್ಮಿಕ–ವಿರೋಧಿ ಶಾಸನಗಳನ್ನು ತ್ರಿಪಕ್ಷೀಯತೆಯನ್ನು ಮತ್ತು ಎಂದಿನ ಶಾಸನಾತ್ಮಕ ವಿಧಾನಗಳನ್ನು ಬದಿಗೆ ತಳ್ಳಿ ಬಲವಂತದಿಂದ ಪಾಸು ಮಾಡಿಸಿಕೊಳ್ಳುವ ಆಳುವ ಪಕ್ಷದ ಪ್ರಜಾಪ್ರಭುತ್ವ–ವಿರೋಧಿ ವಿಧಾನಗಳನ್ನು ವಿರೋಧಿಸಬೇಕು ಎಂದು ಎಲ್ಲ ಸಂಸತ್ ಸದಸ್ಯರಿಗೂ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಎಐಟಿಯುಸಿ, ಸಿಐಟಿಯು, ಐಎನ್‌ಟಿಯುಸಿ, ಹೆಚ್‌ಎಂಎಸ್, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಹಾಗೂ ಹಲವು ಸ್ವತಂತ್ರ ಅಖಿಲ ಭಾರತ ಕಾರ್ಮಿಕ ಮತ್ತು ನೌಕರರ ಸಂಘಟನೆಗಳು ಕರೆ ನೀಡಿವೆ. ●

ಉತ್ತರ ಪ್ರದೇಶದಲ್ಲಿ ಭೂಕಬಳಿಕೆ ಮಾಫಿಯಾದಿಂದ ಆದಿವಾಸಿ ಭೂಹೀನ ರೈತರ ಅಮಾನುಷ ಹತ್ಯಾಕಾಂಡ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾದ ಖಂಡನೆ

ಉತ್ತರಪ್ರದೇಶದ ಸೋನಭದ್ರ ಜಿಲ್ಲೆಯ ಉಭ ಗ್ರಾಮದಲ್ಲಿ ಕ್ರಿಮಿನಲ್ ಭೂಕಬಳಿಕೆ ಮಾಫಿಯಾ ಹತ್ತು ಆದಿವಾಸಿ ಭೂಹೀನ ರೈತರ ಅಮಾನುಷ ಹತ್ಯೆ ನಡೆಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಹತ್ಯೆಯಾದವರಲ್ಲಿ ಮೂವರು ಮಹಿಳೆಯರು. ಈ ಕ್ರಿಮಿನಲ್‌ಗಳು ಉತ್ತರಪ್ರದೇಶ ಸರಕಾರ ಮತ್ತು ಆಡಳಿದ ಬೆಂಬಲದಿಂದ ಈ ಕೃತ್ಯ ಎಸಗಿದ್ದಾರೆ ಎಂದು ತಿಳಿದು ಬಂದಿದೆ.

ಈ ಆದಿವಾಸಿಗಳು ಹಲವು ದಶಕಗಳಿಂದ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಬಂದಿರುವವರು. ಆದರೆ ಯಾವ ಸರಕಾರವೂ ಅವರ ಹಕ್ಕಾಗಿರುವ ಜಮೀನು ಪಟ್ಟಾ ನೀಡಿರಲಿಲ್ಲ. ಆದಿತ್ಯನಾಥ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಸ್ಥಳೀಯ ಭೂಮಾಫಿಯಾ ಅವರು ಸಾಗುವಳಿ ಮಾಡಿಕೊಂಡು ಬಂದಿರುವ ಜಮೀನಿನಲ್ಲಿ ಉಳುಮೆ ಮಾಡಬಾರದು ಎಂದು ಬೆದರಿಸಿದ್ದಾರೆ. ಆದಿವಾಸಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಕೊಟ್ಟಿದ್ದರೂ, ಸರಕಾರ ಮತ್ತು ಆಡಳಿತ ಕ್ರಮ ಕೈಗೊಳ್ಳಲು ನಿರಾಕರಿಸಿದ್ದವು.

ಆದಿತ್ಯನಾಥ ಸರಕಾರ ಬೇರೆಯವರ ಮೇಲೆ ಜವಾಬ್ದಾರಿ ಹಾಕಲು ಪ್ರಯತ್ನಿಸುತ್ತಿದೆ. ಆದರೆ ಗ್ರಾಮ ಪ್ರಧಾನನ ನೇತೃತ್ವದಲ್ಲಿ ಭೂಮಾಫಿಯಾ ಆ ಜಮೀನನ್ನು “ಖರೀದಿಸಿದ್ದೇವೆ’ ಎಂದು ಹೇಳಿಕೊಂಡು ಆದಿವಾಸಿಗಳ ಮೇಲೆ ಭಯೋತ್ಪಾದನೆಯನ್ನು ಹರಿಯ ಬಿಟ್ಟಿರುವುದು ಈ ಸರಕಾರದ ಆಳ್ವಿಕೆಯಲ್ಲಿಯೇ. ಗಾಯಗೊಂಡವರಿಗೆ ನೆರವಾಗಲು ಈ ಸರಕಾರ ಒಂದೇ ಒಂದು ರೂಪಾಯಿ ಕೊಟ್ಟಿಲ್ಲ, ಬದಲಾಗಿ ಕೆಲವರನ್ನು ಬಲವಂತದಿಂದ ಆಸ್ಪತ್ರೆಯಿಂದ ಮನೆಗೆ ಕಳಿಸಲಾಗಿದೆ ಎಂಬುದು ಅತ್ಯಂತ ಖಂಡನೀಯ ಎಂದು ಸಿಪಿಐ(ಎಂ) ಹೇಳಿದೆ.

ಉತ್ತರಪ್ರದೇಶ ಸರಕಾರ ಸಂತ್ರಸ್ತರನ್ನು ಭೇಟಿಯಾಗಲು ಗ್ರಾಮಕ್ಕೆ ಪ್ರವೇಶಿಸದಂತೆ ತಡೆದಿರುವುದೂ ಖಂಡನೀಯ. ಆದರೂ ಇದನ್ನು ಬೇಧಿಸಿ ಸಿಪಿಐ(ಎಂ) ನಿಯೋಗವೊಂದು ಜುಲೈ 19ರಂದು ಸಂತ್ರಸ್ತ ಕುಟುಂಬಗಳನ್ನು ಭೇಟಿಯಾಗಿದೆ. ಹೀಗೆ ಭೇಟಿ ಮಾಡಿದ ಮೊದಲ ನಿಯೋಗವಿದು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯ ಹೀರಾಲಾಲ್ ಯಾದವ್ ನೇತೃತ್ವದ ಆರು ಸದಸ್ಯರ ನಿಯೋಗದಲ್ಲಿ ಇದ್ದ ಇತರರೆಂದರೆ ದೀನಾನಾಥ ಯಾದವ್, ಅನೂಪ್ ಪ್ರತಾಪ್ ಸಿಂಗ್, ಬಚ್ಚಾಲಾಲ್, ಅರವಿಂದ್ ವಕೀಲ್, ಅನಿಲ್ ಕುಮಾರ್ ಸಿಂಗ್. ಸಂತ್ರಸ್ತ ಕುಟುಂಬಗಳು ತಿಳಿಸಿರುವ ಸಂಗತಿಗಳು ಬೆಚ್ಚಿ ಬೀಳಿಸುವಂತವು. ಆದಿವಾಸಿಗಳು ಉಳುಮೆಯಲ್ಲಿ ತೊಡಗಿದ್ದಾಗ ತುಂಬಿದ್ದ ಟ್ರಕ್‌ನಲ್ಲಿ ಬಂದ ಸಶಸ್ತ್ರ ಮಂದಿ ಯಜ್ಞದತ್ ಎಂಬಾತನ ನೇತೃತ್ವದಲ್ಲಿ ಮೃತ್ಯುಕಾಂಡ ನಡೆಸಿದರು.

ಜಮೀನು ಪಟ್ಟಾ ಕೊಡಿ ಎಂದು ಎಷ್ಟೊಂದು ಬಾರಿ ಆಡಳಿತವನ್ನು ಅಂಗಲಾಚಿದ್ದೆವು ಎಂಬುದನ್ನೂ ಕುಟುಂಬದವರು ವಿವರಿಸಿದರು. ಈ ಹಿಂದೆ 1955ರಲ್ಲಿ ಬಲಿಷ್ಟ ಭೂಮಾಲಕರು ಒಬ್ಬ ಸಿನ್ಹ ಎಂಬಾತನ ನೇತೃತ್ವದಲ್ಲಿ ಈ ಜಮೀನನ್ನು ವಶಪಡಿಸಿಕೊಂಡಿದ್ದರು. ಆದರ್ಶ ಟ್ರಸ್ಟ್ ಎಂಬುದನ್ನು ರಚಿಸಿದರು. ಆ ಟ್ರಸ್ಟ್‌ಗೆ ಅಂದಿನಿಂದ ಈ ಆದಿವಾಸಿ ಜನಗಳು ವಾರ್ಷಿಕ ಗೇಣಿ ಕಟ್ಟಿಕೊಂಡು ಬರುತ್ತಿದ್ದಾರೆ. ಭೂಮಿಯನ್ನು ಮಾರುವುದಿಲ್ಲ ಎಂಬ ಆಶ್ವಾಸನೆ ಮೇಲೆ ಇತ್ತೀಚೆಗೆ ಅವರು ತೆತ್ತಿರುವ ವಾರ್ಷಿಕ ಗೇಣಿ ಒಂದು ಬೀಘಾ ಜಮೀನಿಗೆ 500 ರೂ. 2017 ರಲ್ಲಷ್ಟೇ ಈ ಜಮೀನನ್ನು ಯಜ್ಞದತ್ತನಿಗೆ ಆಡಳಿತದ ನೆರವಿನಿಂದ ಮಾರಿರುವಂತೆ ಕಾಣುತ್ತದೆ. ಇದು ನಡೆದಿರುವುದು ಬಿಜೆಪಿ ಸರಕಾರದ ಆಳ್ವಿಕೆಯಲ್ಲಿ.

ಭೂಮಾಫಿಯಾವನ್ನು ರಕ್ಷಿಸಲು ಮತ್ತು ಆದಿವಾಸಿಗಳಿಗೆ ಜಮೀನು ಪಟ್ಟಾವನ್ನು ಕೊಡದಿರಲು ಪ್ರಸಕ್ತ ಆಳ್ವಿಕೆಯೇ ಹೊಣೆ ಎಂದಿರುವ ಸಿಪಿಐ(ಎಂ), ಏಳು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಜಮೀನಿನ ಸಾಗುವಳಿ ಮಾಡಿಕೊಂಡು ಬಂದಿರುವ ಆದಿವಾಸಿ ಕುಟುಂಬಗಳಿಗೆ ತಕ್ಷಣವೇ ಜಮೀನು ಪಟ್ಟಾ ನೀಡಬೇಕು ಎಂದು ಆಗ್ರಹಿಸಿದೆ. ಈ ಅಮಾನುಷ ಹತ್ಯಾಕಾಂಡದಲ್ಲಿ ಭಾಗಿಯಾದ ಎಲ್ಲರನ್ನೂ ತಕ್ಷಣವೇ ಬಂಧಿಸಿ ಕಠಿಣತಮ ಶಿಕ್ಷೆಯನ್ನು ವಿಧಿಸಬೇಕು ಮತ್ತು ಅವರೊಂದಿಗೆ ಶಾಮೀಲಾದ ಆಡಳಿತದ ಅಧಿಕಾರಿಗಳನ್ನು ಹಾಗೂ ಪೋಲೀಸರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದೂ, ಹತ್ಯೆಯಾದವರು ಮತ್ತು ಗಾಯಗೊಂಡ ಕುಟುಂಬಗಳಿಗೆ ತಕ್ಷಣವೇ ಪರಿಹಾರ ಒದಗಿಸಬೇಕು ಮತ್ತು ತಮ್ಮ ಜೀವನಾಧಾರದಿಂದ ವಂಚಿಸಲ್ಪಟ್ಟಿರುವ ಕುಟುಂಬಗಳಿಗೆ ಪುಕ್ಕಟೆ ರೇಶನ್ ಲಭ್ಯವಾಗುವಂತೆ ಮಾಡಬೇಕು ಎಂದೂ ಸಿಪಿಐ(ಎಂ) ಆಗ್ರಹಿಸಿದೆ.

ಮುಗ್ಧ ಆದಿವಾಸಿಗಳ ಹತ್ಯೆ–ಎ.ಎ.ಆರ್.ಎಂ. ಖಂಡನೆ

ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ (ಎ.ಎ.ಆರ್.ಎಂ.) ಆದಿವಾಸಿಗಳ ಹತ್ಯೆಯನ್ನು ಬಲವಾಗಿ ಖಂಡಿಸಿದೆ. ಈ ಬರ್ಬರ ಕೊಲೆಗಳಿಗೆ ಉತ್ತರಪ್ರದೇಶ ಸರಕಾರ ಹೊಣೆ ಎಂದು ಅದು ಹೇಳಿದೆ. ಈ ಆದಿವಾಸಿ ಜನಗಳು ಹಲವಾರು ವರ್ಷಗಳಿಂದ ಅಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದು ಗೊತ್ತಿದ್ದರೂ, ಆ ಭೂಮಿಯ ಮತ್ತು ಸಾಗುವಳಿಯ ಹಕ್ಕುಗಳನ್ನು ದಯಪಾಲಿಸಿ ಎಂದು ಅವರು ಮತ್ತೆ–ಮತ್ತೆ ಕೇಳಿಕೊಳ್ಳುತ್ತಿದ್ದರೂ ಸರಕಾರ ಅದನ್ನು ಕೊಡದಿರುವ ಫಲಿತಾಂಶ ಇದು ಎಂದಿರುವ ಎ.ಎ.ಆರ್.ಎಂ. ಇದರ ವಿರುದ್ಧ ಪ್ರತಿಭಟನಾ ಕಾರ್ಯಕ್ರಮಗಳನ್ನು ಸಂಘಟಿಸಬೇಕು ಎಂದು ತನ್ನ ಎಲ್ಲ ರಾಜ್ಯ ಘಟಕಗಳಿಗೆ ಹಾಗೂ ಆದಿವಾಸಿ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವ ಸಂಘಟನೆಗಳಿಗೆ ಕರೆ ನೀಡಿದೆ.

ಭೂಮಾಫಿಯಾಗಳಿಗೆ ಉ.ಪ್ರ.ಆಡಳಿತದ ಬೆಂಬಲವನ್ನು ಬಯಲಿಗೆಳೆಯಿರಿ–ಎಐಎಡಬ್ಲ್ಯುಯು ಕರೆ

ಈ ಅಮಾನುಷ ಹತ್ಯಾಕಾಂಡವನ್ನು ಬಲವಾಗಿ ಖಂಡಿಸಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಉತ್ತರಪ್ರದೇಶ ಸರಕಾರ 70 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಆದಿವಾಸಿ ರೈತರಿಗೆ ಭೂಮಿ ಹಕ್ಕುಗಳು ಸಿಗದಂತೆ ನೋಡಿಕೊಂಡಿದೆ ಮಾತ್ರವಲ್ಲ, ಗ್ರಾಮ ಪ್ರಧಾನ ಯಜ್ಞದತ್ತ ಆ ಭೂಮಿ ತನ್ನದು ಎಂದು ಮೋಸದ ದಾವೆ ಹಾಕಲು ಬೆಂಬಲ ನೀಡಿರುವುದು ಕಂಡು ಬಂದಿದೆ ಎಂದು ಹೇಳಿದೆ.

ಈ ಭೂಮಿ ಮತ್ತು ಸಾಗುವಳಿ ಹಕ್ಕು ಪಡೆಯುವ ಆದಿವಾಸಿಗಳ ಹೋರಾಟದಲ್ಲಿ ಎಐಎಡಬ್ಲ್ಯುಯು ನ ಸ್ಥಳೀಯ ಘಟಕ ವರ್ಷಗಳಿಂದ ಸಕ್ರಿಯವಾಗಿದೆ. ಈ ಹೋರಾಟದಲ್ಲಿ ಈಗಲೂ ಈ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಶಾಂತಿ ಪ್ರಕಾಶ್ ಜಾಮೀನು ಸಿಗದೆ ಒಂದು ವರ್ಷದಿಂದ ಜೈಲಿನಲ್ಲಿದ್ದಾರೆ. ಈ ಮೊದಲು ಈ ಹೋರಾಟದಲ್ಲಿ ವಹಿಸಿದ ಪಾತ್ರಕ್ಕಾಗಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ರಾಮ್ ಅಧರ್ ಸಿಂಗ್ ಕೊಲೆಯೂ ಆಗಿದೆ.

ಈಗಾಗಲೇ ವರದಿಯಾಗಿರುವಂತೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹೀರಾಲಾಲ್ ಯಾದವ್ ನೇತೃತ್ವದ ನಿಯೋಗ ಹಲವಾರು ಪೋಲಿಸ್ ಬ್ಲಾಕೇಡುಗಳಿಂದ ತಪ್ಪಿಸಿಕೊಂಡು ಈ ಗ್ರಾಮವನ್ನು ತಲುಪಿದ ಮೊದಲ ನಿಯೋಗವಾಗಿದೆ. ಈ ನಿಯೋಗ ಸಂತ್ರಸ್ತ ಕುಟುಂಬಗಳ ಸದಸ್ಯರನ್ನು ಭೇಟಿ ಮಾಡಿ ನಿಜಸಂಗತಿಗಳನ್ನು ಕಲೆ ಹಾಕಿದೆ.

ಅಮಾಯಕ ಆದಿವಾಸಿಗಳ ಸಾವಿಗೆ ಶ್ರದ್ಧಾಂಜಲಿ ಅರ್ಪಿಸಲು ಮತ್ತು ಉತ್ತರಪ್ರದೇಶದಲ್ಲಿ ಕಾನೂನು–ವ್ಯವಸ್ಥೆ ಮುರಿದು ಬಿದ್ದಿದ್ದು ಭೂಮಾಫಿಯಾಗಳಿಗೆ ರಾಕ್ಯ ಆಡಳಿತ ಮತ್ತು ಪೋಲಿಸಿನ ಬೆಂಬಲವನ್ನು ಬಯಲಿಗೆಳೆಯಲು ತಕ್ಷಣವೇ ಒಂದು ಹೋರಾಟದ ದಿನವನ್ನು ಆಚರಿಸಬೇಕು ಎಂದು ಎಐಎಡಬ್ಲ್ಯುಯು ತನ್ನ ಘಟಕಗಳಿಗೆ ಕರೆ ನೀಡಿದೆ.

ಸಂಪಾದಕೀಯ

ಕುದುರೆ ವ್ಯಾಪಾರಿಯೊಬ್ಬರ ಮರು ಪಟ್ಟಾಭಿಷೇಕ

ರಾಜ್ಯದಲ್ಲಿ ಮತೀಯ ಶಕ್ತಿಗಳನ್ನು ಅಧಿಕಾರದಿಂದ ದೂರ ಇಡುವ ಪ್ರಯತ್ನ ಕೆಲವರ ಹಣದಾಹ ಮತ್ತು ಅಧಿಕಾರದಾಹಕ್ಕೆ ಬಲಿಯಾಗಿ ಇನ್ನೊಂದು ಸೋಲು ಅನುಭವಿಸುವಂತಾಗಿದೆ. ಸುಮಾರು 14 ತಿಂಗಳ ಈ ಮೈತ್ರಿ ಸರ್ಕಾರದ ಪ್ರಯೋಗ ರಾಜ್ಯದ ಚರಿತ್ರೆಯಲ್ಲಿ ಒಂದು ಗಮನಾರ್ಹ ಬೆಳವಣಿಗೆಯಾಗಿತ್ತು. ಪರಸ್ಪರ ಶತ್ರುಗಳಂತಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ರಾಜ್ಯವನ್ನು, ಕೋಮು ದ್ವೇಷದಿಂದ ಮುಕ್ತಗೊಳಿಸಲು ನಡೆಸಿದ ಪ್ರಯತ್ನ ಸಣ್ಣ ಸಾಧನೆಯಲ್ಲ. ಆದರೆ ಎಲ್ಲರ ಪ್ರಜ್ಞೆ ಒಂದೇ ತೆರನಾಗಿ ಇರುವುದಿಲ್ಲ. ಕೋಮುವಾದದ ಅಪಾಯವನ್ನು ಮನಗಾಣದ ಜನರೇ ಬಹುಸಂಖ್ಯಾತರಾಗಿದ್ದಾರೆ. ಅಂತವರು ಕಾಂಗ್ರೆಸ್‌ನಲ್ಲಿಯೂ ಇದ್ದಾರೆ, ಜೆಡಿಎಸ್ ಪಕ್ಷದಲ್ಲಿಯೂ ಇದ್ದಾರೆ. ಆದರಿಂದಲೇ ಅವರಿಗೆ, ಕಾಂಗ್ರೆಸ್ ಜೆಡಿಎಸ್ ಮೈತ್ರಿ ಸರ್ಕಾರದ ಮಹತ್ವ ಅರ್ಥವಾಗಲೇ ಇಲ್ಲ. ಅವರು ತಮ್ಮನ್ನು ಹಣಕ್ಕಾಗಿ ಮಾರಿಕೊಳ್ಳಲು ಮುಂದಾದರು. ಮಂತ್ರಿಗಿರಿಗಾಗಿ ಪಕ್ಷಾಂತರ ಮಾಡಲು ಆತುರಪಟ್ಟರು. ಇದರೊಂದಿಗೆ ಒಂದು ಐತಿಹಾಸಿಕ ಪ್ರಯೋಗ ವಿಫಲವಾಯಿತು.

ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪರವರ ನೇತೃತ್ವದಲ್ಲಿ ಅಧಿಕಾರವಹಿಸಿಕೊಂಡಿರುವ ಸರ್ಕಾರ ಒಂದು ದುರ್ಬಲ ಸರ್ಕಾರ ಆಗಲಿದೆ. ಬಿಜೆಪಿ ನೆರವನ್ನು ನಂಬಿಕೊಂಡು ಶಾಸಕ ಸ್ಥಾನಗಳಿಗೆ ರಾಜಿನಾಮೆ ಕೊಟ್ಟಿರುವ 15 ಮಂದಿ ಕಾಂಗ್ರೆಸ್–ಜೆಡಿಎಸ್ ಶಾಸಕರ ಪ್ರಶ್ನೆ ಇನ್ನೂ ಇತ್ಯರ್ಥ ಆಗಬೇಕಷ್ಟೇ. ಹೀಗಾಗಿ ಯಡಿಯೂರಪ್ಪ ಸರ್ಕಾರಕ್ಕೆ ವಿಧಾನ ಸಭೆಯಲ್ಲಿ ಅಗತ್ಯ ಬಹುಮತವಿಲ್ಲ. ಈ ಸರ್ಕಾರದ ಆಯುಷ್ಯ ಪ್ರಶ್ನಾರ್ಹವಾಗಿದೆ. ಅನಿಶ್ಚಿತತೆ ಈ ಸರ್ಕಾರವನ್ನು ಮೊದಲ ದಿನದಿಂದಲೇ ಕಾಡದೆ ಇರಲಾರದು. ಇಂತಹ ಪರಿಸ್ಥಿತಿಯಲ್ಲಿ ಈ ಸರ್ಕಾರಕ್ಕೆ ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗಲಾರದು. ಮುಗ್ದ ಜನತೆಯ ಮನಸುಗಳಲ್ಲಿ ಬಿತ್ತಲಾದ ಭ್ರಮೆಗಳು ಬಹು ಬೇಗನೆ ಕಮರಿ ಹೋಗದೆ ಇರಲಾರವು.

ಕಾಂಗ್ರೆಸ್–ಜೆಡಿಎಸ್ ಪಕ್ಷಗಳ ಕೆಲ ಶಾಸಕರ ಅತೃಪ್ತಿಯ ಲಾಭ ಪಡೆದು ಅವರನ್ನು ಅವರ ಮೂಲ ಪಕ್ಷದಿಂದ ಹೊರಬರುವಂತೆ ಮಾಡಿ ಸಮ್ಮಿಶ್ರ ಸರ್ಕಾರವನ್ನು ಉರುಳಿಸುಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಈ ಪರಿಸ್ಥಿತಿ ನಾಳೆ ಬಿಜೆಪಿಗೂ ಬರದಿರಲಾರದು. ಎಲ್ಲ ಶಾಸಕರಿಗೂ ಮಂತ್ರಿ ಪದವಿಗಳನ್ನು ನೀಡಲಾಗದು. ಆ ಕಾರಣಕ್ಕಾಗಿ ಬಿಜೆಪಿ ಶಾಸಕರಿಗೂ, ಬಿಜೆಪಿಗೆ ಹೊರಗಿನಿಂದ ಬಂದ ಶಾಸಕರಿಗೂ ಅತೃಪ್ತಿ, ಅಸಮಾಧಾನ ಉಂಟಾಗಬಹುದು. ಆಗ ಈ ಬೆಳವಣಿಗೆಯೇ ತಿರುಗುಬಾಣ ಆಗದೆ ಇರಲಾರದು.

ಅತೃಪ್ತ ಶಾಸಕರನ್ನು ಸೆಳೆಯಲು ಬಾರೀ ಪ್ರಮಾಣದ ಹಣದ ಹಸ್ತಾಂತರವಾಗಿದೆ ಎಂಬುದು ಗುಟ್ಟಾಗಿ ಉಳಿದಿರುವ ವಿಷಯವಲ್ಲ. ವಿಧಾನ ಸಭೆಯ ಅಧಿವೇಶನದಲ್ಲೇ ಅದರ ಬಹಿರಂಗ ಪ್ರಸ್ತಾವ ಆಗಿದೆ. ಈ ಕೀಳು ಮಟ್ಟದ ಆಪರೇಷನ್ ಕಮಲ ಎಂಬ ವಿದ್ಯಮಾನವನ್ನು ಬೆಳೆಸಿದವರೇ ಬಿಜೆಪಿಯವರು. ಪ್ರಸಕ್ತ ಪ್ರಕರಣದಲ್ಲಿ, ಒಬ್ಬೊಬ್ಬ ಶಾಸಕರನ್ನು ಖರೀದಿಸಲು ಕೋಟ್ಯಾಂತರ ರೂಪಾಯಿಗಳನ್ನು ಅನೇಕ ತಿಂಗಳುಗಳು ಮೊದಲೇ ಕೊಟ್ಟು ಸಾಮೂಹಿಕ ಪಕ್ಷಾಂತರಕ್ಕೆ ಯೋಜನೆ ರೂಪಿಸಲಾಗಿತ್ತು ಎನ್ನಲಾಗುತ್ತಿದೆ. ಹೀಗಾಗಿ ರಾಜ್ಯದ ರಾಜಕೀಯವನ್ನು ಇಷ್ಟೊಂದು ಮಲಿನಗೊಳಿಸಿದ ಕೀರ್ತಿ ಯಡಿಯೂರಪ್ಪ ಪಕ್ಷಕ್ಕೆ ಸಲ್ಲುತ್ತದೆ.

ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಲ್ಲಿಯೂ ಕಪ್ಪು ಹಣದ ಖದೀಮರು ಇದ್ದಾರೆ ಅಂತವರು ಕೇವಲ ಬಿಜೆಪಿ ಪಕ್ಷದಲ್ಲಿ ಮಾತ್ರ ಇದ್ದಾರೆ. ಎಂದು ಹೇಳಲು ಸಾಧ್ಯವಿಲ್ಲ. ಈ ಎಲ್ಲ ಪಕ್ಷಗಳ ರಾಜಕಾರಣಕ್ಕೂ ಕಪ್ಪು ಹಣದ ಭೂಗತ ವ್ಯವಹಾರಗಳಿಗೂ ಅವಿಭಾಜ್ಯ ಸಂಬಂಧವಿದೆ. ಇವರು ಚುನಾವಣೆಗಳಲ್ಲಿ ಮತಗಳನ್ನು ಗಳಿಸಲು ಹಾಗೂ ಚುನಾಯಿತರಾದವರನ್ನು ಪಶುಪ್ರಾಣಿಗಳ ಮಾದರಿಯಲ್ಲಿ ಖರೀದಿ ಮಾಡಲು ಹರಿಸುತ್ತಿರುವ ಹಣದ ಹೊಳೆಯೇ ಇದಕ್ಕೆ ಸಾಕ್ಷಿ.

ರಾಜಕೀಯ ಲಾಭಕ್ಕಾಗಿ ಸಂವಿಧಾನಾತ್ಮಕ ಸಂಸ್ಥೆಗಳನ್ನು ದುರ್ಬಳಕೆ ಮಾಡುವುದರಲ್ಲಿಯೂ ಬಿಜೆಪಿಯದು ಎತ್ತಿದ ಕೈ. ಈ ಸಲವೂ ಕರ್ನಾಟಕದಲ್ಲಿ ಅಧಿಕಾರ ಗಿಟ್ಟಿಸಿಕೊಳ್ಳಲು ರಾಜ್ಯಪಾಲರನ್ನು, ರಾಜ್ಯಪಾಲರ ಕಾರ್ಯಾಲಯವನ್ನು ದುರ್ಬಳಕೆ ಮಾಡಲಾಯಿತು. ರಾಜ್ಯಪಾಲರು ಸಹ ಕೇಂದ್ರ ಬಿಜೆಪಿ ಸರ್ಕಾರದ ವಿಧೇಯ ಪರಿಪಾಲಕನಂತೆ ಕೆಲಸ ಮಾಡಿದರು. ಅಧ್ಯಕ್ಷ ಅಮಿತ್ ಷಾ ದೆಹಲಿಯಿಂದ ಫೋನ್ ಕರೆಯ ಮೂಲಕ ಆದೇಶ ನೀಡಿದ ತಕ್ಷಣ ರಾಜ್ಯಪಾಲರು ಆದೇಶ ಪರಿಪಾಲನೆಗೆ ಸಜ್ಜಾದರು. ಷಾ ಆದೇಶದಂತೆ ರಾಜ್ಯಪಾಲರನ್ನು ಕಾಣಲು ಯಡಿಯೂರಪ್ಪ ಆಗಮಿಸಿದಾಗ ಯಾವ ಪ್ರಶ್ನೆಯನ್ನು ಕೇಳದೆ, ಒಂದು ನಿಮಿಷ ತಡ ಮಾಡದೆ ಯಡಿಯೂರಪ್ಪನವರಿಗೆ ಪ್ರಮಾಣ ವಚನ ಸ್ವೀಕರಿಸಲು ಅನುಮತಿ ನೀಡಿದರು.

ಇಂದು ಕೇಂದ್ರದಲ್ಲಿಯೂ ರಾಜ್ಯದಲ್ಲಿಯೂ ಬಿಜೆಪಿ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂದಿರುವುದು ಅಂತ್ಯಂತ ಆತಂಕದ ವಿಷಯವಾಗಿದೆ. ಬಿಜೆಪಿ ಪಕ್ಷದ ಆರ್ಥಿಕ ಧೋರಣೆಗಳು ಕಾರ್ಪೋರೇಟ್ ಕಂಪನಿಗಳ ಪರವಾಗಿವೆ. ಮೋದಿ ಸರ್ಕಾರ ಉದಾರೀಕರಣ ನೀತಿಗಳ ಪರವಾಗಿದೆ. ಈ ಕಾರಣದಿಂದಲೇ ಮುಂದಿನ ದಿನಗಳಲ್ಲಿ ರೈತರ, ಕಾರ್ಮಿಕರ, ಜನಸಾಮಾನ್ಯರ ಸಮಸ್ಯೆಗಳು ತೀವ್ರಗೊಳ್ಳಲಿವೆ. ಜನರ ಅತೃಪ್ತಿ ಸ್ಫೋಟಗೊಳ್ಳುವುದನ್ನು ತಡೆಯಲು ಬಿಜೆಪಿ ಮತೀಯ ದ್ವೇಷವನ್ನು ಹರಡಿಸುವುದು. ಈ ಅಪಾಯವನ್ನು ರಾಜ್ಯದ ಜನತೆ ಹಾಗೂ ಬಿಜೆಪಿಯೇತರ ರಾಜಕೀಯ ಪಕ್ಷಗಳು ಅರ್ಥಮಾಡಿಕೊಳ್ಳುವುದು ಅತ್ಯಗತ್ಯವಾಗಿದೆ.

ಮತ್ತೊಮ್ಮೆ ಬಿಜೆಪಿಯಿಂದ ಅಧಿಕಾರ ದುರುಪಯೋಗ ಮತ್ತು ಅಕ್ರಮಗಳ ಮೂಲಕ ಸರಕಾರ ರಚನೆ – ಸಿಪಿಐ(ಎಂ) ಖಂಡನೆ

26 ಜುಲೈ 2019, ಪತ್ರಿಕಾ ಹೇಳಿಕೆ

ರಾಜ್ಯಪಾಲರು ಮತ್ತು ಅವರ ಕಚೇರಿ ಹಾಗೂ ಕೇಂದ್ರ ಸರಕಾರದ ಅಧಿಕಾರವನ್ನು ಬಿಜೆಪಿ ಮತ್ತೊಮ್ಮೆ ದುರುಪಯೋಗ ಪಡಿಸಿಕೊಂಡು ಬಹುಮತದ ಸಂಖ್ಯೆಯನ್ನು ಹೊಂದಿರದ ಶ್ರೀ ಯಡಿಯೂರಪ್ಪ ರವರನ್ನು ಮುಖ್ಯಮಂತ್ರಿ ಮಾಡಲು ಮುಂದಾಗಿದೆ.

ನಿರಂತರವಾಗಿ ಬಿಜೆಪಿ ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಲೇ ಅಕ್ರಮವಾಗಿ ಅಧಿಕಾರ ಹಿಡಿಯಲು ಮುಂದಾಗುತ್ತಿರುವುದು ತೀವ್ರ ಪ್ರಜಾಪ್ರಭುತ್ವದ ಉಲ್ಲಂಘನೆಯಾಗಿದೆ.

ರಾಜ್ಯಪಾಲರು ಶ್ರೀ ಯಡಿಯೂರಪ್ಪನವರು ಅಗತ್ಯ ಬಹುಮತದ ಸಂಖ್ಯಾಬಲವನ್ನು ಹೊಂದಿಲ್ಲವೆಂಬುದು ತಿಳಿದಿದ್ದರೂ ಅವರನ್ನು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಕರೆನೀಡಿರುವುದು ಅಕ್ಷಮ್ಯವಾಗಿದೆ.

ನಿನ್ನೆ ದಿನ ಸ್ಪೀಕರ್ ರವರು ಮೂವ್ವರು ಶಾಸಕರನ್ನು ಅನರ್ಹರೆಂದು ಪ್ರಕಟಣೆ ಮಾಡಿದ್ದಾರೆ. ಇದರಿಂದಾಗಿ, ವಿಧಾನ ಸಭೆಯ ಒಟ್ಟು ಸದಸ್ಯತ್ವ ಸಂಖ್ಯೆ 222 ಆಗಿದೆ. ಅದರಂತೆ ಬಹುಮತದ ಮ್ಯಾಜಿಕ್ ನಂಬರ್ 112 ಅಗುತ್ತದೆ. ಆದರೆ ಯಡಿಯೂರಪ್ಪನವರ ಹತ್ತಿರವಿರುವುದು ಕೇವಲ 105 ಮಾತ್ರವೇ ಆಗಿದೆ. ಪರಿಸ್ಥಿತಿ ಹೀಗಿರುವಾಗ ಬಹುಮತಸಾಬೀತುಗೊಳಿಸಲು ಯಡಿಯೂರಪ್ಪನವರಿಗೆ ಒಂದು ವಾರ ಸಮಯಾವಕಾಶವನ್ನು ರಾಜ್ಯಪಾಲರು ನೀಡಿದ್ದಾರೆ.

ಇದೇ ರಾಜ್ಯಪಾಲರು ಶ್ರೀ ಕುಮಾರ ಸ್ವಾಮಿಯವರು ಮಂಡಿಸಿದ ವಿಶ್ವಾಸಮತಕ್ಕೆ ಬೇಗನೇ ಮುಗಿಸುವಂತೆ ಒತ್ತಡ ಹೇರಿ ತಾರತಮ್ಯ ಎಸಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಯಡೆಯೂರಪ್ಪನವರ ಹತ್ತಿರ ಬಹುಮತದ ಸಂಖ್ಯಾಬಲ ವಿಲ್ಲದಿರುವಾಗ ಎಲ್ಲಿಂದ ಆ ಸಂಖ್ಯೆಯನ್ನು ತೋರಿಸುವರು ಎಂಬುದು ಯಕ್ಷ ಪ್ರಶ್ನೆಯಾಗಿದೆ. ಶ್ರೀ ಯಡೆಯೂರಪ್ಪನವರು ಮತ್ತು ಬಿಜೆಪಿ ಬಹುಮತ ಸಾಬೀತು ಪಡಿಸಲು ಮತ್ತೊಂದು ಅಕ್ರಮ ದಲ್ಲಿ ತೊಡಗಲೇ ಬೇಕಾಗಿದೆ.

ಇದರಷ್ಟು ಲಜ್ಜೆಗೇಡಿ ಪಕ್ಷ ಮತ್ತೊಂದಿರಲಾರದು. ರಾಜ್ಯದ ಜನತೆ ಬಿಜೆಪಿಯ ಈ ಲಜ್ಜೆಗೇಡಿ ನಡೆಯನ್ನು ತೀವ್ರವಾಗಿ ಖಂಡಿಸಿ ಪ್ರತಿರೋಧಿಸಲು ಸಿಪಿಐಎಂ ಕರೆನೀಡಿದೆ.

ಶಾಸಕರ ಅನರ್ಹಗೊಳಿಸಿದ ಸ್ಪೀಕರ್ ಕ್ರಮ – ಸಿಪಿಐಎಂ ಸ್ವಾಗತ

ನಿನ್ನೆ ಸಂಜೆ ಪತ್ರಿಕಾ ಗೋಷ್ಠಿಯಲ್ಲಿ ಮೂವರು ಶಾಸಕರನ್ನು ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹ ಗೊಳಿಸಿದ ಸ್ಪೀಕರ್ ಶ್ರೀ ರಮೇಶ್ ಕುಮಾರ್ ರವರ ಕ್ರಮವನ್ನು ಸಿಪಿಐಎಂ. ರಾಜ್ಯ ಸಮಿತಿ ಸ್ವಾಗತಿಸುತ್ತದೆ.

ಪ್ರಜಾಪ್ರಭುತ್ವ ವಿರೋಧಿಯಾದ ಪಕ್ಷಾಂತರವನ್ನು ತಡೆದು ಪ್ರಜಾಸತ್ತೆಯನ್ನು ಬಲ ಪಡಿಸಲು ಇಂತಹ ಕ್ರಮಗಳು ಅಗತ್ಯವಾಗಿವೆ

ಯು. ಬಸವರಾಜ
ಕಾರ್ಯದರ್ಶಿ

ಎಪಿಎಂಸಿ ಹಮಾಲಿ ಕಾರ್ಮಿಕರ ಸಂಘದ ಪದಾಧಿಕಾರಿಗಳ ಆಯ್ಕೆ

ಹುಬ್ಬಳ್ಳಿ ಎಪಿಎಂಸಿ ಹಮಾಲಿ ಕಾರ್ಮಿಕರ (ಈರುಳ್ಳಿ ವಿಭಾಗ) ಸಂಘದ ಸರ್ವ ಸದಸ್ಯರ ಸಭೆ 24 ಜುಲೈ 2019 ರಂದು ಇಲ್ಲಿಯ ಎಪಿಎಂಸಿ ಆವರಣದಲ್ಲಿ ಹಿರಿಯ ಮುಖಂಡರಾದ ಇಮಾಮಸಾಬ ದುಂಡಸಿ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದು ಸಂಘದ ನೂತನ ಪದಾಧಿಕಾರಿಗಳನ್ನು ಸಭೆ ಸರ್ವಾನುಮತದಿಂದ ಆಯ್ಕೆ ಮಾಡಿತು.

ಅಧ್ಯಕ್ಷರಾಗಿ ಗುರುಸಿದ್ದಪ್ಪ ಅಂಬಿಗೇರ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಮಂಜುನಾಥ ಹುಜರಾತಿ ಪುರ್ನ ಆಯ್ಕೆಗೊಂಡಿದ್ದಾರೆ.

ಗೌರವಾಧ್ಯಕ್ಷರಾಗಿ ಹುಸೇನಸಾಬ ತಾಂಬೂಳಿ, ಉಪಾಧ್ಯಕ್ಷರಾಗಿ ಇಮಾಮಹುಸೇನ ಹೆಬ್ಬಳ್ಳಿ, ಸಹ ಕಾರ್ಯದರ್ಶಿಯಾಗಿ ನರಸಪ್ಪ ಅಂಬಿಗೇರ, ಸಂಘಟನಾ ಕಾರ್ಯದರ್ಶಿಯಾಗಿ ಸಿದ್ದು ಜಾಲಗಾರ, ಸಹ ಖಜಾಂಚಿಯಾಗಿ ಕೃಷ್ಣಾ ಜಾಲಗಾರ ಖಜಾಂಚಿಯಾಗಿ ಕಾಖಪ್ಪ (ಪಾಂಡು) ಜಾಲಗಾರ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹುಸೇನ ಜಾಲಗಾರ, ರಿಯಾಜ ಹುಬ್ಬಳಿನವರ, ಸುರೇಶ ಜಾಲಗಾರ, ಸಯ್ಯದಬಾಬು ಗಂಗಾವತಿ ಹಾಗೂ ಸಲಹಾ ಸಮಿತಿ ಸದಸ್ಯರಾಗಿ ದುರ್ಗಪ್ಪ ರಾಯಚೂರ, ಇಮಾಮಸಾಬ ದುಂಡಸಿ, ರಾಮಣ್ಣ ಚಿಕ್ಕತುಂಬಳ, ನೂರಹ್ಮದ ಫಣಿಬಂದ, ರಜಿಬಿಸಾಬ ಯಲಿಗಾರ ಆಯ್ಕೆಯಾಗಿದ್ದಾರೆ.

ಮಂಜುನಾಥ ಹುಜರಾತಿ

ದ.ಕ. ಜಿಲ್ಲಾ ಜನವಾದಿ ಮಹಿಳಾ ಸಮ್ಮೇಳನ



ವರದಿ : ವಾ.ಉ.

ಅಂಗನವಾಡಿ ಕಾರ್ಯಕರ್ತೆಯರಿಗೆ, ಬೀಡಿ ಕಟ್ಟುವ ಮಹಿಳೆಯರಿಗೆ, ಬಿಸಿಯೂಟದ ಕಾರ್ಯಕರ್ತೆಯರಿಗೆ ಕನಿಷ್ಟ ವೇತನ ಸಿಗದೆ, ಉಣ್ಣಲು ಅನ್ನವಿಲ್ಲದೆ ಮಹಿಳೆಯರು ಕಷ್ಟಪಡುತ್ತಿದ್ದಾರೆ. ಹಾಗಿರುವಾಗ ಭಾರತ ಮಾತೆಗೆ ಜೈ ಅಂದರೆ ಏನು ಪ್ರಯೋಜನ? ಆ ಜೈಕಾರವನ್ನು ಭಾರತಮಾತೆ ಸ್ವೀಕರಿಸುವುದಿಲ್ಲ ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ವಿ. ಗೀತಾ ಹೇಳಿದರು.

'ಹಿಂಸೆ ಮುಕ್ತ ಸ್ವಾವಲಂಬಿ ಬದುಕಿಗಾಗಿ' ಮಂಗಳೂರಿನಲ್ಲಿ ಜುಲೈ 23ರಂದು ನಡೆದ ದ.ಕ. ಜಿಲ್ಲಾ ಜನವಾದಿ ಮಹಿಳಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಧಾನಸಭೆಯ ಶಾಸಕರು ರೈತರ ಸಂಕಷ್ಟ ತಡೆಯಲು ರಾಜಿನಾಮೆ ನೀಡಿಲ್ಲ. ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ತಡೆಯಲು ರಾಜೀನಾಮೆ ನೀಡಿಲ್ಲ, ನಿರುದ್ಯೋಗ ಸ್ಥಿತಿ ಇಲ್ಲವಾಗಬೇಕೆಂದು ರಾಜಿನಾಮೆ ನೀಡಿಲ್ಲ; ಅವರು ರಾಜೀನಾಮೆ ನೀಡಿರುವುದು ಅಧಿಕಾರ ಹಾಗೂ ಹಣದ ಆಸೆಗೆ ಎಂದವರು ಟೀಕಿಸಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ದ.ಕ. ಜಿಲ್ಲಾ ಘಟಕದ ಅಧ್ಯಕ್ಷೆ ಜಯಂತಿ ಬಿ. ಶೆಟ್ಟಿ ವಹಿಸಿದ್ದರು. ಕಾರ್ಯದರ್ಶಿ ಗಿರಿಜಾ ಮೂಡಬಿದ್ರೆ, ಪದಾಧಿಕಾರಿಗಳಾದ ಹೇಮಲತಾ, ಪದ್ಮಾವತಿ ಶೆಟ್ಟಿ, ಕಿರಣಪ್ರಭಾ, ಭಾರತಿ ಬೋಳಾರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮ್ಮೇಳನದ ನಿಗದಿತ ಕಲಾಪಗಳ ಬಳಿಕ, ಸಮ್ಮೇಳನವು ಮುಂದಿನ ಅವಧಿಗೆ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಜಿಲ್ಲಾಧ್ಯಕ್ಷೆಯಾಗಿ ಜಯಂತಿ ಬಿ. ಶೆಟ್ಟಿ, ಕಾರ್ಯದರ್ಶಿಯಾಗಿ ಭಾರತಿ ಬೋಳಾರ, ಉಪಾಧ್ಯಕ್ಷರುಗಳಾಗಿ ಹೇಮಲತಾ, ಪದ್ಮಾವತಿ ಶೆಟ್ಟಿ, ರಮಣ ಮೂಡಬಿದ್ರೆ, ಕೋಶಾಧಿಕಾರಿಯಾಗಿ ರಾಧಾ ಆಯ್ಕೆಯಾದರು. ಸಮ್ಮೇಳನಾಂತ್ಯದಲ್ಲಿ ವಿಲಾಸಿನಿ ವಂದಿಸಿದರು.

ಕಾರ್ಮಿಕರ ಕಾನೂನು ತಿದ್ದುಪಡಿ ದೇಶಕ್ಕೆ ಮಾರಕ– ಜೆ.ಬಾಲಕ್ರಷ್ಣ ಶೆಟ್ಟಿ

'ಕಳೆದ 5 ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸಿದ ನರೇಂದ್ರ ಮೋದಿ ಸರಕಾರದ ಬಗ್ಗೆ ಜನತೆಯಲ್ಲಿ ಭಾರೀ ಆಕ್ರೋಶವಿತ್ತು. ಮತ್ತೆ ಅಧಿಕಾರಕ್ಕೇರುವುದೇ ಕಷ್ಟಸಾಧ್ಯವೆಂದಾಗ ಪುಲ್ವಾಮಾ ಧಾಳಿ ನಡೆಸಿ ಸೈನಿಕರನ್ನು ಬಲಿ ಕೊಟ್ಟು ದೇಶಪ್ರೇಮದ ಉನ್ಮಾದವನ್ನು ಸ್ರಷ್ಟಿಸಿ ಅಬ್ಬರದ ಪ್ರಚಾರ ನಡೆಸಿ ಯುವಕರಲ್ಲಿ ಭಾರೀ ಭ್ರಮೆಯನ್ನು ಮೂಡಿಸಿ ನರೇಂದ್ರ ಮೋದಿ ಸರಕಾರವು ಮತ್ತೊಮ್ಮೆ ಅಧಿಕಾರಕ್ಕೇರುವಲ್ಲಿ ಈ ದೇಶದ ಗುತ್ತೇದಾರಿ ಬಂಡವಾಳಶಾಹಿಗಳ ಪಾತ್ರ ಎದ್ದು ಕಾಣುತ್ತಿದೆ. ನೋಟು ರದ್ದತಿ, GST ಯಿಂದಾಗಿ ಲಕ್ಷಾಂತರ ಕೈಗಾರಿಕೆಗಳು ಮುಚ್ಚಲ್ಪಟ್ಟಿದ್ದು ಕಾರ್ಮಿಕರ ಬದುಕು ಸಂಕಷ್ಟಮಯವಾಗಿದೆ. ಬ್ಯಾಂಕುಗಳ ವಿಲೀನೀಕರಣ, ರೈಲ್ವೇ, ರಕ್ಷಣೆ ಖಾಸಗೀಕರಣ, ಕಾರ್ಮಿಕರ ಕಾನೂನು ತಿದ್ದುಪಡಿಗಳು, ಬಂಡವಾಳಿಗರ ಲಾಭ ಹೆಚ್ಚಿಸಲೇ ಹೊರತು ಕಾರ್ಮಿಕರ ಉದ್ದಾರಕ್ಕಲ್ಲ. 2ನೇ ಬಾರಿಗೆ ಅಧಿಕಾರಕ್ಕೇರಿದ ನರೇಂದ್ರ ಮೋದಿ ಸರಕಾರವು ಕಾರ್ಮಿಕ ವಿರೋಧಿ ನೀತಿಗಳನ್ನು ತೀವ್ರವಾಗಿ ಜಾರಿಗೊಳಿಸುವ ಮೂಲಕ ದೇಶಕ್ಕೆ ಮಾರಕವಾಗಿ ಪರಿಣಮಿಸಿದೆ' ಎಂದು ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಅಭಿಪ್ರಾಯಪಟ್ಟರು.

ಅವರು ಕುತ್ತಾರಿನ ಮುನ್ನೂರು ಯುವಕ ಮಂಡಲದಲ್ಲಿ ಜರುಗಿದ ಸಿಐಟಿಯು ಉಳ್ಳಾಲ ವಲಯ ಸಮ್ಮೇಳನವನ್ನು ಉದ್ಘಾಟಿಸುತ್ತಾ, ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ ಅವರು, 'ದೇಶದ ಅರ್ಥವ್ಯವಸ್ಥೆಯನ್ನು ಈಗಾಗಲೇ ವಿನಾಶದ ಅಂಚಿಗೆ ತಳ್ಳಿರುವ ನರೇಂದ್ರ ಮೋದಿ ಸರಕಾರವು ದೇಶದ ಜಾತ್ಯತೀತ ಪರಂಪರೆಗೆ ಕೊಡಲಿಪೆಟ್ಟು ನೀಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುತ್ತಿದೆ. ಜಾತಿ ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುತ್ತಿದೆ. ಇಂತಹ ಸಂಧರ್ಭದಲ್ಲಿ ದೇಶವನ್ನು ರಕ್ಷಿಸುವ ಜವಾಬ್ದಾರಿ ಕಾರ್ಮಿಕ ವರ್ಗಕ್ಕಿದೆ. ಆದ್ದರಿಂದ ಇಡೀ ದೇಶದ ಕಾರ್ಮಿಕ ವರ್ಗ ಒಂದಾಗಿ ನಿಂತು ಸಮರಶೀಲ ಹೋರಾಟವನ್ನು ರೂಪಿಸಬೇಕಾಗಿದೆ' ಎಂದು ಹೇಳಿದರು.



ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, 'ಬಹುಸಂಖ್ಯಾತ ಕಾರ್ಮಿಕ ವರ್ಗದ ಹಣವು ಶೇಖರಣೆಗೊಂಡಿರುವ EPF, ESI, ಹಾಗೂ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಗಳ ಮೇಲೆ ಕಣ್ಣಿಟ್ಟಿರುವ ನರೇಂದ್ರ ಮೋದಿ ಸರಕಾರವು ಅದರಲ್ಲಿರುವ ಕೋಟ್ಯಾಂತರ ಹಣವನ್ನು ದೇಶದ ಬಂಡವಾಳಿಗರ ಕೈಗೆ ಹಸ್ತಾಂತರಿಸುವ ತವಕದಲ್ಲಿದೆ. ಇಡೀ ದೇಶದಲ್ಲಿ ಕನಿಷ್ಠ ಕೂಲಿಯನ್ನು ದಿನಕ್ಕೆ ರೂ.178ಕ್ಕೆ ಇಳಿಸಲು ಕೇಂದ್ರದ ಮೋದಿ ಸರಕಾರ ಬಯಸಿದರೆ, ಕೇರಳದ LDF ಸರಕಾರವು ದಿನಕ್ಕೆ ರೂ. 600 ನೀಡಲು ಹೊರಟಿರುವುದು ಕಾರ್ಮಿಕ ವರ್ಗದ ಪರವಾಗಿ ಯಾರಿದ್ದಾರೆ ಎಂಬುದನ್ನು ಸಾಬೀತುಪಡಿಸಬೇಕಾಗಿದೆ' ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಿಐಟಿಯು ಉಳ್ಳಾಲ ವಲಯಾಧ್ಯಕ್ಷರಾದ ಕ್ರಷ್ಣಪ್ಪ ಸಾಲ್ಯಾನ್ ರವರು 'ಇಡೀ ದೇಶದ ಕಾರ್ಮಿಕ ವರ್ಗದ ಚಳುವಳಿಯ ಪರಂಪರೆಯನ್ನು ವಿವರಿಸುತ್ತಾ, ಉಳ್ಳಾಲ ವಲಯದಲ್ಲೂ ಬೀಡಿ ಕಟ್ಟಡ ಬಿಸಿಯೂಟ ವಿವಿಧ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸುತ್ತಿರುವ ಸಿಐಟಿಯು ವನ್ನು ಮುಂದಿನ ದಿನಗಳಲ್ಲಿ ಬಲಿಷ್ಟವಾಗಿ ಕಟ್ಟಲು ಕಾರ್ಮಿಕ ವರ್ಗ ಮುಂದಾಗಬೇಕೆಂದು' ಹೇಳಿದರು.

ವೇದಿಕೆಯಲ್ಲಿ ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಪದ್ಮಾವತಿ ಶೆಟ್ಟಿ, ಸಿಐಟಿಯು ಉಳ್ಳಾಲ ವಲಯ ಕಾರ್ಯದರ್ಶಿ ಜಯಂತ ನಾಯಕ್, ಸಿಐಟಿಯು ಮುಖಂಡರಾದ ವಿಲಾಸಿನಿ ಜನಾರ್ಧನ ಕುತ್ತಾರ್, ಚಂದ್ರಹಾಸ ಪಿಲಾರ್, ಸುಂದರ ಕುಂಪಲ, ಡಿವೈಎಫ್ಐ ನಾಯಕರಾದ ನಿತಿನ್ ಕುತ್ತಾರ್ ಮುಂತಾದವರು ಉಪಸ್ಥಿತರಿದ್ದರು.

ಯು. ಜಯಂತ ನಾಯಕ್



ಕಾರ್ಮಿಕ ವರ್ಗದ ಧ್ವನಿ ಅಡಗಿಸಲು ಮೋದಿ ಹುನ್ನಾರ –ವಸಂತ ಆಚಾರಿ

'ಎರಡನೆಯ ಬಾರಿಗೆ ಅಧಿಕಾರದ ಗದ್ದುಗೆ ಏರಿದ ನರೇಂದ್ರ ಮೋದಿ ಸರಕಾರವು ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳನ್ನು ವೇಗವಾಗಿ ಜಾರಿಗೊಳಿಸುವ ಮೂಲಕ ಕಾರ್ಪೋರೇಟ್ ಕಂಪೆನಿಗಳ ಹಿತ ಕಾಯಲು ಹೊರಟಿದೆ. ತನ್ನ ಮೊದಲ 100 ದಿನಗಳ ಕಾರ್ಯಕ್ರಮದಲ್ಲಿ ಕಾರ್ಮಿಕ ವರ್ಗವು ವೀರೋಚಿತ ಹೋರಾಟ ಮಾಡಿ ಪಡೆದುಕೊಂಡ 44 ಕಾರ್ಮಿಕ ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾರ್ಪಡಿಸುವ ಹುನ್ನಾರ ನಡೆಸುತ್ತಿದೆ. ಎಲ್ಲಾ ಕಾರ್ಮಿಕ ಕಾನೂನುಗಳನ್ನು ಮಾಲಕರ ಪರವಾಗಿ ತಿದ್ದುಪಡಿ ಮಾಡಲಾಗುತ್ತಿದೆ. ಸಾರ್ವಜನಿಕ ಉದ್ದಿಮೆಗಳನ್ನು ವಾರಕ್ಕೊಮ್ಮೆ ಮಾರಾಟ ಮಾಡುವ ಸಲುವಾಗಿಯೇ ಕೇಂದ್ರ ಸಚಿವರನ್ನು ನೇಮಕ ಮಾಡಲಾಗಿದೆ. ಮಾತ್ರವಲ್ಲದೆ ಕನಿಷ್ಠ ಕೂಲಿಯನ್ನು ದಿನವೊಂದಕ್ಕೆ ರೂ.178ಕ್ಕೆ ಇಳಿಸಲು ನಿರ್ಧರಿಸಿರುವ ಕೇಂದ್ರ ಸರಕಾರವು ಕಾರ್ಮಿಕರ ಎಲ್ಲಾ ಸವಲತ್ತುಗಳನ್ನು ನಾಶಪಡಿಸಲು ಹೊರಟಿದೆ. ಮತ್ತೊಂದು ಕಡೆ ಜಾತಿ ಧರ್ಮದ ಹೆಸರಿನಲ್ಲಿ ಹಿಂದುತ್ವದ ಅಮಲನ್ನೇರಿಸಿ ದುಡಿಯುವ ವರ್ಗದ ಐಕ್ಯತೆಯನ್ನು ಒಡೆಯಲು ಹವಣಿಸುತ್ತಿದೆ. ಒಟ್ಟಿನಲ್ಲಿ ದೇಶದ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಾದ ಕಾರ್ಮಿಕ ವರ್ಗದ ಧ್ವನಿಯನ್ನು ಅಡಗಿಸಲು ನರೇಂದ್ರ ಮೋದಿ ನೇತ್ರತ್ವದ ಕೇಂದ್ರ ಸರಕಾರವು ವ್ಯವಸ್ಥಿತ ಹುನ್ನಾರ ನಡೆಸುತ್ತಿದೆ' ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಅಭಿಪ್ರಾಯಪಟ್ಟರು.

ಅವರು ಬೋಳಾರದ ಯೂನಿಯನ್ ಕಚೇರಿ ಸಭಾಂಗಣದ ಕಾಂ. ಬಿ. ಮಾಧವ ವೇದಿಕೆಯಲ್ಲಿ ಜರುಗಿದ ಸಿಐಟಿಯು 3 ನೇ ಮಂಗಳೂರು ನಗರ ಸಮ್ಮೇಳನವನ್ನು ಉದ್ಘಾಟಿಸುತ್ತಾ, ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ ಅವರು, 'ದೇಶದ ಬೆನ್ನೆಲುಬಾದ ರೈತರು ಆತ್ಮಹತ್ಯೆಯ ದಾರಿಯತ್ತ ಸಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಇಡೀ ದೇಶದಲ್ಲಿ ಸ್ಕೀಂ ನೌಕರರಾದ ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರು ಕನಿಷ್ಠ ಕೂಲಿ ಇಲ್ಲದೆ, ಸಾಮಾಜಿಕ ಭದ್ರತೆ ಇಲ್ಲದೆ ತೀರಾ ಸಂಕಷ್ಟದಲ್ಲಿದೆ. ಕಳೆದ ದೀರ್ಘ ಅವಧಿಯಲ್ಲಿ ಕನಿಷ್ಠ ಕೂಲಿ 18,000 ಕ್ಕಾಗಿ ನಿರಂತರ ಹೋರಾಟ ನಡೆಯುತ್ತಿದೆ. ಒಟ್ಟಿನಲ್ಲಿ ಕಾರ್ಮಿಕ ವರ್ಗದ ಬದುಕು ಉತ್ತಮಗೊಳ್ಳದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ' ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು 'ದೇಶದ ಸಂಸತ್ತಿನಲ್ಲಿ ದುಡಿಯುವ ವರ್ಗದ ಜನಪ್ರತಿನಿಧಿಗಳು ಇನ್ನಿಲ್ಲವಾಗಿಸಲು ದೇಶದ ಕಾರ್ಪೋರೇಟ್ ಕಂಪೆನಿಗಳು ಭಾರೀ ಪ್ರಯತ್ನಿಸಿರುವ ಭಾಗವಾಗಿಯೇ ಎಡಪಕ್ಷಗಳ ಸಂಸದರ ಸಂಖ್ಯೆ ಕಡಿಮೆಯಾಗಿದೆಯೇ ಹೊರತು ಜನರಿಗೆ ಕೆಂಬಾವುಟದ ಮೇಲೆ ಅಭಿಮಾನ ಪ್ರೀತಿ ಕಡಿಮೆಯಾಗಿಲ್ಲ. ಇಂದಿಗೂ ಜನಸಾಮಾನ್ಯರಿಗೆ ಯಾವುದೇ ಸಮಸ್ಯೆಗಳು ಉದ್ಭವಿಸಿದಾಗ ಅದರ ಪರಿಹಾರಕ್ಕಾಗಿ ಬೀದಿಗಿಳಿದು ಹೋರಾಟ ಮಾಡುವುದರಲ್ಲಿ ಮುಂಚೂಣಿಯಲ್ಲಿರುವುದೇ ಕೆಂಬಾವುಟ ಎಂಬುದನ್ನು ಮರೆಯಬಾರದು' ಎಂದು ಹೇಳಿದರು. ➔



ಡೆಂಗ್ಯೂ ಮಲೇರಿಯಾ ತಡೆಗೆ ಎಸ್‌ಎಫ್‌ಐ ಆಗ್ರಹ

ಡೆಂಗ್ಯೂ, ಮಲೇರಿಯಾ ಮುಂತಾದ ರೋಗಗಳನ್ನು ತಡೆಗಟ್ಟಲು ಶಾಲಾ–ಕಾಲೇಜುಗಳಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.)ನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಜಿಲ್ಲೆಯಲ್ಲೆಡೆ ಅದರಲ್ಲೂ ಮುಖ್ಯವಾಗಿ ಮಂಗಳೂರು ನಗರದೆಲ್ಲೆಡೆ ಡೆಂಗ್ಯೂ ವ್ಯಾಪಕವಾಗಿ ಹರಡುತ್ತಿದೆ. ಡೆಂಗ್ಯೂಗೆ ತುತ್ತಾಗಿ ಇತ್ತೀಚೆಗೆ ಸಾವು ಉಂಟಾಗಿದೆ. ದಿನಾಂಕ 19–07–2019ರಂದು ನಗರದ ಖಾಸಗಿ ಶಾಲೆಯಲ್ಲಿ ಕಲಿಯುವ 7ನೇ ತರಗತಿಯ ವಿದ್ಯಾರ್ಥಿನಿ ಡೆಂಗ್ಯೂಗೆ ಬಲಿಯಾಗಿದ್ದಾಳೆ. ಹಾಗಾಗಿ ಜನರು ಡೆಂಗ್ಯೂ ಹಾವಳಿಯಿಂದ ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ.

ಈ ಸಂದರ್ಭದಲ್ಲಿ ಜನರಿಗೆ ಡೆಂಗ್ಯೂ ಹರಡದಂತೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳನ್ನು ತಿಳಿಸುವ ಅಗತ್ಯವಿದೆ. ಆ ಕೆಲಸ ಈಗಾಗಲೇ ನಡೆಯುತ್ತಿದೆಯಾದರೂ, ಜಿಲ್ಲೆಯೆಲ್ಲೆಡೆ ಇರುವ ಶಾಲಾ–ಕಾಲೇಜುಗಳಲ್ಲಿ ಈ ಕುರಿತು ಜಾಗೃತಿ ಅಭಿಯಾನ ನಡೆಸುವ ಅಗತ್ಯವಿದೆ.

ಜಿಲ್ಲೆಯ ಹಲವು ಶಾಲಾ ಕಾಲೇಜುಗಳಲ್ಲಿ ಅಲ್ಲಲ್ಲಿ ನೀರು ನಿಂತಿರುವುದು ಕಂಡುಬರುತ್ತಿದೆ. ಉದಾಹರಣೆಗೆ ನಗರದ ಸರಕಾರಿ ಮಹಿಳಾ ಕಾಲೇಜು ಬಲ್ಮಠದಲ್ಲಿ ಮಳೆಯಿಂದಾಗಿ ನೀರು ಮೈದಾನದಲ್ಲಿ ತುಂಬಿಕೊಂಡಿದೆ. ಇದರಿಂದಾಗಿ ವಿದ್ಯಾರ್ಥಿನಿಯರಿಗೆ ಅಲ್ಲಿ ನಡೆಯಲೂ ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿ ಜಿಲ್ಲೆಯ ಹಲವು ಶಾಲಾ–ಕಾಲೇಜುಗಳಲ್ಲಿವೆ. ಶಾಲಾ–ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಾರೆ. ವಿದ್ಯಾರ್ಥಿಗಳ ಅರೋಗ್ಯಕ್ಕೆ ತೊಂದರೆಯಾದರೆ ಅವರ ವಿದ್ಯಾರ್ಜನೆಗೆ ತೊಡಕು ಉಂಟಾಗುವ ಸಾಧ್ಯತೆ ಇದೆ. ಹಾಗಾಗಿ ಶಾಲಾ–ಕಾಲೇಜಿನ ವಾತಾವರಣ ಸ್ವಚ್ಛವಾಗಿಡುವುದು ಅತ್ಯಗತ್ಯ.

ಜಿಲ್ಲೆಯ ಜನರ ಹಾಗೂ ಮುಂದಿನ ಪ್ರಜೆಗಳಾದ ವಿದ್ಯಾರ್ಥಿಗಳ ಹಿತದೃಷ್ಟಿಗಾಗಿ ಜಿಲ್ಲಾಡಳಿತ ಡೆಂಗ್ಯೂ ಮಲೇರಿಯಾದಂತಹ ರೋಗಗಳನ್ನು ತಡೆಗಟ್ಟುವ ಸಲುವಾಗಿ ಜಿಲ್ಲೆಯ ಶಾಲಾ–ಕಾಲೇಜುಗಳ ವಾತಾವರಣವನ್ನು ಸ್ವಚ್ಛವಾಗಿಡಲು ಕ್ರಮಕೈಗೊಳ್ಳಬೇಕಾಗಿ ವಿನಂತಿಸಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ನ ದ.ಕ. ಜಿಲ್ಲಾಧ್ಯಕ್ಷೆ ಮಾಧುರಿ ಬೋಳಾರ್, ಜಿಲ್ಲಾ ಕಾರ್ಯದರ್ಶಿ ವಿಕಾಸ್ ಕುತ್ತಾರ್, ಜಿಲ್ಲಾ ಉಪಾಧ್ಯಕ್ಷ ಸಿನಾನ್ ಬೆಂಗ್ರೆ, ಜಿಲ್ಲಾ ಸಮಿತಿ ಸದಸ್ಯರು ತಿಲಕ್ ಕುತ್ತಾರ್, ಸೋಮೇಶ್ ಪಂಜಿಮೊಗರು ಉಪಸ್ಥಿತರಿದ್ದರು. ■

ಬಜಾಲ್ ಪಕ್ಕಲಡ್ಕ ಯುವಜನ ಸಮ್ಮೇಳನ



ನಮ್ಮ ಕರ್ನಾಟಕ ರಾಜ್ಯದ ರಾಜಕೀಯ ವಿದ್ಯಮಾನಗಳು, ಪರಸ್ಪರ ಕೆಸರೆರೆಚಾಟಗಳನ್ನು ನೋಡಿದರೆ ಅಸಹ್ಯ ಉಂಟುಮಾಡುತ್ತಿದೆ. ಇಲ್ಲಿ ರಾಜ್ಯದ ಜನತೆ ತಮ್ಮನ್ನು ಕಾಡುವ ಹಲವು ಗಂಭೀರ ಸಮಸ್ಯೆಗಳಿಗೆ ಒಳಗಾಗಿ ಪೆಚಾಡುತ್ತಿದ್ದಾರೆ. ಯುವಜನ ಉದ್ಯೋಗವಿಲ್ಲದೆ ಪರದಾಡುತ್ತಿದ್ದಾರೆ. ನಿವೇಶನ ರಹಿತರು ಸ್ವಂತ ಸೂರಿಲ್ಲದೆ ಕಂಗಾಲಾಗಿದ್ದಾರೆ, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಕ್ಷೇತ್ರದ ಅಭಿವೃದ್ಧಿ ಕುಂಠಿತಗೊಂಡಿದೆ ಇನ್ನು ಹಲವು ಸಮಸ್ಯೆಗಳಿಗೆ ಒಳಗಾಗಿ ಜನ ಇಂದು ಕಷ್ಟಪಡುತ್ತಿದ್ದಾರೆ. ಜನರ ಈ ಎಲ್ಲಾ ಸಮಸ್ಯೆಗಳಿಗೆ ಸ್ಪಂಧಿಸಬೇಕಾಗಿದ್ದ ಜನಪ್ರತಿನಿಧಿಗಳಿಗೆ ಅದ್ಯಾವುದರ ಚಿಂತೆಯೇ ಇಲ್ಲದೆ ಅಧಿಕಾರದ ಆಸೆಗಾಗಿ ರೆಸಾರ್ಟ್ ರಾಜಕಾರಣ, ಶಾಸಕರುಗಳ ಖರೀದಿಯ ಕಿತ್ತಾಟದಲ್ಲೇ ಇರೋದರಿಂದ ಇಲ್ಲಿ ರಾಜ್ಯದ ಜನ ಸಂಪೂರ್ಣವಾಗಿ ಕಂಗಾಲಾಗಿದ್ದಾರೆ ಎಂದು ಡಿವೈಎಫ್‌ಐ ನ ಜಿಲ್ಲಾ ಕೋಶಾಧಿಕಾರಿ ಮನೋಜ್ ವಾಮಂಜೂರು ಇಂದು ಬಜಾಲ್ ಪಕ್ಕಲಡ್ಕ ಘಟಕದ ಯುವಜನ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಡಿವೈಎಫ್‌ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡುತ್ತಾ ರಾಜ್ಯವನ್ನು ಕಾಡುವ ಸಮಸ್ಯೆ ನಮ್ಮ ಜಿಲ್ಲೆಗೂ ಹೊರತಾಗಿಲ್ಲ. ರಾಜ್ಯದ ಬಹುಮುಖ್ಯ ಪ್ರಶ್ನೆಯಲ್ಲೊಂದರಾದ ಉದ್ಯೋಗ ಇಂದು ತುಳುನಾಡಿನ ಯುವಜನರನ್ನು ಕೂಡ ನೇರವಾಗಿ ಬಾಧಿಸುತ್ತಿದೆ. ಉತ್ತಮ ಶಿಕ್ಷಣ ಪಡೆದ ಜಿಲ್ಲೆಯ ಯುವಜನರು ಇವತ್ತು ಉದ್ಯೋಗವನ್ನರಸಿ ವಿದೇಶಗಳಿಗೆ ವಲಸೆ ಹೋಗಿ ಅತಂತ್ರರಾಗಿದ್ದಾರೆ. ವಿದೇಶದಲ್ಲಿ ಸಮಸ್ಯೆಗೊಳಗಾದ ಕೆಲವೊಂದು ಯುವಜನರನ್ನು ಊರಿಗೆ ಮರಳಿಸಲು ಸಹಾಯ ಮಾಡಿರುವುದೋ ದೊಡ್ಡ ಸಾಧನೆಯೆಂದು ಬೀರುವ ಜಿಲ್ಲೆಯ ಶಾಸಕರು, ಸಂಸದರು ಜಿಲ್ಲೆಯಲ್ಲಿ ಖಾಲಿ ಇರುವ ಸರಕಾರಿ ಉದ್ಯೋಗಗಳನ್ನು ಭರ್ತಿಗೊಳಿಸುವುದಕ್ಕಾಗಲಿ ಅಥವಾ ಜಿಲ್ಲೆಯ ಕೈಗಾರಿಕೆಗಳಲ್ಲಿ ಸ್ಥಳೀಯರಿಗೂ ಉದ್ಯೋಗ ನೀಡುವ ವಿಚಾರಗಳಿಗೆ ಈವರೆಗೂ ಗಮನವೇ ಹರಿಸದೇ ಇರೋದು ಈ ಜಿಲ್ಲೆಯ ದುರಂತ. ಈ ಹಿನ್ನಲೆಯಲ್ಲಿ ಡಿವೈಎಫ್‌ಐ ಉದ್ಯೋಗ ಸೃಷ್ಟಿಸಿ ನಿರುದ್ಯೋಗದಿಂದ ರಕ್ಷಿಸಿ ಘೋಷಣೆಯಡಿಯಲ್ಲಿ ಸಮ್ಮೇಳವನ್ನು ಆಯೋಜಿಸುತ್ತಿವೆ ಮುಂದಿನ ದಿನಗಳಲ್ಲಿ ಜಿಲ್ಲೆಯ ಖಾಲಿ ಇರುವ ಸರಕಾರಿ ಉದ್ಯೋಗಗಳನ್ನು ಭರ್ತಿ ಮಾಡಲು ಹೋರಾಟಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆ ಇಂತಹ ಉದ್ಯೋಗದ ಹಕ್ಕಿಗಾಗಿ ನಡೆಯುವ ಹೋರಾಟದಲ್ಲಿ ಜಿಲ್ಲೆಯ ಯುವಜನತೆ ಒಂದಾಗಬೇಕೆಂದು ಕರೆನೀಡಿದರು.

ವೇದಿಕೆಯಲ್ಲಿ ಅತಿಥಿಗಳಾಗಿ ಡಿವೈಎಫ್‌ಐ ಜಿಲ್ಲಾ ಮುಖಂಡರಾದ ರಿಯಾಜ್ ಮೂಡಬಿದ್ರೆ, ಮಾಜಿ ಜಿಲ್ಲಾ ಮುಖಂಡ ದೀಪಕ್ ಬೊಲ್ಲ ಉಪಸ್ಥಿತರಿದ್ದರು. ಸಭೆಯ ಅದ್ಯಕ್ಷತೆಯನ್ನು ಪ್ರಿತೇಶ್ ಬಜಾಲ್ ವಹಿಸಿದ್ದರು. ಕಾರ್ಯಕ್ರಮವನ್ನು ಹರಿಹರನ್ ಸ್ವಾಗತಿಸಿ ಪ್ರಕಾಶ್ ವಂದಿಸಿ ದೀರಾಜ್ ಪಕ್ಕಲಡ್ಕ ನಿರೂಪಿಸಿದರು. ■

➔ ಸಮ್ಮೇಳನದಲ್ಲಿ ಸಮಾರೋಪ ಭಾಷಣ ಮಾಡಿದ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕ್ರಷ್ಣ ಶೆಟ್ಟಿಯವರು, 'ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಕಾರ್ಮಿಕ ವರ್ಗದ ಚಳುವಳಿಯು ಶತಮಾನೋತ್ಸವ ಸಂಭ್ರಮವನ್ನು ಆಚರಿಸುತ್ತಿದ್ದು, ದೇಶದ ಸ್ವಾತಂತ್ರ್ಯ, ಐಕ್ಯತೆ, ಸಮಗ್ರತೆ, ಸೌಹಾರ್ದತೆ, ಸಾರ್ವಬೌಮತೆಯನ್ನು ಉಳಿಸುವಲ್ಲಿ ಕಾರ್ಮಿಕ ವರ್ಗ ಮುಂಚೂಣಿಯಲ್ಲಿದೆ' ಎಂದು ಹೇಳಿದರು.

ಪ್ರಾರಂಭದಲ್ಲಿ ಧ್ವಜಾರೋಹಣಗೈಯುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದ ಸಿಐಟಿಯು ಮಂಗಳೂರು ನಗರಾಧ್ಯಕ್ಷರಾದ ಜಯಂತಿ ಬಿ.ಶೆಟ್ಟಿಯವರು ಬಳಿಕ ನಡೆದ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ವೇದಿಕೆಯಲ್ಲಿ ಸಿಐಟಿಯು ಮಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನ ಮೊಗರು, ಸಿಐಟಿಯು ಇತರ ಮುಖಂಡರಾದ ರವಿಚಂದ್ರ ಕೊಂಚಾಡಿ, ಭಾರತಿ ಬೋಳಾರ, ಅಹಮ್ಮದ್ ಭಾವರವರು ಉಪಸ್ಥಿತರಿದ್ದರು.

ಯೋಗೀಶ್ ಜಪ್ಪಿನಮೊಗರು

ಎಸ್‌ಎಫ್‌ಐ ಬಾಗೇಪಲ್ಲಿ ತಾಲ್ಲೂಕು ಸಮ್ಮೇಳನ



ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ, ಸಮರ್ಪಕ ಸಾರಿಗೆ ವ್ಯವಸ್ಥೆ ಜಾರಿಗಾಗಿ, ಡೊನೇಷನ್ ಹಾವಳಿ, ಶುಲ್ಕ ಏರಿಕೆ ವಿರುದ್ಧ, ತಾಲೂಕಿನ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗಾಗಿ ಒತ್ತಾಯಿಸಿ ಬಾಗೇಪಲ್ಲಿಯಲ್ಲಿ ಎಸ್‌ಎಫ್‌ಐ ತಾಲೂಕು ಸಮಾವೇಶವನ್ನು ನಡೆಸಲಾಯಿತು. ಸಮಾವೇಶವನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ವಿ. ಅಂಬರೀಷ್ ಉದ್ಘಾಟಿಸಿದರು ಅತಿಥಿಗಳಾಗಿ ಉಪನ್ಯಾಸರಾದ ವೆಂಕಟಶಿವಾ ರೆಡ್ಡಿ, ಶಿಕ್ಷಕರಾದ ಸುಬ್ರಹ್ಮಣ್ಯಂ, ಹಿಂದೂಪುರದ ಎಸ್‌ಎಫ್‌ಐ ನ ಮಾಜಿ ಮುಖಂಡರಾದ ಪ್ರವೀಣ್ ಕುಮಾರ್ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯ ಸಮಿತಿ ಸದಸ್ಯರಾದ ಸೋಮಶೇಖರ್ ವಹಿಸಿದ್ದರು. ಸಮಾವೇಶಕ್ಕೆ ತಾಲೂಕಿನ ವಿವಿಧ ಕಾಲೇಜುಗಳಿಂದ ಆಯ್ಕೆಯಾದ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಮಾವೇಶದಲ್ಲಿ ತಾಲೂಕು ಸಂಘಟನಾ ಸಮಿತಿಯನ್ನು ರಚಿಸಲಾಗಿದ್ದು, ಅಧ್ಯಕ್ಷರಾಗಿ ಸತೀಶ್ ವಿ, ಕಾರ್ಯದರ್ಶಿಯಾಗಿ ಪವನ್ ಕುಮಾರ್, ಉಪಾಧ್ಯಕ್ಷರಾಗಿ ಸಂತೋಷ, ರಾಕೇಶ್, ಚೈತ್ರ ವೈ. ಎಂ, ಕಾವೇರಿ ಡಿ, ಜಂಟಿ ಕಾರ್ಯದರ್ಶಿಗಳಾಗಿ ಶ್ರೀನಿವಾಸ ಎಂ.ಎಸ್, ಮುನಿಕೃಷ್ಣ, ನಯನ ಎ, ಗೌತಮಿ ಆಯ್ಕೆಯಾಗಿದ್ದಾರೆ.

ಸಮಾವೇಶದ ಸಮಾರೋಪ ಕಾರ್ಯಕ್ರಮದಲ್ಲಿ ಎಸ್‌ಎಫ್‌ಐ ನ ಮಾಜಿ ರಾಜ್ಯ ಉಪಾಧ್ಯಕ್ಷರಾದ ಎಂ.ಪಿ ಮುನಿವೆಂಕಟಪ್ಪ ರವರು ಮಾತನಾಡಿದರು.



ಅಗಸ್ಟ್ 2 ರಂದು 'ಬಂಡವಾಳ ಸಂಪುಟ–1'ರ ಬಿಡುಗಡೆಗೆ ಕ್ಷಣಗಣನೆ ಆರಂಭವಾಗಿದೆ. ಈ ಸಂದರ್ಭದಲ್ಲಿ ಈ ಬೃಹತ್ ಗ್ರಂಥ ಓದಲು ಸಹಾಯಕವಾಗುವ ಭಾಗ–ಅಧ್ಯಾಯವಾರು ಸಾರಾಂಶದ ಇನ್ನೊಂದು ಸ್ಯಾಂಪಲ್. ಕೊನೆಯ ಭಾಗವಾದ ಭಾಗ–8ರ ಸಾರಾಂಶ ಇಲ್ಲಿದೆ.

ಭಾಗ–8 ಆದಿಮ ಬಂಡವಾಳದ ಶೇಖರಣೆ ಸಾರಾಂಶ

ಬಂಡವಾಳದ ಚಲನೆಯ ಮುಖ್ಯ ನಿಯಮಗಳನ್ನು ಹೊಂದಿರುವ (ಮೌಲ್ಯದ ಶ್ರಮದ, ಮಿಗುತಾಯ ಮೌಲ್ಯದ, ಹಣದ, ಬಂಡವಾಳದ, ಕೂಲಿಯ) ಸಿದ್ಧಾಂತಗಳನ್ನು, ಅದರಲ್ಲೂ ಕೊನೆಯದಾಗಿ ಬಂಡವಾಳದ ಶೇಖರಣೆಯ ಸಿದ್ಧಾಂತವನ್ನು ಹಿಂದಿನ ಭಾಗದಲ್ಲಿ (ಭಾಗ–7) ಪ್ರಸ್ತುತಪಡಿಸಿದ ಮೇಲೆ, ಬಂಡವಾಳಶಾಹಿ ವ್ಯವಸ್ಥೆಯ ಉಗಮದ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಮೊದಲ ಅಥವಾ ಆದಿಮ ಬಂಡವಾಳ ಎಲ್ಲಿಂದ ಬಂತು? ಈ ವ್ಯವಸ್ಥೆಯ ಪ್ರಧಾನ ವರ್ಗಗಳಾದ ಬಂಡವಳಿಗರು ಮತ್ತು ಕಾರ್ಮಿಕರು ಎಲ್ಲಿಂದ ಬಂದರು? ಬಂಡವಳಿಗರ ಉತ್ಪನ್ನಗಳಿಗೆ ಮಾರುಕಟ್ಟೆ ಎಲ್ಲಿ ದೊರೆಯಿತು? ಹಿಂದಿನ ಊಳಿಗಮಾನ್ಯ ವ್ಯವಸ್ಥೆ ಹೇಗೆ ಇಲ್ಲವಾಯಿತು? ಈ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಅವನ್ನು ಇಂಗ್ಲೆಂಡಿನ ಸಂದರ್ಭದಲ್ಲಿ ಉತ್ತರಿಸುವ ಮೂಲಕ ಬಂಡವಾಳಶಾಹಿ ವ್ಯವಸ್ಥೆಯ ಹುಟ್ಟಿನ ಕಥನವನ್ನು ಈ ಭಾಗದಲ್ಲಿ ಸಮಗ್ರವಾಗಿ ಕಟ್ಟಿ ಕೊಡಲಾಗುತ್ತದೆ. ಈ ಬದಲಾವಣೆ ಶಾಂತಿಯುತವಾಗಿ ತನ್ನಷ್ಟಕ್ಕೆ ತಾನೇ ಆದದ್ದಲ್ಲ. ಅತ್ಯಂತ ಹಿಂಸಾತ್ಮಕವಾಗಿ ಜನತೆಯ ದೊಡ್ಡ ವಿಭಾಗಗಳನ್ನು ಅತ್ಯಂತ ದಾರುಣ ಸ್ಥಿತಿಗೆ ತಳ್ಳಿ ತರಲಾದ ಬದಲಾವಣೆ.

ಆದಿಮ ಬಂಡವಾಳದ ಉಗಮದಲ್ಲಿ ಮತ್ತು ಕಾರ್ಮಿಕ ವರ್ಗದ ಹುಟ್ಟಿನಲ್ಲಿ, ಗ್ರಾಮೀಣ ರೈತಾಪಿ ಜನರನ್ನು ಅವರು ಕೃಷಿ ಮಾಡಿಕೊಂಡಿದ್ದ ಜಮೀನುಗಳಿಂದ ಓಡಿಸಿ ಬೀದಿಪಾಲು ಮಾಡಿ, ತಮ್ಮ ಶ್ರಮಶಕ್ತಿ ಮಾರಾಟ ಬಿಟ್ಟರೆ ಬೇರೆ ಯಾವುದೇ ದಾರಿ ಇಲ್ಲದ ಕಾರ್ಮಿಕ ವರ್ಗವಾಗಿ ಪರಿವರ್ತಿಸಿದ್ದು, ಒಂದು ಪ್ರಮುಖ ಪಾತ್ರ ವಹಿಸಿದೆ. ಇದನ್ನು ಇಂಗ್ಲೆಂಡಿನಲ್ಲಿ ಹೇಗೆ ಸಾಧಿಸಲಾಯಿತು ಎಂಬುದನ್ನು ಅಧ್ಯಾಯ–27 ವಿವರವಾಗಿ ಹೇಳುತ್ತದೆ. ರೈತರ ಹೊಲಗಳು, ಚರ್ಚಿನ ಭೂಮಿ, ಕೃಷಿ ಕೂಲಿಕಾರರ ಹಿತ್ತಲ ಭೂಮಿ, ಸಾಮುದಾಯಿಕ ಭೂಮಿ, ಬುಡಕಟ್ಟು ಜನರ ಸಾಮೂಹಿಕ ಒಡೆತನದ ಭೂಮಿಯನ್ನು ಮೊದಲು ಕಾನೂನು ಬಾಹಿರ ಬಲಪ್ರಯೋಗದಿಂದ ಹಿಂಸಾತ್ಮಕವಾಗಿ, ಆಮೇಲೆ ಕಾನೂನುಬದ್ಧ ಡಕಾಯಿತಿಯ ಮೂಲಕ 14ರಿಂದ 18ನೇ ಶತಮಾನದ ಅವಧಿಯಲ್ಲಿ ಕಸಿದುಕೊಂಡು, ಆಧುನಿಕ ಖಾಸಗಿ ಆಸ್ತಿಯ ರೂಪದಲ್ಲಿ ಇಂಗ್ಲಿಷ್ ಶ್ರೀಮಂತರ ರಾಜಸದೃಶ ಎಸ್ಟೇಟುಗಳು ಹೇಗೆ ಸೃಷ್ಟಿಯಾದವು ಎಂದು ಅಲ್ಲಿ ವಿವರವಾಗಿ ತಿಳಿಸಲಾಗುತ್ತದೆ.

14–15ನೇ ಶತಮಾನದಲ್ಲಿ ಫ್ಲೆಮಿಶ್ ಉಣ್ಣೆಯ ಬೆಲೆ ಏರುತ್ತಾ ಹೋಗಿದ್ದರಿಂದ ಕುರಿಸಾಕಣೆಗೆ ಪ್ರಾಶಸ್ತ್ಯ ಸಿಕ್ಕಿ ಇಂಗ್ಲೆಂಡಿನಲ್ಲಿ ರೈತಾಪಿಗಳನ್ನು ಭೂಮಿಯಿಂದ ಒಕ್ಕಲೆಬ್ಬಿಸಿದ್ದು; ಧಾರ್ಮಿಕ ಸುಧಾರಣಾ ಚಳುವಳಿಯ ಭಾಗವಾಗಿ ಬಂದ ಪ್ರೊಟೆಸ್ಟಂಟ್ ಧರ್ಮ ಸ್ಥಾಪನೆಯ ಪರಿಣಾಮವಾಗಿ ದೊಡ್ಡ ಜಮೀನುದಾರನಾಗಿದ್ದ ಕ್ಯಾಥೊಲಿಕ ಚರ್ಚು ಜಮೀನು ವಶಪಡಿಸಿಕೊಂಡು ಅದರ ಅವಲಂಬಿತ ಶ್ರಮಿಕರನ್ನು ಹೊರಕ್ಕೆಸೆದದ್ದು; ಸ್ಟುವರ್ಟ್ ರಾಜವಂಶವು 17ನೇ ಶತಮಾನದಲ್ಲಿ ಭೂಮಿಯ ಮೇಲಿದ್ದ ಊಳಿಗಮಾನ್ಯ ಪದ್ಧತಿಯ ಕರಾರುಗಳನ್ನು, ಪ್ರಭುತ್ವಕ್ಕೆ ಇದ್ದ ಎಲ್ಲ ಋಣಸಂದಾಯವನ್ನು ರದ್ದುಪಡಿಸಿದ್ದು; 1688ರ 'ಭವ್ಯ ಕ್ರಾಂತಿ'ಯ ನಂತರ ಅಧಿಕಾರ ಪಡೆದುಕೊಂಡ ಬಂಡವಳಿಗರು, ಭೂಮಾಲಿಕರು ಸರ್ಕಾರಿ ಭೂಮಿಯನ್ನು ಬೃಹತ್ ಪ್ರಮಾಣದಲ್ಲಿ ಲಪಟಾಯಿಸಿದ್ದು; ಸಾಮುದಾಯಿಕ (ಗೋಮಾಳ, ಹುಲ್ಲುಗಾವಲು) ಭೂಮಿಯನ್ನು ಸಹ 15–16 ಶತಮಾನದಿಂದಲೇ ವಶಪಡಿಸಿಕೊಳ್ಳುತ್ತಾ ಬಂದಿದ್ದು, 18ನೆಯ ಶತಮಾನದಲ್ಲಿ 'ಸಾಮುದಾಯಿಕ ಭೂಮಿಯನ್ನು ಬೇಲಿ ಹಾಕಿ ಖಾಸಗಿ ಭೂಮಿ ಮಾಡುವ ಕಾಯಿದೆ' (ಆಕ್ಟ್ ಫಾರ್ ಎನ್‌ಕ್ಲೋಶರ್ ಆಫ್ ಕಾಮನ್ಸ್) ಮತ್ತು ಜನಸಾಮಾನ್ಯರ ಭೂಮಿಯನ್ನು ಅತಿಕ್ರಮಿಸಲು ಕಾನೂನು ಮಾಡಿದ್ದು ಹಿಂದೆ ನಡೆಯುತ್ತಿದ್ದ ಡಕಾಯಿತಿಯನ್ನು ಕಾನೂನುಬದ್ಧ ಗೊಳಿಸಿದ್ದು; ಬುಡಕಟ್ಟು ಜನರ ಸಾಮೂಹಿಕ ಒಡೆತನದ ಭೂಮಿಯನ್ನು ಸಹ ಈ ನವ ಭೂಮಾಲಕರು ಕಬಳಿಸಲು ಆರಂಭಿಸಿದ್ದು; – ಇವೆಲ್ಲದರ ವಿವರಗಳು ಅಧ್ಯಾಯ–27ರಲ್ಲಿವೆ.

ಜೀವನಾಧಾರವಾದ ಭೂಮಿಯನ್ನು ಕಳೆದುಕೊಂಡು ಕಾರ್ಖಾನೆಗಳ ದುಡಿಮೆ ಬಿಟ್ಟರೆ ಬೇರೆ ಯಾವುದೇ ದಾರಿ ಇಲ್ಲದ ಹೊಸ ಈ ಶ್ರಮಿಕ ವರ್ಗ ಸೃಷ್ಟಿಯಾದ ವೇಗದಲ್ಲಿ, ಅವರಿಗೆ ಉದ್ಯೋಗ ಕೊಡುವಷ್ಟು ಕೈಗಾರಿಕೆ ಬೆಳೆದಿರಲಿಲ್ಲ, ಅವರಿಗೆ ಹೊಸ ಕೆಲಸಕ್ಕೆ ಒಗ್ಗಿಕೊಳ್ಳುವುದಕ್ಕೆ ತಯಾರಿ, ತರಬೇತಿ, ವ್ಯವಧಾನವೂ ಇರಲಿಲ್ಲ. ಇದರಿಂದಾಗಿ ಅವರು ಅಲೆಮಾರಿಗಳಾಗಿ ಕೆಲವೊಮ್ಮೆ ಕಳ್ಳತನ ಮುಂತಾದ ಅಪರಾಧಕ್ಕೆ ಇಳಿಯುವ ಪರಿಸ್ಥಿತಿ ನಿರ್ಮಾಣ ಮಾಡಲಾಯಿತು. ಆ ಮೇಲೆ ಆಳುವವರೇ ನಿರ್ಮಾಣ ಮಾಡಿದ ಈ ದುಸ್ಥಿತಿಯನ್ನು ನಿರ್ವಹಿಸಲು 15ನೇ ಶತಮಾನದಿಂದ 18ನೇ ಶತಮಾನದ ವರೆಗೆ ಅತ್ಯಂತ ಕ್ರೂರ ಕಾನೂನುಗಳನ್ನು ಮಾಡಿ ಅವುಗಳನ್ನು ಪ್ರಯೋಗಿಸಲಾಯಿತು. ಇಂತಹ ಕ್ರೂರ ಶಾಸನಗಳ ಕೆಲವು ಅಂಶಗಳ ನಂಬಲಾಗದ ದಂಗು ಬಡಿಸುವ ವಿವರಗಳು ಅಧ್ಯಾಯ–28ರಲ್ಲಿದೆ. ಇದು ಸಾಲದೆಂಬಂತೆ ಇದೇ ಅವಧಿಯಲ್ಲಿ ಬಂಡವಳಿಗರ ಲಾಭದ ರಕ್ಷಣೆಗೆ ಕಾರ್ಮಿಕರ ಗರಿಷ್ಠ ಕೂಲಿಯ ಮಿತಿ ಹಾಕುವ ಮತ್ತು ಕಾರ್ಮಿಕ–ಮಾಲಿಕ ಒಪ್ಪಂದಗಳ ಮೂಲಕ ಈ ಗರಿಷ್ಠ ಮಿತಿಗಿಂತ ಹೆಚ್ಚಿನ ಕೂಲಿ ಕೊಡುವುದು/ಪಡೆಯುವುದು ಅಪರಾಧವೆಂದು ಪರಿಗಣಿಸುವ ಕಾನೂನುಗಳನ್ನು ತರಲಾಯಿತು. 1820ರ ವರೆಗೆ ಇಂತಹ ಹಲವು ಕಾನೂನುಗಳನ್ನು ತರಲಾಯಿತು. ಹೀಗೆ ಪ್ರಭುತ್ವದ ಬಲ, ಕಾನೂನುಗಳ ಒತ್ತಡ, ಕಾನೂನುಭಂಜಕ ಹೊಸ ಶ್ರೀಮಂತರ ಬಂಡವಳಿಗರ ಮೋಸ ಹಿಂಸಾಚಾರಗಳಿಂದ ಶ್ರಮಶಕ್ತಿಯನ್ನು ಮಾರುವುದು ಅನಿವಾರ್ಯವಾಗಿದ್ದ ಕಾರ್ಮಿಕ ವರ್ಗದ ಉಗಮವಾಯಿತು.

ಬಂಡವಾಳಶಾಹಿ ರೈತರ ಉಗಮವನ್ನು ಅಧ್ಯಾಯ 29 ವಿವರಿಸುತ್ತದೆ. ಇಂಗ್ಲೆಂಡಿನಲ್ಲಿ ರೈತರ ವಿಕಾಸವನ್ನು 14ನೇ ಶತಮಾನದಿಂದ ಸ್ಥೂಲವಾಗಿ ಕ್ರಮಿಸಿ, ಬಂಡವಾಳಶಾಹಿ ರೈತರ ಉಗಮದ ಹಿಂದಿರುವ 16ನೇ ಶತಮಾನದಲ್ಲಿ ಮೂಡಿಬಂದ ಈ ಮುಂದಿನ ಕೆಲವು ಮುಖ್ಯ ಅಂಶಗಳನ್ನು ಗುರುತಿಸಲಾಗುತ್ತದೆ : ಕೃಷಿ ಕ್ರಾಂತಿ, ಸಾಮುದಾಯಿಕ ಜಮೀನುಗಳನ್ನು ಕಬಳಿಸಿದ್ದು, ದೀರ್ಘಕಾಲೀನ ಬಾಡಿಗೆ ಒಪ್ಪಂದ ಮತ್ತು ಚಿನ್ನ–ಬೆಳ್ಳಿಗಳ ಬೆಲೆ ಕುಸಿತದಿಂದ ಹಣದ ಬೆಲೆ ಇಳಿಕೆ, ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಸತತ ಹೆಚ್ಚಳ, ಹಳೆಯ ಮೌಲ್ಯದಲ್ಲಿ ಲೆಕ್ಕ ಹಾಕಿದ ಬಾಡಿಗೆಯಲ್ಲಿ ಇಳಿಕೆ.

ದೊಡ್ಡ ಪ್ರಮಾಣದಲ್ಲಿ ರೈತರು, ಕೂಲಿಕಾರರನ್ನು ಓಡಿಸಿದರ ಜತೆಗೆ ಕೃಷಿಯಲ್ಲಿ ಕ್ರಾಂತಿಯೆನ್ನಬಹುದಾದ ಭಾರೀ ಬದಲಾವಣೆಗಳು ಆಗುತ್ತವೆ. ಸುಧಾರಿತ ಕೃಷಿ ವಿಧಾನಗಳು; ಅಭಿವೃದ್ಧಿ ಹೊಂದಿದ ಸಹಕಾರಕ್ಕೆ ಉತ್ಪಾದನಾ ಸಾಧನಗಳನ್ನು ಒಂದೆಡೆ ಸಾಂದ್ರೀಕರಿಸುವುದು, ಕೃಷಿ ಕೂಲಿಗಾರರು ಇನ್ನೂ ತೀವ್ರ ದುಡಿಮೆ ಇವುಗಳಿಂದ ಕೃಷಿ ಉತ್ಪನ್ನ ಹೆಚ್ಚುತ್ತಾ ಹೋಗುತ್ತದೆ. ಇದರ ಜತೆಗೆ ತಯಾರಿಕಾ ವಲಯಕ್ಕೆ ಕಚ್ಚಾವಸ್ತುಗಳ (ಅಗಸೆ ನಾರು, ಉಣ್ಣೆ ಇತ್ಯಾದಿ) ತಯಾರಿ, ಮತ್ತು ಗೃಹ ಕೈಗಾರಿಕಾ ವಲಯದ ಒಡೆತನದಲ್ಲೂ ಬದಲಾವಣೆಗಳಾಗುತ್ತವೆ. ಇವು ಸಣ್ಣ ಸ್ವತಂತ್ರ ಉತ್ಪಾದಕರ ಬದಲು ದೊಡ್ಡ ರೈತರ, ಕಾರ್ಖಾನೆ ಮಾಲೀಕರ ಕೈಗೆ ಬದಲಾಗುತ್ತವೆ. ಕೈಗಾರಿಕಾ ಕಚ್ಚಾ ವಸ್ತುಗಳ ಮತ್ತು ಗೃಹ ಕೈಗಾರಿಕಾ ವಲಯಗಳು ನಗರದ ಕಾರ್ಖಾನೆ ಮಾಲೀಕರಿಗೆ ಅಧೀನವಾಗುತ್ತವೆ, ಎಂದು ಕೃಷಿ ಕ್ರಾಂತಿಯ ಪರಿಣಾಮಗಳನ್ನು ಅಧ್ಯಾಯ–30 ನಿರೂಪಿಸುತ್ತದೆ.

ಹಿಂದೆ ತಮ್ಮ ಆಹಾರ ತಾವೇ ಬೆಳೆಯುತ್ತಿದ್ದ ಮತ್ತು ಹೆಚ್ಚಿನ ತಮ್ಮ (ಬಟ್ಟೆ, ಕಾಲುರಕ್ಷೆ ಇತ್ಯಾದಿ) ಅಗತ್ಯಗಳನ್ನು ತಾವೇ ತಯಾರಿಸುತ್ತಿದ್ದ ಗ್ರಾಮೀಣ ಶ್ರಮಿಕರು ಕಾರ್ಖಾನೆಯ ಶ್ರಮಿಕರಾದ್ದರಿಂದ ಆಹಾರ, ಬಟ್ಟೆ ಇತ್ಯಾದಿಗಳನ್ನು ಅವರು ಮಾರುಕಟ್ಟೆಯಲ್ಲಿ ಕೊಳ್ಳಬೇಕಾದ್ದರಿಂದ ಕೈಗಾರಿಕಾ ಉತ್ಪನ್ನಗಳಿಗೆ ಆಂತರಿಕ ಮಾರುಕಟ್ಟೆ ಹೆಚ್ಚುತ್ತದೆ. ಕಚ್ಚಾ ವಸ್ತುಗಳ ತಯಾರಿಕೆ ಮತ್ತು ಗೃಹ ಕೈಗಾರಿಕಾ ವಲಯಗಳ ಶ್ರಮಿಕರು ಸಹ ಕೂಲಿಕಾರರಾಗುವುದರಿಂದ ಅವರ ಅಗತ್ಯ ವಸ್ತುಗಳಿಗಾಗಿ ಸಹ ಮಾರುಕಟ್ಟೆಗೆ ಬರಬೇಕಾಗುತ್ತದೆ. ಹೀಗೆ ಕೈಗಾರಿಕಾ ಉತ್ಪನ್ನಗಳಿಗೆ ದೊಡ್ಡ ಆಂತರಿಕ ಮಹಾ ಮಾರುಕಟ್ಟೆ ತೆರೆದುಕೊಳ್ಳುತ್ತದೆ. ಹೊಸ ಬಂಡವಳಿಗರ ಮಾರುಕಟ್ಟೆ ಎಲ್ಲಿಂದ ಬಂತು ಎಂಬ ಪ್ರಶ್ನೆಯನ್ನು ಅಧ್ಯಾಯ–30 ಹೀಗೆ ಸಮಗ್ರವಾಗಿ ಉತ್ತರಿಸುತ್ತದೆ.

ವೃತಿ ಸಂಘ (ಗಿಲ್ಡ್) ಗಳ ಯಜಮಾನರು, ಸಣ್ಣ ಕುಶಲಕರ್ಮಿಗಳು ಮತ್ತು ಕೆಲವೊಬ್ಬರು ಕೂಲಿಕೆಲಸಗಾರರು ಸಹ ತಮ್ಮನ್ನೇ ಪುಟ್ಟ ಬಂಡವಾಳಗಾರರಾಗಿ ಪರಿವರ್ತಿಸಿಕೊಂಡರು ಮತ್ತು ಕ್ರಮೇಣ ಪೂರ್ಣ ಪ್ರಮಾಣದ ಬಂಡವಳಿಗರಾಗಿ ಹೊರಹೊಮ್ಮಿದರು. ಬಂಡವಾಳಶಾಹಿ–ಪೂರ್ವ ಸಮಾಜದಲ್ಲಿಯೇ ಲೇವಾದೇವಿ ಮತ್ತು ವ್ಯಾಪಾರಿ ಬಂಡವಾಳಕ್ಕೆ ಕೈಗಾರಿಕಾ ಬಂಡವಾಳವಾಗಿ ಪರಿವರ್ತನೆಯಾಗಲು ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿದ್ದ ನಿರ್ಬಂಧಗಳನ್ನು ಮೀರಿ, ಇತರ

ಪುಟ 14 ಕ್ಕೆ



ಭಾರತವನ್ನು ಅಮೆರಿಕನ್ ರಥದ ಇನ್ನೊಂದು ಗಾಲಿಯಾಗಿಸುತ್ತಿರುವ ಮೋದಿ



ಭಾರತದೊಂದಿಗೆ ಎಲ್ಲಾ ಅನುಕೂಲಗಳನ್ನು ಅಮೆರಿಕಾ ಪಡೆಯುತ್ತಿದ್ದು, ಪಾಕಿಸ್ತಾನ ವಿಷಯದಲ್ಲಿ ಮಧ್ಯಸ್ಥಿಕೆಗೆ ಭಾರತ ನಿರಂತರವಾಗಿ ಅಮೆರಿಕಾಕ್ಕೆ ಮನವಿ ಮಾಡುತ್ತಿರುವುದರಿಂದ, ಟ್ರಂಪ್ ಇದೀಗ ಭಾರತವು ಕಾಶ್ಮೀರ ವಿಚಾರವನ್ನು ಅಮೆರಿಕಾದ ಇಷ್ಟಕ್ಕೆ ತಕ್ಕಂತೆ ನಿರ್ವಹಿಸಬೇಕು ಎಂದು ಸಂಕೇತ ನೀಡುತ್ತಿದ್ದಾರೆ. ದ್ವಿಪಕ್ಷೀಯ ಸಂಬಂಧದಲ್ಲಿ ಯಾವ ವಿಚಾರಗಳನ್ನು ಎತ್ತಿಕೊಳ್ಳಬೇಕು ಮತ್ತು ಅದರ ಧಾಟಿ ಹೇಗಿರಬೇಕು ಎಂದು ಆದೇಶಿಸುವುದು ಅಮೆರಿಕಾಕ್ಕೆ ಸಾಧ್ಯವಾಗಿದೆ. ಇದರಿಂದ ಉದ್ಭವಿಸಿರುವ ದುರಹಂಕಾರದ ಫಲವೇ ಕಾಶ್ಮೀರ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವ ಈ ಟ್ರಂಪ್ ಹೇಳಿಕೆ.



*** ಪ್ರಕಾಶ್ ಕಾರಟ್**

ವಾಷಿಂಗ್ಟನ್‌ನಲ್ಲಿ ನಡೆದ ಮಾಧ್ಯಮ ಗೋಷ್ಠಿಯೊಂದರಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಾಶ್ಮೀರ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವಂತೆ ಭಾರತದ ಪ್ರಧಾನಿ ನರೇಂದ್ರ ಮೋದಿ ತಮ್ಮನ್ನು ವಿನಂತಿಸಿಕೊಂಡಿದ್ದಾರೆ ಎಂದು ಹೇಳಲಾದ ಚಿತ್ರವು ತಳಮಳಕಾರೀ ಪರಿಣಾಮವನ್ನು ಉಂಟು ಮಾಡಿದೆ. ಗೋಷ್ಠಿಯಲ್ಲಿ ಅವರೊಂದಿಗೆ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಉಪಸ್ಥಿತರಿದ್ದರು. ಮಧ್ಯಸ್ಥಿಕೆ ವಹಿಸುವಂತೆ ಮೋದಿ ಕೇಳಿದ್ದಾರೋ ಇಲ್ಲವೋ ಎನ್ನುವುದು ಇಲ್ಲಿ ಮುಖ್ಯವಲ್ಲ. ಆದರೆ ಮೋದಿಯವರ ವಿದೇಶಾಂಗ ನೀತಿ ಎಷ್ಟು ಆಭಾಸಕಾರಿಯಾಗಿ ಪರಿಣಮಿಸಿದೆ ಎನ್ನುವುದನ್ನು ಈ ಪ್ರಕರಣ ಬಹಿರಂಗಪಡಿಸುತ್ತದೆ ಎನ್ನುವುದು ಗಮನಾರ್ಹವಾಗಿದೆ.

ಪಾಕಿಸ್ತಾನ ಕುರಿತ ಅಮೆರಿಕದ ಧೋರಣೆಯಲ್ಲಿ ಯಾವ ರೀತಿಯ ಬದಲಾವಣೆ ಉಂಟಾಗಿದೆ ಎಂಬುದನ್ನು ಇಮ್ರಾನ್ ಖಾನ್‌ರ ಅಮೆರಿಕ ಭೇಟಿಯು ದೃಢಪಡಿಸುತ್ತದೆ. ಅಫಘಾನಿಸ್ತಾನದಿಂದ ಅಮೆರಿಕದ ಪಡೆಗಳನ್ನು ವಾಪಸ್ ಕರೆಸಿಕೊಳ್ಳಲು ಟ್ರಂಪ್ ಬಯಸಿರುವ ಹಿನ್ನೆಲೆಯಲ್ಲಿ ತಾಲಿಬಾನ್ ಮಾತುಕತೆಗೆ ಬರುವ ವಿಚಾರದಲ್ಲಿ ಪಾಕಿಸ್ತಾನದ ಪಾತ್ರ ನಿರ್ಣಾಯಕವಾಗಲಿದೆ. ಇಮ್ರಾನ್ ಖಾನ್‌ರ ಭೇಟಿಯು ತಾಲಿಬಾನ್ ಜೊತೆಗೆ ಶಾಂತಿ ಮಾತುಕತೆಯಲ್ಲಿ ಆಗಿರುವ ಪ್ರಗತಿಗೆ ಸಿಕ್ಕಿರುವ ಮಾನ್ಯತೆಯಂತೆ ಆಗಿದೆ. ಇದರ ಶ್ರೇಯಸ್ಸನ್ನು ಪಾಕಿಸ್ತಾನಕ್ಕೆ ಸಲಲಿಸಲಾಗಿದೆ.. ಈ ಇಡೀ ಪ್ರಕ್ರಿಯೆಯಲ್ಲಿ ಭಾರತವನ್ನು ಹೊರಗಿಡಲಾಗಿದೆ ಎನ್ನುವುದೇ ಏಕೈಕ ಸಮಸ್ಯೆಯಾಗಿದೆ.

ತನ್ನೆಲ್ಲ ವಿಚಾರಗಳನ್ನು ಅಮೆರಿಕಕ್ಕೆ ಬಿಟ್ಟುಕೊಟ್ಟ ಮೋದಿ ಸರಕಾರ ಈಗ ಹಠಾತ್ತನೆ ಒಂದು ಮುಜುಗರದ ಪರಿಸ್ಥಿತಿಗೆ ಸಿಲುಕಿ ಕೊಂಡಿದೆ. ಟ್ರಂಪ್‌ಗಾದರೋ ಅಫಘಾನಿಸ್ತಾನದಿಂದ ಹೊರಹೋಗುವುದು ಮತ್ತು ಕಾಶ್ಮೀರ ಸಮಸ್ಯೆ ಒಂದಕ್ಕೊಂದು ತಳಕು ಹಾಕಿಕೊಂಡಿದೆ– ಪಾಕಿಸ್ತಾನ ಬಯಸುವುದು ಕೂಡ ಇದನ್ನೇ.

ಕಳೆದ ಐದು ವರ್ಷಗಳಲ್ಲಿ ಮೋದಿಯವರು ಒಂದೊಂದೇ ಹೆಜ್ಜೆಯಾಗಿ ಅಮೆರಿಕದ ಭೌಗೋಳಿಕ–ರಾಜಕೀಯ ಕಾರ್ಯತಂತ್ರಕ್ಕೆ ಭಾರತವನ್ನು ಜೋಡಿಸಿದ್ದರು. ಅವರು ಅಮೆರಿಕದ "ಇಂಡೊ–ಪೆಸಿಫಿಕ್" ವ್ಯೂಹಕ್ಕೆ ಬಲಿಬಿದ್ದರು; ಮಿಲಿಟರಿ ಸಾಗಾಣಿಕೆ ಒಪ್ಪಂದಕ್ಕೆ ಸಹಿಹಾಕುವ ಮೂಲಕ ಅಮೆರಿಕದ ಸೇನಾ ಕಾರ್ಯಾಚರಣೆಗಳಿಗೆ ಭಾರತದ ನೆಲೆಗಳನ್ನು ಬಳಸಿಕೊಳ್ಳುವ ಹಕ್ಕನ್ನು ಅಮೆರಿಕಕ್ಕೆ ಅವರು ಕೊಟ್ಟರು. ಅಮೆರಿಕದ ದೊಡ್ಡ ರಕ್ಷಣಾ ಪಾಲುದಾರನಾಗುವ ಮೂಲಕ ಮೋದಿ ಸರಕಾರವು ಭಾರತದ ಮಿಲಿಟರಿಯು ಅಮೆರಿಕದ ಸಶಸ್ತ್ರ ಪಡೆಗಳೊಂದಿಗೆ ಸಿಲುಕಿಕೊಳ್ಳುವ ಇತರ ಒಡಂಬಡಿಕೆಗಳಿಗೂ ಸಹಿ ಹಾಕಲು ಮುಂದಾಯಿತು.

ಒಂದು ಅಡಿಯಾಳು ಮಿತ್ರನಾಗಿ ಅಮೆರಿಕಕ್ಕೆ ಭಾರತ ಬಾಲಾಕೋಟ್‌ನಲ್ಲಿ ನಡೆದ ತನ್ನ ಪ್ರತೀಕಾರದ ವೈಮಾನಿಕ ದಾಳಿಯ ಬಗ್ಗೆ ಮಾಹಿತಿ ಒದಗಿಸಿತು. ಭಾರತೀಯ ವಾಯುಪಡೆಯ ವಿಮಾನವನ್ನು ಹೊಡೆದುರುಳಿಸಿದ ನಂತರ ಪೈಲಟ್ ಅಭಿನಂದನ್‌ರನ್ನು ಬಿಡುಗಡೆ ಮಾಡಲಾಗುವುದು ಎಂದು ಮೊದಲು ಪ್ರಕಟಿಸಿದ್ದು ಟ್ರಂಪ್. ತನ್ನ ಆಡಳಿತ ತೀವ್ರ ಒತ್ತಡ ಹೇರಿದ್ದರಿಂದಲೇ ಹಫೀಜ್ ಸಯೀದ್‌ನನ್ನು ಬಂಧಿಸಲಾಯಿತು ಎಂದೂ ಟ್ರಂಪ್ ಹೇಳಿಕೊಂಡಿದ್ದಾರೆ.

ಈ ರೀತಿಯಾಗಿ ಭಾರತದೊಂದಿಗೆ ಎಲ್ಲಾ ಅನುಕೂಲಗಳನ್ನು ಅಮೆರಿಕಾ ಪಡೆಯುತ್ತಿದ್ದು, ಪಾಕಿಸ್ತಾನ ವಿಷಯದಲ್ಲಿ ಮಧ್ಯಸ್ಥಿಕೆಗೆ ಭಾರತ ನಿರಂತರವಾಗಿ ಅಮೆರಿಕಾಕ್ಕೆ ಮನವಿ ಮಾಡುತ್ತಿರುವುದರಿಂದ, ಟ್ರಂಪ್ ಇದೀಗ ಭಾರತವು ಕಾಶ್ಮೀರ ವಿಚಾರವನ್ನು ಅಮೆರಿಕಾದ ಇಷ್ಟಕ್ಕೆ ತಕ್ಕಂತೆ ನಿರ್ವಹಿಸಬೇಕು ಎಂದು ಸಂಕೇತ ನೀಡುತ್ತಿದ್ದಾರೆ.

ಏಕಮುಖ ರಸ್ತೆಯಲ್ಲಿ ಸಾಗಿದ ಮೇಲೆ, ಭಾರತವು ಅಮೆರಿಕದ ರಥದ ಎರಡು ಚಕ್ರಗಳಲ್ಲಿ ಒಂದು ಚಕ್ರವಾಗುವ ಸಂಭವವನ್ನು ಮೋದಿ ಎದುರಿಸಬೇಕಾಗಿ ಬಂದಿದೆ. ಪಾಕಿಸ್ತಾನ ಅದರ ಇನ್ನೊಂದು ಗಾಲಿಯಾಗಿದೆ. ತಾಲಿಬಾನ್ ಅಫಘಾನಿಸ್ತಾನವನ್ನು ವಶಪಡಿಸಿ ಕೊಂಡ ಮೇಲೆ ಅದರ ಪ್ರತ್ಯಾಘಾತವನ್ನು ಕೂಡ ಅವರು ಎದುರಿಸಬೇಕಾಗುತ್ತದೆ.

ಭಾರತವು ಅಮೆರಿಕದ ಆದೇಶಗಳಿಗೆ ಮಣಿದು ಇರಾನ್ ಮತ್ತು ವೆನಿಜುವೆಲಾದಿಂದ ತೈಲ ಖರೀದಿಯನ್ನು ನಿಲ್ಲಿಸಿದೆ. ಇಷ್ಟೆಲ್ಲಾ ವಿಧೇಯತೆಯಿಂದ ಹಿಂಬಾಲಿಸಿದ ನಂತರವೂ ಅಫಘಾನಿಸ್ತಾನದಲ್ಲಿ ಪರಿವರ್ತನೆಯ ವಿಚಾರದಲ್ಲಿ ಪಾಕಿಸ್ತಾನಕ್ಕೆ ಮಹತ್ವದ ಪಾತ್ರವನ್ನು ಟ್ರಂಪ್ ವಹಿಸುತ್ತಿರುವ ದೃಶ್ಯ ನಿಜಕ್ಕೂ ಬಹಳ ನೋವಿನ ಸಂಗತಿಯಾಗಿರಬೇಕು.

ದ್ವಿಪಕ್ಷೀಯ ಸಂಬಂಧದಲ್ಲಿ ಯಾವ ವಿಚಾರಗಳನ್ನು ಎತ್ತಿಕೊಳ್ಳಬೇಕು ಮತ್ತು ಅದರ ಧಾಟಿ ಹೇಗಿರಬೇಕು ಎಂದು ಆದೇಶಿಸುವುದು ಅಮೆರಿಕಾಕ್ಕೆ ಸಾಧ್ಯವಾಗಿದೆ. ಇದರಿಂದ ಉದ್ಭವಿಸಿರುವ ದುರಹಂಕಾರದ ಫಲವೇ ಕಾಶ್ಮೀರ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವ ಈ ಟ್ರಂಪ್ ಹೇಳಿಕೆ. ಟ್ರಂಪ್ ಹೇಳಿಕೆಯನ್ನು ಎದುರಿಸುವ ಸಲುವಾಗಿ ಭಾರತೀಯ ಅಧಿಕೃತ ಮೂಲಗಳು ಒಸಾಕಾದಲ್ಲಿ ಟ್ರಂಪ್–ಮೋದಿ ಭೇಟಿಯ ಸಂದರ್ಭದಲ್ಲಿ ಇರಾನ್, 5ಜಿ, ವಾಣಿಜ್ಯ ಮತ್ತು ರಕ್ಷಣೆ– ಹೀಗೆ ನಾಲ್ಕು ವಿಷಯಗಳನ್ನು ಮಾತ್ರ ಚರ್ಚಿಸಲಾಗಿತ್ತು ಎಂದು ತಿಳಿಸಿವೆ. ಈ ಅಜೆಂಡಾವೇ ಸಂಬಂಧವು ಯಾವ ಕಡೆಗೆ ವಾಲಿದೆ ಎಂಬುದನ್ನು ತೋರಿಸುತ್ತದೆ–ಎಲ್ಲವೂ ಅಮೆರಿಕದ ಪರವೇ ವಾಲಿದೆ.

ಭಾರತ ತೈಲ ಆಮದು ಸೇರಿದಂತೆ ಇರಾನ್ ಜತೆಗಿನ ಎಲ್ಲಾ ವಾಣಿಜ್ಯ ಸಂಬಂಧಗಳನ್ನು ಕಡಿದುಕೊಳ್ಳಬೇಕು ಎನ್ನುವುದು ಅಮೆರಿಕದ ಬಯಕೆಯಾಗಿದೆ. ಚೀನಾ ಕಂಪೆನಿ ಹುವೆಯ್ ಅನ್ನು ಭಾರತ ಒಳಗೊಳಿಸಬಾರದು ಹಾಗೂ ಭಾರತದಲ್ಲಿ 5ಜಿ ಜಾಲ ಅಭಿವೃದ್ಧಿ ಪಡಿಸುವಲ್ಲಿ ಅದಕ್ಕೆ ಯಾವುದೇ ಪಾತ್ರವನ್ನು ವಹಿಸಬಾರದು ಎನ್ನುವುದು ಅಮೆರಿಕದ ಇಚ್ಛೆಯಾಗಿದೆ. ವಾಣಿಜ್ಯ ವಿಚಾರದಲ್ಲಿ ಹೇಳುವುದಾದರೆ ಟ್ರಂಪ್ ಈಗಾಗಲೇ ಭಾರತದ ವಿರುದ್ಧ ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ಹಾಗೂ ಭಾರತವು ಸುಂಕದರಗಳನ್ನು ಇಳಿಸಬೇಕು ಮತ್ತು ಹೆಚ್ಚೆಚ್ಚು ಅಮೆರಿಕದ ವಸ್ತುಗಳನ್ನು ಖರೀದಿಸಬೇಕು ಎಂಬುದು ಅಮೆರಿಕದ ಬಯಕೆಯಾಗಿದೆ. ಅಂತಿಮವಾಗಿ, ರಕ್ಷಣಾ ಅಜೆಂಡಾವೆಂದರೆ ಅಮೆರಿಕದ ಶಸ್ತ್ರಾಸ್ತ್ರಗಳನ್ನು ಮತ್ತು ರಕ್ಷಣಾ ಸಾಮಗ್ರಿಗಳನ್ನು ಖರೀದಿಸಬೇಕೆಂದೇ ಅದರ ಅರ್ಥವಿದ್ದಿರಬೇಕು.

ಈ ಏಕಮುಖ ರಸ್ತೆಯಲ್ಲಿ ಸಾಗಿದ ಮೇಲೆ, ಭಾರತವು ಅಮೆರಿಕದ ರಥದ ಎರಡು ಚಕ್ರಗಳಲ್ಲಿ ಒಂದು ಚಕ್ರವಾಗುವ ಸಂಭವವನ್ನು ಮೋದಿ ಎದುರಿಸಬೇಕಾಗಿ ಬಂದಿದೆ. ಪಾಕಿಸ್ತಾನ ಅದರ ಇನ್ನೊಂದು ಗಾಲಿಯಾಗಿದೆ. ತಾಲಿಬಾನ್ ಅಫಘಾನಿಸ್ತಾನವನ್ನು ವಶಪಡಿಸಿಕೊಂಡ ಮೇಲೆ ಅದರ ಪ್ರತ್ಯಾಘಾತವನ್ನು ಕೂಡ ಅವರು ಎದುರಿಸಬೇಕಾಗುತ್ತದೆ.




ವ್ಯಂಗ್ಯಚಿತ್ರ: ಶೇಖರ್ ಗುರೇರಾ

ಭಾರತವು ಅಮೆರಿಕದ ಆದೇಶಗಳಿಗೆ ಮಣಿದು ಇರಾನ್ ಮತ್ತು ವೆನಿಜುವೆಲಾದಿಂದ ತೈಲ ಖರೀದಿಯನ್ನು ನಿಲ್ಲಿಸಿದೆ. ಇಷ್ಟೆಲ್ಲಾ ವಿಧೇಯತೆಯಿಂದ ಹಿಂಬಾಲಿಸಿದ ನಂತರವೂ ಅಫಘಾನಿಸ್ತಾನದಲ್ಲಿ ಪರಿವರ್ತನೆಯ ವಿಚಾರದಲ್ಲಿ ಪಾಕಿಸ್ತಾನಕ್ಕೆ ಮಹತ್ವದ ಪಾತ್ರವನ್ನು ಟ್ರಂಪ್ ವಹಿಸುತ್ತಿರುವ ದೃಶ್ಯ ನಿಜಕ್ಕೂ ಬಹಳ ನೋವಿನ ಸಂಗತಿಯಾಗಿರಬೇಕು.



ಕರಡು ರಾಷ್ಟ್ರೀಯ ಶಿಕ್ಷಣ ಧೋರಣೆ ಸ್ವೀಕಾರಾರ್ಹವಾಗಿಲ್ಲ –ಮಾನವ ಸಂಪನ್ಮೂಲ ಮಂತ್ರಿಗಳಿಗೆ ಯೆಚುರಿ ಪತ್ರ

"ನಮ್ಮ ಇಂದಿನ ಪರಿಸ್ಥಿತಿಗಳಿಗೆ ಸೂಕ್ತವಾದ ಧೋರಣೆ ರೂಪಿಸಲು ವ್ಯಾಪಕ ಸಮಾಲೋಚನೆಗಳ ಅಗತ್ಯವಿದೆ"



ಕೇಂದ್ರ ಸರಕಾರ ಪ್ರಕಟಿಸಿರುವ ಕರಡು ರಾಷ್ಟ್ರೀಯ ಶಿಕ್ಷಣ ಧೋರಣೆ(ಡಿ ಎನ್ ಇ ಪಿ) ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮಾಣ , ಗುಣಮಟ್ಟ ಮತ್ತು ಸಮತ್ವದ ನಡುವೆ ಒಂದು ಸಮತೋಲನವನ್ನು ರೂಪಿಸುವ ಬದಲು ಶಿಕ್ಷಣ ವ್ಯವಸ್ಥೆಯ ಮತ್ತು ಸಂರಚನೆಗಳ ಕೇಂದ್ರೀಕರಣ, ವ್ಯಾಪಾರೀಕರಣ ಮತ್ತು ಕೋಮುವಾದೀಕರಣ ಆಗುವಂತೆ ಮಾಡುವಂತದ್ದು, ಇದು ಹೆಚ್ಚು ಮೇಲ್ವರ್ಗಗಳ ಪರವಾದ, ಕಾರ್ಪೊರೇಟ್‌ಗಳ ಪರವಾದ ಒತ್ತಿಗೆ ಪ್ರೋತ್ಸಾಹ ನೀಡುವಂತದ್ದಾಗಿದೆ, ಆದ್ದರಿಂದ ಅದನ್ನು ಅದು ಈಗಿರುವ ಸ್ವರೂಪದಲ್ಲಿ ಒಪ್ಪುವುದು ಸಾಧ್ಯವಿಲ್ಲ, ಇಂದಿನ ನಮ್ಮ ಪರಿಸ್ಥಿತಿಗಳಿಗೆ ಸೂಕ್ತವಾದ ಒಂದು ರಾಷ್ಟ್ರೀಯ ಶಿಕ್ಷಣ ಧೋರಣೆಯ ಬಗ್ಗೆ ವ್ಯಾಪಕ ಸಮಾಲೋಚನೆಗಳ ನಂತರವೇ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳಿಗೆ ಸಿಪಿಐ(ಎಂ) ಪರವಾಗಿ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಸಿಪಿಐ(ಎಂ) ಈ ಕರಡು ಧೋರಣೆಯ ದಸ್ತಾವೇಜನ್ನು ಆಳವಾಗಿ ಪರಿಶೀಲಿಸಿದ್ದು ಈ ಕುರಿತಂತೆ ಅದರ ಪರಿವೀಕ್ಷಣೆಗಳನ್ನು ಈ ಪತ್ರದೊಂದಿಗೆ ಸರಕಾರಕ್ಕೆ ಸಲ್ಲಿಸಲಾಗಿದೆ.

ಇವು ಈ ಕರಡು ಧೋರಣೆಯ ಎಲ್ಲ ಆಯಾಮಗಳನ್ನು ಕುರಿತಾಗಿವೆ, ವಿಶೇಷವಾಗಿ ಇದರ ಅಧ್ಯಾಯ 23 ರಲ್ಲಿ ಪ್ರಸ್ತಾಪಿಸಿರುವ 'ರಾಷ್ಟ್ರೀಯ ಶಿಕ್ಷಾ ಆಯೋಗ'ದ ಮೂಲಕ ಅಧಿಕಾರಗಳ ಕೇಂದ್ರೀಕರಣದ ಅಂಶಗಳು ರಾಜ್ಯ ಸರಕಾರಗಳ ಅಧಿಕಾರಗಳನ್ನು ಮೊಟಕು ಮಾಡುತ್ತವೆ, ಸಂವಿಧಾನದ ಒಕ್ಕೂಟ ತತ್ವಕ್ಕೆ ವಿರುದ್ಧವಾಗಿವೆ, ಆದ್ದರಿಂದ ಅವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂಬ ಸಿಪಿಐ(ಎಂ) ಆಗ್ರಹಕ್ಕೆ ಯೆಚುರಿ ತಮ್ಮ ಪತ್ರದಲ್ಲಿ ಒತ್ತು ನೀಡಿದ್ದಾರೆ.

ಈ ಹಿಂದಿನ ರಾಷ್ಟ್ರೀಯ ಶಿಕ್ಷಣ ಧೋರಣೆ ಕುರಿತಾದ ಭಾರತ ಸರಕಾರದ ದಸ್ತಾವೇಜಿನ 33 ವರ್ಷಗಳ ನಂತರ ಬಂದಿರುವ ಈ ಕರಡು ಹಿಂದಿನ ರಾಷ್ಟ್ರೀಯ ಶಿಕ್ಷಣ ಧೋರಣೆಯ ಸಾಧನೆಗಳು ಮತ್ತು ವಿಫಲತೆಗಳನ್ನು ವಸ್ತುನಿಷ್ಟವಾಗಿ ಪರಾಮರ್ಶಿಸುತ್ತದೆ, ಮತ್ತು ಈ ಅವಧಿಯಲ್ಲಿ ಎದ್ದು ಬಂದಿರುವ ಹೊಸ ಸವಾಲುಗಳನ್ನು ವಿಶ್ಲೇಷಿಸಿ ರಾಷ್ಟ್ರನಿರ್ಮಾಣದ ಈ ಒಂದು ಮಹತ್ವದ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವ ಆಕಾಂಕ್ಷೆಗಳನ್ನು ಕುರಿತಂತೆ ಸಂವಿಧಾನಿಕ ನಿರ್ದೇಶನಗಳನ್ನು ಪರಿಪಾಲಿಸುವ ಕಣ್ನೋಟವನ್ನು ನೀಡುತ್ತದೆ ಎಂದು ಸಹಜವಾಗಿ ನಿರೀಕ್ಷಿಸಲಾಗಿತ್ತು. ಆದರೆ ನಮ್ಮ ಮುಂದಿರುವುದು ಇವಕ್ಕೆ ತೊಡಕುಂಟು ಮಾಡುವ ಒಂದು ದಸ್ತಾವೇಜು ಎನ್ನುತ್ತ ಸಿಪಿಐ(ಎಂ) ತನ್ನ ಪರಿವೀಕ್ಷಣೆಗಳ ಪೀಠಿಕೆಯಲ್ಲಿ ಅದನ್ನು ವಿಷದಪಡಿಸಿದೆ.

ಶಾಲಾಶಿಕ್ಷಣ ಮತ್ತು ಉನ್ನತ ಶಿಕ್ಷಣ ಕುರಿತ ದಸ್ತಾವೇಜಿನಲ್ಲಿರುವ ಅಂಶಗಳು, ಮತ್ತು 'ರಾಷ್ಟ್ರೀಯ ಶಿಕ್ಷಾ ಆಯೋಗ'ವನ್ನು ರಚಿಸುವ ಪ್ರಸ್ತಾವದಲ್ಲಿ ಹೇಳಿರುವ ಅಂಶಗಳನ್ನು ವಿವರವಾಗಿ ಪರಿಶೀಲಿಸಿದ ನಂತರ ಸಿಪಿಐ(ಎಂ) ಈ ಕುರಿತಂತೆ ತನ್ನ ತೀರ್ಮಾನಗಳನ್ನು ಸರಕಾರಕ್ಕೆ ಸಲ್ಲಿಸಿದ್ದು ಅವು ಹೀಗಿವೆ:

"ಈ ಕರಡು ಈಗಿರುವ ವ್ಯವಸ್ಥೆಯ ಸಾಮರ್ಥ್ಯದ, ಅಥವ ಅದನ್ನು ಸರಿಪಡಿಸಬೇಕಾದ ಮತ್ತು ಅದರ ಅಸಮರ್ಪಕತೆಗಳನ್ನು ನಿವಾರಿಸಬೇಕಾದ ಅಗತ್ಯದ ಬಗ್ಗೆ ಒಂದು ಪ್ರಾಮಾಣಿಕ ಆಕಲನ ನಡೆಸುವ ಬದಲು ಸಂರಚನಾ ಪರಿವರ್ತನೆಯತ್ತ ವಾಲಿದೆ. ಇದು, ಭಾರತದ ಶಿಕ್ಷಣ ಧೋರಣೆಯ ವಿಷಯದಲ್ಲಿ ಈ ಹಿಂದಿನ ಮೈಲಿಗಲ್ಲು ದಸ್ತಾವೇಜು ಗಳಾದ ರಾಧಾಕೃಷ್ಣನ್ ಸಮಿತಿ ವರದಿ (1948), ತಾಂತ್ರಿಕ ಶಿಕ್ಷಣದ ಬಗ್ಗೆ ಮುದಲಿಯಾರ್ ಸಮಿತಿಯ ವರದಿ ಮತ್ತು ಕೊಠಾರಿ ಆಯೋಗದ ವರದಿ (1966) ಯ ಕಣ್ನೋಟ ಮತ್ತು ಪ್ರಸ್ತಾವಗಳೊಡನೆ ಸಂವಾದಕ್ಕೆ ಮುಂದಾಗಲು ನಿರಾಕರಿಸುವುದೇ ಇದನ್ನು ಸ್ಪಷ್ಟಪಡಿಸುತ್ತದೆ. ಸ್ವತಂತ್ರ ಭಾರತದ ಅಭಿವೃದ್ಧಿಯ ಆರಂಭದ ಘಟ್ಟಗಳಲ್ಲಿ ಶಿಕ್ಷಣದ ಸಾರ್ವಜನಿಕ ಮೌಲ್ಯ ಮತ್ತು ಉದ್ದೇಶಗಳ ರೂಪುರೇಷೆಗಳನ್ನು ಕೊಟ್ಟಿದ್ದ ದಸ್ತಾವೇಜುಗಳಿವು., ಶಿಕ್ಷಣ ರಂಗದಲ್ಲಿ ಎದ್ದು ಬರುತ್ತಿರುವ ಸವಾಲುಗಳನ್ನು ಎದುರಿಸುವಲ್ಲಿ ಸಾತತ್ಯ ಕಾಣುತ್ತಿಲ್ಲ. ಇದು ಪ್ರಜಾಪ್ರಭುತ್ವ ನೀತಿಗಳು, ಒಕ್ಕೂಟ ಆಳ್ವಿಕೆ ಮತ್ತು ಸಾರ್ವಜನಿಕ ವಿಶ್ವಾಸದ ಬಗ್ಗೆ ಎಲ್ಲಿಲ್ಲದ ತುಚ್ಛೀಕಾರವನ್ನು ಎತ್ತಿ ತೋರುತ್ತದೆ.

ಭಾರತೀಯ ಸಂವಿಧಾನದಲ್ಲಿ ಇರುವ ಅಧಿಕಾರಗಳ ಸಮತೋಲನವನ್ನು ಉಪೇಕ್ಷಿಸಿ ಇದು ಕಾರ್ಯಾಂಗಕ್ಕೆ ಎಲ್ಲ ನಿರ್ಣಯ ಕೈಗೊಳ್ಳುವ ಅಧಿಕಾರಗಳನ್ನು ಕೊಡುತ್ತದೆ, ಈ ಮೂಲಕ ಇದುವರೆಗೆ ಹಲವು ಸಂಸ್ಥೆಗಳನ್ನು ಮತ್ತು ಜನಗಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಸಂಪನ್ಮೂಲಗಳನ್ನು ನಿರ್ಮಿಸುವಲ್ಲಿ ಸಕ್ರಿಯವಾಗಿ ತೊಡಗಿದ್ದ ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳಿಗೆ ಯಾವ ಅಧಿಕಾರವನ್ನೂ ಉಳಿಸಿಲ್ಲ.

ಭಾರತದ ಶಿಕ್ಷಣ ಧೋರಣೆಯನ್ನು ಖಾಸಗಿ ಹೂಡಿಕೆಯ ಅಗತ್ಯಗಳೊಂದಿಗೆ ಜೋಡಿಸುವ ಈ ಕರಡು ಧೋರಣೆಯ ಹಿನ್ನೆಲೆಯಲ್ಲಿ ಜಾಗತಿಕ ಮಾರುಕಟ್ಟೆಯ ಕೊಳ್ಳುಬಾಕತನ ರಾರಾಜಿಸುತ್ತಿದೆ. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಘೋಷಣೆಯೊಂದಿಗೆ ಹೊಂದಿಕೊಳ್ಳುವಲ್ಲಿ ಇದು ವಿಫಲವಾಗಿದೆ, ಇನ್ನು, 'ಸಬ್ ಕಾ ವಿಶ್ವಾಸ್' ಬಗ್ಗೆಯಂತೂ ಹೇಳುವಂತೆಯೇ ಇಲ್ಲ. ಕರಡನ್ನು ಸಿದ್ಧಪಡಿಸಿದ ಸಮಿತಿ ಹಲವಾರು ಪರಿಣಿತರೊಂದಿಗೆ ಸಮಾಲೋಚನೆ ನಡೆಸಿದಂತೆ ಕಾಣುತ್ತದೆ. ಆದರೆ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸಂಸ್ಥೆಗಳು ಎಲ್ಲ ಹಂತಗಳಲ್ಲೂ ಪ್ರತಿನಿಧಿಸುವ ಸಾಮೂಹಿಕ ಆಕಾಂಕ್ಷೆಗಳನ್ನು ಉಪೇಕ್ಷಿಸುವ ಅಪರಾಧವನ್ನು ಮಾಡಿದೆ. ಭಾರತದ ಯುವ ಜನವಿಭಾಗ ದೇಶದ ಶಿಕ್ಷಣ ಕಾರ್ಯಕ್ರಮದಲ್ಲಿ ಒಂದು ನ್ಯಾಯಯುತ ರೀತಿಯಲ್ಲಿ ಮತ್ತು ವಿಶ್ವಾಸಪೂರ್ಣವಾಗಿ ಭಾಗವಹಿಸುವುದನ್ನು ಸಾಧ್ಯಗೊಳಿಸಲು ಎದುರಿಸಬೇಕಾದ ಹಲವು ನೈಜ ಸವಾಲುಗಳ ಬಗ್ಗೆ ಇದಕ್ಕೆ ಅರಿವೇ ಇದ್ದಂತಿಲ್ಲ ಎಂದಿರುವ ಸಿಪಿಐ(ಎಂ)ನ ಪರಿವೀಕ್ಷಣೆ "ನಾವು ಈ ಕರಡು ರಾಷ್ಟ್ರೀಯ ಶಿಕ್ಷಣ ಧೋರಣೆಯನ್ನು ತಿರಸ್ಕರಿಸುತ್ತೇವೆ" ಎಂದು ಹೇಳಿದೆ.

ಮುಂದುವರೆದು ಅದು "ನಾಗರಿಕ ಸಮಾಜ ಹಾಗೂ ರಾಜಕೀಯ ವಲಯದ ವಿಭಿನ್ನ ವಿಭಾಗಗಳಿಂದ ರಾಷ್ಟ್ರೀಯ ಶಿಕ್ಷಣ ಧೋರಣೆಯ ಕರಡನ್ನು ಮರುರೂಪಿಸುವಲ್ಲಿ ಅಗತ್ಯವಾದ ಅಂಶಗಳನ್ನು ಪಡೆಯಲು ಒಂದು ವಿಶ್ವಾಸಾರ್ಹ ಮತ್ತು ಸಮರ್ಥನೀಯ ಚಟುವಟಿಕೆ ನಡೆಸುವತ್ತ ವ್ಯಾಪಕ ಸಮಾಲೋಚನೆಗಳನ್ನು ನಡೆಸಲು ಅಧಿಕಾರ ನೀಡಬೇಕು" ಎಂದು ಆಗ್ರಹಿಸಿದೆ. ಇಂತಹ ಒಂದು ದಸ್ತಾವೇಜನ್ನು ಭಾರತೀಯ ಸಂವಿಧಾನದ 8ನೇ ಶೆಡ್ಯೂಲಿನಲ್ಲಿ ಮಾನ್ಯ ಮಾಡಿರುವ ಎಲ್ಲ ಭಾಷೆಗಳಲ್ಲಿ, ಹಾಗೂ ಪಡೆಯಬಹುದಾದ ರೀತಿಯಲ್ಲಿ ಲಭ್ಯಗೊಳಿಸಬೇಕು ಎಂದೂ ಅದು ಹೇಳಿದೆ.

ಎಲ್ಲ ಭಾರತೀಯರ ಭದ್ರತೆ ಮತ್ತು ಐಕ್ಯತೆಯನ್ನು ಧ್ವಂಸ ಮಾಡಲು ಪ್ರಯತ್ನಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಹೊಣೆ ನಿಮಗಿದೆ–ಗೃಹಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ



ಯುಟ್ಯೂಬ್‌ನಲ್ಲಿ ಮತ್ತು ವಾಟ್ಸ್‌ಆಪ್ ಗುಂಪುಗಳಲ್ಲಿ ಒಂದು ಸಮುದಾಯದ ವಿರುದ್ದ ಇನ್ನೊಂದು ಸಮುದಾಯವನ್ನು ಕೋಮುವಾದಿ ದ್ವೇಷ, ಹಿಂಸಾಚಾರ ಮತ್ತು ಭಯೋತ್ಪಾದನೆಗೆ ಉದ್ರೇಕಿಸುವ ಕೆಲವಾರು ವೀಡಿಯೋಗಳು ಹರಿದಾಡುತ್ತಿವೆ. ಒಂದು ವೀಡಿಯೋ "ಎಲ್ಲ ಹಿಂದುಗಳು" ತಥಾಕಥಿತ 'ಲವ್ ಜಿಹಾದ್' ವಿರುದ್ಧ ಪಾಠ ಕಲಿಸಲು ಮುಸ್ಲಿಮರ ಮನೆಗಳಿಗೆ ಪ್ರವೇಶಿಸಬೇಕು ಎಂದು ಉದ್ರೇಕಿಸುತ್ತದೆ. ಇನ್ನೊಂದು ಜೈಶ್ರೀರಾಮ್ ಹೇಳದವರನ್ನು ಸ್ಮಶಾನಕ್ಕೆ ಕಳಿಸಲಾಗುವುದು ಎಂದು ಬೆದರಿಸುತ್ತದೆ.

ಈ ಕುರಿತು ಕೇಂದ್ರ ಗೃಹಮಂತ್ರಿ ಅಮಿತ್ ಷಾ ಅವರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಪತ್ರ ಬರೆದು ಈ ಕ್ರಿಮಿನಲ್ ಕೃತ್ಯಗಳಿಂದ ದೇಶದ ಪ್ರತಿಷ್ಠೆಗೆ ತೀವ್ರ ಧಕ್ಕೆ ತರುತ್ತಿರುವವರು ಮತ್ತು ಎಲ್ಲ ಭಾರತೀಯರ ಭದ್ರತೆ ಮತ್ತು ಐಕ್ಯತೆಯನ್ನು ಧ್ವಂಸ ಮಾಡಲು ಪ್ರಯತ್ನಿಸುತ್ತಿರುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಇಂತಹ ಮೂರು ವೀಡಿಯೋಗಳ ಲಿಂಕ್ ಕೊಡುತ್ತ ಬೃಂದಾ ಕಾರಟ್, ಈ ವೀಡಿಯೋಗಳು ಮತ್ತು ಅವುಗಳ ಪ್ರಸಾರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ, ಸೈಬರ್ ಕಾನೂನುಗಳು ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿಯಲ್ಲಿಯೂ ಕ್ರಿಮಿನಲ್ ಕೃತ್ಯಗಳಾಗಿವೆ. ತಮ್ಮ ವಾಹಿನಿಗಳಲ್ಲಿ ಇಂತಹ ರಾಷ್ಟ್ರ–ವಿರೋಧಿ ವಿಷಯಗಳನ್ನು ಪಸರಿಸಲು ಬಿಡುವಲ್ಲಿ ಯುಟ್ಯೂಬ್ ವಾಹಿನಿಯ ಮಾಲಕರು/ ಅದಕ್ಕೆ ಅಧಿಕಾರ ಕೊಡುವ ಹತೋಟಿ ಇರುವವರು ಕೂಡ ಅಪರಾಧಿಗಳಾಗುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ.

ಯುಟ್ಯೂಬ್ ಜಗತ್ತನ್ನೆಲ್ಲ ತಲುಪುವುದರಿಂದ ಭಾರತದಿಂದ ಹೊಮ್ಮಿರುವ ಇಂತಹ ಕೋಮುವಾದಿ ದ್ವೇಷ ಮತ್ತು ಅತ್ಯಂತ ಉದ್ರೇಕಕಾರಿ ವೀಡಿಯೋಗಳು ದೇಶದ ಪ್ರತಿಷ್ಠೆಗೆ ಗಂಭೀರ ಧಕ್ಕೆ ತರುತ್ತವೆ ಮತ್ತು ಇದು ಅಪಾಯಕಾರಿ ದುಷ್ಪರಿಣಾಮಗಳನ್ನು ಬೀರಬಹುದು ಎಂಬ ಸಂಗತಿಯತ್ತ ಗಮನ ಸೆಳೆಯುತ್ತ ಬೃಂದಾ ಕಾರಟ್ ಅವರು "ಗೃಹಮಂತ್ರಿಯಾಗಿ ನಿಮಗೆ, ನಮ್ಮ ಎಲ್ಲ ನಾಗರಿಕರಿಗೆ ಭದ್ರತೆ ಮತ್ತು ಸುಸ್ಥಿತಿಯನ್ನು ಖಾತ್ರಿಗೊಳಿಸುವ ಹಾಗೂ ಎಲ್ಲ ಭಾರತೀಯರ ಭದ್ರತೆ ಮತ್ತು ಐಕ್ಯತೆಯನ್ನು ಧ್ವಂಸ ಮಾಡಲು ಪ್ರಯತ್ನಿಸುತ್ತಿರುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವ ಹೊಣೆಗಾರಿಕೆ ಇದೆ" ಎಂದು ಹೇಳಿದ್ದಾರೆ.



ಬೃಂದಾ ಕಾರಟ್ ಮತ್ತು ಸಿಪಿಐ(ಎಂ) ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ.ತಿವಾರಿ ಈ ಕುರಿತು ಎಫ್‌ಐಆರ್ ಮತ್ತು ಇತರ ಕ್ರಮಗಳನ್ನು ಕೈಗೊಳ್ಳುವಂತೆ ದಿಲ್ಲಿಯ ಡೆಪ್ಯುಟಿ ಪೋಲೀಸ್ ಕಮಿಷನರ್ ಮಂದೀಪ್ ಸಿಂಗ್ ಅವರಿಗೂ ಪತ್ರ ಬರೆದಿದ್ದು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರನ್ನು ಕೋರಲಾಗಿದೆ.

1. ಒಂದು ಎಫ್‌ಐಆರ್ ಹಾಕಿ, ಈ ಮಾತುಗಳನ್ನು ಆಡುವ ಮೂಲಕ ವಿವಿಧ ಕಾಯ್ದೆಗಳ ಅಡಿಯಲ್ಲಿ ಒಂದು ಅಪರಾಧ ಎಸಗಿರುವ ವ್ಯಕ್ತಿಗಳ ವಿರುದ್ಧ ತಕ್ಷಣವೇ ಕ್ರಮವನ್ನು ಕೈಗೊಳ್ಳಬೇಕು.
2. ವೀಡಿಯೋದಲ್ಲಿ ಹೆಸರಿಸಿರುವ ಕಂಪನಿ ಜನತಾ ಮ್ಯೂಸಿಕ್ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕು.
3. ಈ ವೀಡಿಯೋಗಳನ್ನು ತಮ್ಮ ವಾಹಿನಿಯಲ್ಲಿ ಪಸರಿಸಲು ಅನುಮತಿ ನೀಡಿ ಅಪರಾಧಕ್ಕೆ ಉತ್ತೇಜನೆ ನೀಡಿರುವುದಕ್ಕೆ ಎಫ್‌ಐಆರ್ ದಾಖಲಿಸಿ ಯುಟ್ಯೂಬ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.
4. ಈ ವೀಡಿಯೋಗಳನ್ನು ಇಳಿಸಬೇಕು ಮತ್ತು ಈ ಹೊಲಸು ವಿಷಯಗಳ ಪ್ರಸಾರವನ್ನು ನಿಲ್ಲಿಸುವಂತೆ ಒಂದು ನೋಟೀಸು ಕಳಿಸಬೇಕು.

ಇದನ್ನು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಗೃಹಮಂತ್ರಿಗಳ ಗಮನಕ್ಕೆ ತಂದು ಈ ಕ್ರಮಗಳನ್ನು ಕೈಗೊಳ್ಳುವಂತೆ ಅವರಿಗೂ ಸೂಚಿಸಿದ್ದಾರೆ.

ಅರಣ್ಯ ಹಕ್ಕುಗಳ ಜಾರಿಗಾಗಿ ಅರಣ್ಯವಾಸಿ ಸಮುದಾಯಗಳ ದೇಶವ್ಯಾಪಿ ಪ್ರತಿಭಟನೆ

ಭೂಮಿ ಅಧಿಕಾರ್ ಆಂದೋಲನ(ಬಿ.ಎ.ಎ.) ಕರೆಗೆ ಓಗೊಟ್ಟು ಅರಣ್ಯ ಹಕ್ಕುಗಳ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಮತ್ತು ಭಾರತೀಯ ಅರಣ್ಯ ಕಾಯ್ದೆಗೆ ಕರಾಳ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ಜುಲೈ 22ರಂದು ದೇಶಾದ್ಯಂತ ನೂರಕ್ಕೂ ಹೆಚ್ಚು ಸ್ಥಳಗಳಲ್ಲಿ ಪ್ರತಿಭಟನಾ ಮತಪ್ರದರ್ಶನಗಳು, ಸಾರ್ವಜನಿಕ ಸಭೆಗಳು ನಡೆದಿವೆ. ಇವುಗಳಲ್ಲಿ ಲಕ್ಷಾಂತರ ಆದಿವಾಸಿಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಪರವಾಗಿ ಪ್ರಧಾನ ಮಂತ್ರಿ, ಆಯಾಯ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಬುಡಕಟ್ಟು ವ್ಯವಹಾರಗಳ ಮಂತ್ರಿಗಳಿಗೆ ಜಿಲ್ಲಾ ಆಡಳಿತಗಳ ಮೂಲಕ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ವಿವಿಧ ಸಾಮಾಜಿಕ ಸಂಘಟನೆಗಳು ಮತ್ತು ಆಂದೋಲನಗಳು ಅರಣ್ಯ ಹಕ್ಕುಗಳ ಕಾಯ್ದೆಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಸರಿಯಾಗಿ ಜಾರಿ ಮಾಡದೇ ಇರುವ ಬಗ್ಗೆ ಬ್ಲಾಕ್, ತಾಲ್ಲೂಕ, ಜಿಲ್ಲಾ ಮತ್ತು ರಾಜ್ಯಕೇಂದ್ರಗಳಲ್ಲಿ ಅರಣ್ಯವಾಸಿಗಳ ಆಕ್ರೋಶಕ್ಕೆ ದನಿ ನೀಡಿದರು. ತ್ರಿಪುರ, ಮಧ್ಯಪ್ರದೇಶ, ಛತ್ತೀಸ್‌ಗಡ, ಒಡಿಶ, ಬಿಹಾರ್, ಝಾರ್ಖಂಡ್, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಪಶ್ಚಿಮ ಬಂಗಾಲ, ಹಿಮಾಚಲ ಪ್ರದೇಶ, ಉತ್ತರಾಖಂಡ, ದಿಲ್ಲಿ, ರಾಜಸ್ಥಾನ, ಕೇರಳ ಮತ್ತು ಉತ್ತರಪ್ರದೇಶಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದವು.

ಈಗಾಗಲೇ ವರದಿಯಾಗಿರುವಂತೆ, ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ದಾವೆಗಳು ತಿರಸ್ಕೃತವಾಗಿರುವ ಸಂದರ್ಭಗಳಲ್ಲಿ ಸಂಬಂಧಪಟ್ಟ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸಬೇಕು ಎಂಬ ಫೆಬ್ರುವರಿ 15, 2019ರ ಸುಪ್ರಿಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಈ ಪ್ರತಿಭಟನೆಗಳು ನಡೆದಿವೆ. ಈ ಹಿಂದೆ ಆದೇಶ ಬಂದ ಕೂಡಲೇ ಭುಗಿಲೆದ್ದ ಆಕ್ರೋಶಗಳ ಹಿನ್ನೆಲೆಯಲ್ಲಿ, ಅದುವರೆಗೆ ನಿಷ್ಕ್ರಿಯವಾಗಿದ್ದ ಮೋದಿ–1 ಸರಕಾರ ಮಧ್ಯಪ್ರವೇಶ ಮಾಡಲೇಬೇಕಾಗಿ ಬಂತು. ಅದರಿಂದಾಗಿ ಸುಪ್ರಿಂ ಕೋರ್ಟ್ ತನ್ನ ಆದೇಶಕ್ಕೆ ಜುಲೈ10 ರ ವರೆಗೆ ತಡೆಯಾಜ್ಞೆ ಕೊಟ್ಟಿತ್ತು. ಈ ಬಗ್ಗೆ ಮತ್ತು ಈ ನಡುವೆ ಬಂದ ವಿವಿಧ ಅರ್ಜಿಗಳ ಮೇಲೆ ಜುಲೈ 24ರಂದು ಮತ್ತೆ ವಿಚಾರಣೆ ನಡೆಸುವುದಾಗಿ ಹೇಳಿದ ಹಿನ್ನೆಲೆಯಲ್ಲಿ ಅದರ ಎರಡು ದಿನಗಳ ಮೊದಲು ಆದಿವಾಸಿಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಈ ಮತಪ್ರದರ್ಶನ ನಡೆದಿದೆ.





ದೇಶಾದ್ಯಂತ ಸರಕಾರಕ್ಕೆ ಸಲ್ಲಿಸಲಾಗಿರುವ ಮನವಿ ಪತ್ರಗಳಲ್ಲಿನ ಬೇಡಿಕೆಗಳು ಹೀಗಿವೆ:

1. ಅರಣ್ಯ ಹಕ್ಕುಗಳ ಕಾಯ್ದೆಯ ಹಿಂದಿರುವ ಆದಿವಾಸಿಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿ ಸಮುದಾಯಗಳಿಗೆ ಮಾಡಿರುವ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸುವ ನಿಜವಾದ ಭಾವನೆಯೊಂದಿಗೆ ಅದನ್ನು ಜಾರಿಗೆ ತರಬೇಕು.
2. 'ಈ ಕಾಯ್ದೆಯ ಅಡಿಯಲ್ಲಿ ತಿರಸ್ಕರಿಸಿರುವ ಎಲ್ಲ ಅರ್ಜಿಗಳನ್ನು ಅಪೀಲುಗಳೆಂದೇ ಪರಿಗಣಿಸಬೇಕು, ಮತ್ತು ಇವನ್ನು ಗ್ರಾಮಸಭೆಗಳು, ಎಸ್‌ಡಿಎಲ್‌ಸಿ ಮತ್ತು ಡಿಎಲ್‌ಸಿ ಮಟ್ಟಗಳಲ್ಲಿ ಜಾಗರೂಕತೆಯಿಂದ ಪರಾಮರ್ಶಿಸಬೇಕು.
3. ಈ ಪ್ರಕ್ರಿಯೆ ಮುಗಿಯುವ ವರೆಗೆ ಯಾವುದೇ ಬುಡಕಟ್ಟು ಕುಟುಂಬವನ್ನು ಅರಣ್ಯಪ್ರದೇಶಗಳಿಂದ ಹೊರಹಾಕುವ ಪ್ರಯತ್ನಗಳನ್ನು ಮಾಡಬಾರದು.
4. ಎಲ್ಲ ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕುರಿತು ಸಲಹಾಪತ್ರಗಳನ್ನು ಕಳಿಸಬೇಕು.
5. ಭಾರತೀಯ ಅರಣ್ಯ ಕಾಯ್ದೆಯನ್ನು ತಿದ್ದುಪಡಿ ಮಾಡುವ ಅಥವ ಹೊಸ ಅರಣ್ಯ ಧೋರಣೆಗಳನ್ನು ರೂಪೀಕರಿಸುವ ಸಮಾನಾಂತರ ಪ್ರಯತ್ನಗಳನ್ನು ತಕ್ಷಣವೇ ಅಮಾನತಿನಲ್ಲಿಡಬೇಕು.

ಅರಣ್ಯ ಹಕ್ಕುಗಳ ಕಾಯ್ದೆಯನ್ನು ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ) ಆಧಾರದಲ್ಲಿ ಎಡಪಕ್ಷಗಳ ಬೆಂಬಲದಿಂದ ಅಧಿಕಾರದಲ್ಲಿದ್ದ ಯುಪಿಎ–1 ಸರಕಾರದ ಆಡಳಿತಾವಧಿಯಲ್ಲಿ ರೂಪಿಸಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು. ಅರಣ್ಯವಾಸಿ ಸಮುದಾಯಗಳಿಗೆ ಅರಣ್ಯ ಭೂಮಿಗಳು ಮತ್ತು ಸಮುದಾಯಿಕ ಅರಣ್ಯ ಸಂಪನ್ಮೂಲಗಳ ಮೇಲೆ ಇದ್ದ ಹಕ್ಕುಗಳನ್ನು ಇದು ಮಾನ್ಯ ಮಾಡಿತು.

ಈಗ ಈ ಕಾಯ್ದೆ ಎರಡು ತಕ್ಷಣದ ಮತ್ತು ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಮೊದಲನೆಯದು ಈ ಮೇಲೆ ಹೇಳಿದಂತೆ ಸುಪ್ರಿಂ ಕೋರ್ಟಿನ ಫೆಬ್ರುವರಿ 13 ರ ಆದೇಶ ಮತ್ತು ಎರಡನೆಯದು ಭಾರತೀಯ ಅರಣ್ಯ ಕಾಯ್ದೆಗೆ ತರಬೇಕೆಂದಿರುವ ತಿದ್ದುಪಡಿಗಳು, ಈ ತಿದ್ದುಪಡಿಗಳು ಅರಣ್ಯ ಹಕ್ಕುಗಳನ್ನು ರದ್ದು ಮಾಡುವ, ಖಾಸಗಿ 'ಉತ್ಪಾದನಾ ಅರಣ್ಯ'ಗಳನ್ನು ನಿರ್ಮಿಸುವ ಮತ್ತು ಅರಣ್ಯ ಇಲಾಖೆಗೆ ಪೋಲೀಸ್ ಮತ್ತು ಅರೆ–ನ್ಯಾಯಾಂಗ ಅಧಿಕಾರಗಳನ್ನು ಕೊಡಮಾಡುವ, ಇಲಾಖೆಗೆ ಅತ್ಯಾಚಾರಗಳು ಮತ್ತು ಲೈಂಗಿಕ ಹಿಂಸಾಚಾರದ ಅಂಶಗಳಿಂದಲೂ ವಿನಾಯ್ತಿ ಕೊಡುವ ತಿದ್ದುಪಡಿಗಳು.

ನವದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಮತ್ತು ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್, ಅಖಿಲ ಭಾರತ ಅರಣ್ಯ ದುಡಿಯುವ ಜನಗಳ ಸಂಘದ ರೋಮಾ, ಅಖಿಲ ಭಾರತ ಕಿಸಾನ್ ಖೇತ್ ಮಜ್ದೂರ್ ಸಂಘಟನ್‌ನ ಜೈಕರಣ್, ಗುಜರಾತಿನ ಅಲ್ಪಸಂಖ್ಯಾತ ಸಮನ್ವಯ ಸಮಿತಿಯ ಮುಜಾಹಿದ್ ಮತ್ತಿತರ ಮುಖಂಡರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

"ಜಗತ್ತನ್ನು ಬದಲಿಸುವುದು ಒಂಟಿಯಾಗಿ ಸಾಧ್ಯವಿಲ್ಲ, ಆದರೆ ಒಂದಾಗಿ ಖಂಡಿತಾ ಸಾಧ್ಯ"

ಇದು ಪ್ರಖ್ಯಾತ ಕ್ರಾಂತಿಕಾರಿ ಚೆ ಗುವೆರಾ ಮಗಳು ಡಾ. ಅಲೈಡಾ ಗುವೆರಾ ಹೇಳಿರುವ ಮಾತು. ಅವರು ದಿಲ್ಲಿಯಲ್ಲಿ ಜುಲೈ 24ರಂದು ಕ್ಯೂಬಾ ಕ್ರಾಂತಿಯ 60ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಮಾತಾಡುತ್ತಿದ್ದರು. ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿ ಮತ್ತು ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆ ಈ ಸಭೆಯನ್ನು ಏರ್ಪಡಿಸಿತ್ತು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಎಂ.ಎ.ಬೇಬಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಮತ್ತಿತರರು ಈ ಸಭೆಯಲ್ಲಿ ಭಾಗವಹಿಸಿದ್ದರು.



ಹಿರಿಯ ಕಾರ್ಮಿಕ ಮುಖಂಡ ಎ.ಕೆ.ರಾಯ್ ನಿಧನ

ಬಿಹಾರ–ಝಾರ್ಖಂಡ್‌ನ ಹಿರಿಯ ಕಾರ್ಮಿಕ ಮುಖಂಡ ಎ.ಕೆ.ರಾಯ್ ನಿಧನರಾಗಿದ್ದಾರೆ. ಅವರಿಗೆ 81 ವರ್ಷವಾಗಿತ್ತು.

ಎ.ಕೆ.ರಾಯ್ ಕಾರ್ಮಿಕ ವರ್ಗದ ಆಂದೋಲನದ ಮತ್ತು ದಮನಿತರಿಗೆ ನ್ಯಾಯ ಕೊಡಿಸುವ ಹೋರಾಟದ ಹಿರಿಯ ನೇತಾರ ಎಂದು ಸಿಐಟಿಯು ಅವರ ಕೊಡುಗೆಗಳನ್ನು ಸ್ಮರಿಸುತ್ತ ಅವರ ಕುಟುಂಬದ ಸದಸ್ಯರು ಮತ್ತು ಸಂಗಾತಿಗಳಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಒಬ್ಬ ಅರ್ಹ ಇಂಜಿನಿಯರ್ ಆಗಿದ್ದ ಎ.ಕೆ. ರಾಯ್ ತನ್ನ ವೈಯಕ್ತಿಕ ಏಳ್ಗೆಯನ್ನು ತ್ಯಾಗ ಮಾಡಿ ಯುವಕ ರಾಗಿದ್ದಾಗಲೇ ಕಾರ್ಮಿಕ ಆಂದೋಲನವನ್ನು ಸೇರಿಕೊಂಡರು. ಆಗಿನ ಬಿಹಾರದ(ಈಗಿನ ಝಾರ್ಖಂಡ್‌ನ) ಹಿಂದುಳಿದ ಪ್ರದೇಶಗಳಲ್ಲಿ ಆಗಷ್ಟೇ ಮೂಡಿ ಬರುತ್ತಿದ್ದ ರಸಗೊಬ್ಬರ ಉದ್ದಿಮೆಯಲ್ಲಿ ಸಂಕಟ ಗೊಳಗಾದ ಜನಗಳನ್ನು, ಕಾರ್ಮಿಕರನ್ನು ಸಂಘಟಿಸುವಲ್ಲಿ ಅವರು ತೊಡಗಿದರು. ಧನ್‌ಬಾದ್ ಮತ್ತು ಝರಿಯಾದಲ್ಲಿ ಕಲ್ಲಿದ್ದಲು ಕಾರ್ಮಿಕರ ಆಂದೋಲನದ ಹರಿಕಾರರು ಮತ್ತು ಶಿಲ್ಪಿಗಳಲ್ಲಿ ಅವರೊಬ್ಬರು ಎಂದು ಸಿಐಟಿಯು ತನ್ನ ಶ್ರದ್ಧಾಂಜಲಿ ಸಂದೇಶದಲ್ಲಿ ನೆನಪಿಸಿಕೊಂಡಿದೆ.



ಸಿಐಟಿಯು ನೊಂದಿಗೆ ಆರಂಭದಿಂದಲೇ ಇದ್ದ ಎ.ಕೆ.ರಾಯ್ ಅದರ ಜನರಲ್ ಕೌನ್ಸಿಲ್‌ನ ಅತ್ಯಂತ ವಯಸ್ಸಾದ ಸದಸ್ಯರಲ್ಲಿ ಒಬ್ಬರು. ಲೋಕಸಭೆಗೆ ಧನ್‌ಬಾದ್/ಝರಿಯಾದಿಂದ ಮೂರು ಬಾರಿ ಚುನಾಯಿತರಾದ ಅವರು ಸಂಸತ್ತಿನಲ್ಲಿ ಕಾರ್ಮಿಕರು ಮತ್ತು ದಮನಿತ ವಿಭಾಗಗಳ ಹಕ್ಕುಗಳ ಪ್ರಶ್ನೆಗಳನ್ನು ಸದಾ ಎತ್ತುತ್ತ ಬಂದಿದ್ದರು. ಅವರ ಇಡೀ ಬದುಕು ದುಡಿಯುವ ಜನಗಳಿಗೆ ಮುಡುಪಾಗಿತ್ತು ಎಂಬುದನ್ನು ಸದಾ ನೆನಪಿಸಿಕೊಳ್ಳಲಾಗುತ್ತದೆ ಎಂದು ಸಿಐಟಿಯು ಹೇಳಿದೆ.

ಕೋಲಾರ: ದಲಿತ ಪ್ರತಿಭಾವಂತ ವಿದ್ಯಾರ್ಥಿಗಳ ದಾಖಲಾತಿಗಾಗಿ ಒತ್ತಾಯಿಸಿ ಪ್ರತಿಭಟನೆ



2019 – 20ನೇ ಶೈಕ್ಷಣಿಕ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಪಡೆಯಲು ಕಳೆದ ಎಪ್ರಿಲ್ ತಿಂಗಳಲ್ಲಿ ಅರ್ಜಿ ಕರೆಯಲಾಗಿತ್ತು. ಮೂರು ತಿಂಗಳಾದರೂ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆಯನ್ನು ನಡೆಸದೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ.

ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಎರಡು ತಿಂಗಳುಗಳಾಗಿವೆ. ಶಾಲೆಗಳಲ್ಲಿ ಈಗಾಗಲೇ ಮಾಸಿಕ ಪರೀಕ್ಷೆಗಳು ನಡೆದಿವೆ. ಆದರೂ ಎಸ್ಸಿ ಎಸ್ಟಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ದಾಖಲಾತಿ ನಡೆಸುವ ಕಾರ್ಯವನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ನಿರ್ಲಕ್ಷ್ಯಿಸಿರುತ್ತಾರೆ. ಪೋಷಕರು ಹಲವು ಬಾರಿ ಭೇಟಿಯಾಗಿ ಚರ್ಚಿಸಿದಾಗ ಎಸ್ಸಿ ಎಸ್ಟಿ ಮಕ್ಕಳನ್ನು ಸೇರಿಸಿಕೊಳ್ಳಲು ಪ್ರತಿಷ್ಠಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಮುಂದೆ ಬರುತ್ತಿಲ್ಲ, ಇದರ ಕುರಿತು ಚರ್ಚಿಸಲು ಜಿಲ್ಲಾಧಿಕಾರಿಗಳು ಸಿಗುತ್ತಿಲ್ಲ ಎಂದೆಲ್ಲಾ ಸಬೂಬು ಹೇಳಿ ನುಣುಚಿಕೊಳ್ಳುತ್ತಿದ್ದರು. ಪೋಷಕರ ಒತ್ತಾಯದಿಂದಾಗಿ ಜೂನ್ 29 ರಂದು ಪ್ರವೇಶ ಪರೀಕ್ಷೆಯನ್ನು ನಡೆಸಲಾಯಿತಾದರೂ ದಾಖಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸದೆ ವಿಳಂಬ ಮಾಡುತ್ತಿರುತ್ತಾರೆ.

ಪ್ರತಿಷ್ಠಿತ ಶಾಲೆಗಳಲ್ಲಿ ದಾಖಲಾತಿ ಪಡೆಯಲು ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು 5 ನೇ ತರಗತಿ ಓದಿರುವ ಈ ಹಿಂದಿನ ಶಾಲೆಗಳಲ್ಲಿ ಅಥವಾ ಇತರೆ ಶಾಲೆಗಳಲ್ಲಿ 6 ನೇ ತರಗತಿಗೆ ದಾಖಲಾತಿ ಪಡೆಯದೆ, ತರಗತಿಗಳಿಗೆ ಹೋಗದೆ ಮಾನಸಿಕ ಹಿಂಸೆ ಅನುಭವಿಸುತ್ತಿದ್ದಾರೆ. ಮಕ್ಕಳ ಈ ಸ್ಥಿತಿಯಿಂದಾಗಿ ಪೋಷಕರು ಚಿಂತಿತರಾಗಿದ್ದು, ಅಂತಕದಲ್ಲಿದ್ದಾರೆ. ಅಲ್ಲದೇ ಪ್ರತಿಷ್ಠಿತ ಶಾಲೆಗಳಲ್ಲಿ ಮಕ್ಕಳಿಗೆ ದಾಖಲಾತಿ ಕೊಡಿಸುವುದಾಗಿ ಕೆಲವು ಮಧ್ಯವರ್ತಿಗಳು ಪೋಷಕರಿಂದ ಹಣ ವಸೂಲಿಯಲ್ಲಿ ತೊಡಗಿದ್ದಾರೆ.

ಈ ಕೂಡಲೇ ಅರ್ಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ದಾಖಲಾತಿ ಕೊಡಬೇಕೆಂದು, ಎಸ್ಸಿ ಎಸ್ಟಿ ಮಕ್ಕಳನ್ನು ಸೇರಿಸಿಕೊಳ್ಳಲು ಒಪ್ಪಿಕೊಳ್ಳದಿರುವ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ವಿರುದ್ಧ ಜಿಲ್ಲಾಡಳಿತ ಕ್ರಮ ಜರುಗಿಸುವಂತೆ ಒತ್ತಾಯಿಸಿ ಇಂದು ಕೋಲಾರದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ ಮುಂದೆ ಪೋಷಕರಿಂದ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಜುಲೈ 30 ರೊಳಗೆ ಸಮಸ್ಯೆಗಳನ್ನು ಬಗೆಹರಿಸಿ ಅರ್ಹ ವಿದ್ಯಾರ್ಥಿಗಳಿಗೆ ದಾಖಲಾತಿಯನ್ನು ಮಾಡಿಸುವುದಾಗಿ ಭರವಸೆ ನೀಡಿದರು. ಹಾಗೂ ಭರವಸೆಯಂತೆ ದಾಖಲಾತಿ ನಡೆಯದಿದ್ದರೆ ತೀವ್ರ ಸ್ವರೂಪದ ಪ್ರತಿಭಟನೆ ಮಾಡುವುದಾಗಿ ಪೋಷಕರು ಎಚ್ಚರಿಕೆ ನೀಡಿದ್ದಾರೆ.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ನ ರಾಜ್ಯಾಧ್ಯಕ್ಷ ಅಂಬರೀಷ್ ವಿ, ದಲಿತ ಹಕ್ಕುಗಳ ಸಮಿತಿಯ ಮುಖಂಡರಾದ ಗಾಂಧಿನಗರದ ವೆಂಕಟರಮಣ, ಭೀಮರಾಜು, ಆಶಾ, ಸುಶೀಲಮ್ಮ ವಿಜಯ್ ಕೃಷ್ಣ, ಮುಸ್ತಫಾ ಭಾಗವಹಿಸಿದ್ದರು.





ಕೊಪ್ಪಳ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ ಒತ್ತಾಯ

ಕೊಪ್ಪಳ ತಾಲೂಕಿನಲ್ಲಿ ಮುಂಗಾರು ಕೈಕೊಟ್ಟಿದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಜನ ನಗರ ಪ್ರದೇಶಗಳಿಗೆ ಗುಳೆ ಹೋಗುತ್ತಿದ್ದಾರೆ. ಜನ ದುಡಿಮೆ ಇಲ್ಲದೆ ಕಂಗಾಲಾಗಿದ್ದಾರೆ, ಉದ್ಯೋಗಕ್ಕಾಗಿ ಫಾರಂ ನಂ: 6 ನ್ನು ಕೊಡಲು ಹೋದರೆ ಅರ್ಜಿ ಸ್ವೀಕರಿಸಲು ಹಿಂದೇಟು ಹಾಕುತ್ತಿದ್ದಾರೆ ಮತ್ತು ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗುವ ಕೂಲಿಕಾರರು 60 ರಿಂದ 70 ಜನ ಇದ್ದರು (ಸಾರಿಗೆ) ಒಂದೇ ಟ್ರ್ಯಾಕ್ಟರ್‌ನಲ್ಲಿ ಹೋಗುವ ಸ್ಥಿತಿ ಇದೆ ಮತ್ತು ಜೆ.ಇ. ಗಳ ಗಮನಕ್ಕೆ ತಂದರು ಆ ವಿಷಯದ ಬಗ್ಗೆ ಗಮನ ಹರಿಸುತ್ತಿಲ್ಲ, ಕೂಲಿಕಾರರಿಗೆ ಕಡಿಮೆ ಕೂಲಿ ಹಾಕುತ್ತೇವೆ ಎಂದು ಬೆದರಿಕೆ ಒಡ್ಡುತ್ತಿದ್ದಾರೆ ಮತ್ತು ಫಾರಂ ನಂ:6ನ್ನು ಸಲ್ಲಿಸಲು ಹೋದರೆ ಪಿ.ಡಿ.ಓ ಅಧಿಕಾರಿಗಳು ಫಾರಂ ನಂ: 6 ನ್ನು ಸ್ವೀಕರಿಸಲು ನೀವು ಯಾಕೆ ಪಂಚಾಯತಿಗೆ ಬರುತ್ತೀರಿ ಎಂದು ಕೂಲಿಕಾರರಿಗೆ ಗದರುವುದು ಮಾಡುತ್ತಾರೆ, ಮತ್ತು ಪ್ರತಿ ಮನೆ ಕೂಲಿಕಾರರು ಒಂದು ಅರ್ಜಿ ಸಲ್ಲಿಸಲಿ ಎಂದು ಫಾರಂ ನಂ: 6 ನ್ನು ಸ್ವೀಕರಿಸದೇ ವಾಪಸ್ ಕಳಿಸುತ್ತಾರೆ. ಈ ರೀತಿಯ ತೊಂದರೆ ಜನರಿಗೆ ನೀಡಿ ಉದ್ಯೋಗ ಖಾತ್ರಿ ಕೆಲಸ ನೀಡದೆ ಉದ್ಯೋಗವನ್ನು ಮೊಟಕುಗೊಳಿಸಲು ಅಧಿಕಾರಿಗಳೇ ಮುಂದಾಗುತ್ತಿದ್ದಾರೆ. ಮತ್ತು ಕೂಲಿಕಾರರು ದುಡಿದಂತ ಕೂಲಿ ಹಣ ಪಾವತಿ ಆಗಿರುವುದಿಲ್ಲ ಮತ್ತು ದುಡಿದ ಕೂಲಿಕಾರರಿಗೆ ತಿಂಗಳುಗಳು ಕಳೆದರು ದುಡಿದ ಹಣ ಬ್ಯಾಂಕ್ ಖಾತೆಗೆ ಜಮಾ ಆಗಿರುವುದಿಲ್ಲ. ಮತ್ತು ಉದ್ಯೋಗ ಖಾತ್ರಿ ಕೆಲಸ ಮುಗಿದು 15 ರಿಂದ 20 ದಿನಗಳು ಕಳೆದರು ಎಫ್.ಓ.ಓ. ಪ್ರತಿಯನ್ನು ಕೂಲಿಕಾರರಿಗೆ ಪಂಚಾಯತಿಗಳು ನೀಡುವುದಿಲ್ಲ, ಹಣ ಬ್ಯಾಂಕಗೆ ಜಮಾ ಆಗಿದೆಯೋ ಇಲ್ಲವೋ ನೋಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಎಫ್.ಟಿ.ಓ. ನಲ್ಲಿ ಬ್ಯಾಂಕ್ ಬಾ ನರಗಳು ತಪ್ಪಾಗಿ ನಮೂದಿಸುತ್ತಿದ್ದಾರೆ. ಈ ರೀತಿಯ ತೊಂದರೆಗಳನ್ನು ಗ್ರಾಮ ಪಂಚಾಯತ್ ಅಧಿಕಾರಿಗಳು ಮತ್ತು ಜೆ.ಇ.ಗಳು ಕೂಲಿಕಾರರಿಗೆ ತೊಂದರೆ ಕೊಡುತ್ತಿದ್ದಾರೆ. ಆದ ಕಾರಣ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕೊಪ್ಪಳ ತಾಲೂಕ ಪಂಚಾಯತ್ ಕಛೇರಿ ಎದುರು ಪ್ರತಿಭಟನೆ ನಡೆಸಿತು.

ಬೇಡಿಕೆಗಳು

1. ಹಿರೇಬಗನಾಳ ಗ್ರಾಮ ಪಂಚಾಯತಿ ಪಿ.ಡಿ.ಓ, ಅಧಿಕಾರಿಗಳು ಕೂಲಿಕಾರರಿಗೆ ಕಿರುಕುಳ ನೀಡುತ್ತಿದ್ದು ಅದನ್ನು ನಿಲ್ಲಿಸಬೇಕು.
2. ಹಿರೇಬಗನಾಳ ಗ್ರಾಮ ಪಂಚಾಯತಿಯ ಹಿರೇಖಾಸನಕಂಡಿ ಗ್ರಾಮದಲ್ಲಿ ತುರ್ತಾಗಿ ಶುದ್ಧ ಕುಡಿಯುವ ನೀರು ಒದಗಿಸಬೇಕು.

3, ಕೋಳೂರು ಗ್ರಾಮ ಪಂಚಾಯತ್‌ನಲ್ಲಿ ಗುನ್ನಳ್ಳಿ ಗ್ರಾಮದ ಕೂಲಿಕಾರರಿಗೆ ತ್ವರಿತಗತಿಯಲ್ಲಿ ಉದ್ಯೋಗವನ್ನು ಒದಗಿಸಬೇಕು,

4, ಕೋಳೂರು ಗ್ರಾಮ ಪಂಚಾಯತಿಯ ಗುನ್ನಳ್ಳಿ ಗ್ರಾಮದ ಕೂಲಿಕಾರರು ಫಾರಂ ನಂ: 6ನ್ನು ನೀಡಲು ಹೋದರೆ ಹಿಂದೇಟು ಹಾಕುವುದನ್ನು ನಿಲ್ಲಿಸಬೇಕು. 10, ಕೋಳೂರು ಗ್ರಾಮ ಪಂಚಾಯತಿಯ ಗುನ್ನಳ್ಳಿ ಗ್ರಾಮದಲ್ಲಿ ತುರ್ತಾಗಿ ಶುದ್ಧ ಕುಡಿಯುವ ನೀರು ಒದಗಿಸಬೇಕು.

5. ಕೋಳೂರು ಗ್ರಾಮ ಪಂಚಾಯತಿಯ ಗುನ್ನಳ್ಳಿ ಗ್ರಾಮದಲ್ಲಿ ದುಡಿದಿರುವ ಕೂಲಿಕಾರರಿಗೆ ತ್ವರಿತಗತಿಯಲ್ಲಿ ಹಣ ಪಾವತಿ ಮಾಡಬೇಕು,

6. ಉದ್ಯೋಗ ಖಾತ್ರಿ ಕೆಲಸ ಮುಗಿದು 15 ರಿಂದ 20 ದಿನ ಕಳೆದರೂ ಎಫ್.ಟಿ.ಓ. ಪ್ರತಿಕೊಡುವುದಿಲ್ಲ ಅದನ್ನು ತ್ವರಿತಗತಿಯಲ್ಲಿ ನೀಡಬೇಕು.

17. 60 ರಿಂದ 70 ಜನ ಒಂದೇ ಟ್ರಾಕ್ಟರ್ ಕೆಲಸಕ್ಕೆ ಹೋಗುತ್ತಿದ್ದು, ಮತ್ತೊಂದು ಟ್ರಾಕ್ಟರ್ ವ್ಯವಸ್ಥೆ ಮಾಡಬೇಕು.

ಪ್ರತಿಭಟನೆಯಲ್ಲಿ ನೂರಾರು ಕೂಲಿಕಾರರು ಹಾಗೂ ಮುಖಂಡರಾದ ನಿತ್ಯಾನಂದಸ್ವಾಮಿ, ಗಂಗಾಧರಯ್ಯ ಸ್ವಾಮಿ, ಬಸವರಾಜ ಮರಕುಂಬಿ, ಸುಂಕಪ್ಪ ಗದಗ ಮೊದಲಾದವರು ಭಾಗವಹಿಸಿದರು.

ವರದಿ : ಸುಂಕಪ್ಪ ಗದಗ

ಬೇಡಿಕೆ ಈಡೇರಿಕೆಗೆ ಹಾಸ್ಟೆಲ್ ನೌಕರರ ಧರಣಿ

ತಮ್ಮ ಹಲವಾರು ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಒತ್ತಾಯಿಸಿ ಗುರುವಾರ ಕರ್ನಾಟಕ ರಾಜ್ಯ ಸರಕಾರಿ ನೌಕರರ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಜಿಲ್ಲಾ ಸಮಿತಿ ಮುಖಂಡರು ಕಲಬುರಗಿ ನಗರದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಚೇರಿ ಮುಂದೆ ಧರಣಿ ನಡೆಸಿದರು.

ಕೌಶಲ ಮ್ಯಾನ್ ಪವರ ಏಜೆನ್ಸಿಯವರು ನೌಕರರ ಹೆಸರಿನಲ್ಲಿ ಇಪಿಎಫ್, ಇಎಸ್‌ಐ ಹಣ ತುಂಬದೇ ಮೋಸ ಮಾಡಿದ್ದರಿಂದ ಅವರನ್ನು ಕಪ್ಪು ಪಟ್ಟಿಗೆ ಸೇರಿಸಿ ಏಜೆನ್ಸಿ ರದ್ದು ಪಡಿಸಬೇಕು. ಸಮಾಜ ಕಲ್ಯಾಣ ಇಲಾಖೆ, ಬಿಸಿಎಂ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಲ್ಲಿ ದುಡಿಯುತ್ತಿರುವ ಹೊರಗುತ್ತಿಗೆ ನೌಕರರ ಬಾಕಿ ವೇತನ ಪಾವತಿಸಬೇಕು ಎಂದು ಆಗ್ರಹಿಸಿದರು.

ಈಗಾಗಲೇ ನೌಕರರ ಸಂಬಳದಲ್ಲಿ ಕಡಿತ ಮಾಡಿರುವ ಇಪಿಎಫ್, ಇಎಸ್‌ಐ ಹಣವನ್ನು ಚೆಕ್ ಮೂಲಕ ಪಾವತಿ ಮಾಡಬೇಕು. ಸುಳ್ಳು ಆರೋಪಗಳನ್ನು ಮಾಡಿ ಕೆಲಸದಿಂದ ತೆಗೆದು ಹಾಕುತ್ತಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. 3 ತಿಂಗಳ

➔

ಡಿಹೆಚ್‌ಎಸ್ ನೇತೃತ್ವದಲ್ಲಿ ರಾಜ್ಯಾದಂತ ಪ್ರತಿಭಟನೆ

ದಲಿತರ ಅಭಿವೃದ್ಧಿ ಸಾಧಿಸಲು ಕೇಂದ್ರ- ರಾಜ್ಯ ಸರ್ಕಾರಗಳು ಎಸ್.ಸಿ./ಎಸ್.ಟಿ. ಉಪಯೋಜನೆ (ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ.) ಕೋಟ್ಯಾಂತರ ಹಣವನ್ನು ಪ್ರತಿ ಬಜೆಟ್‌ನಲ್ಲಿ ಘೋಷಣೆ ಮಾಡುತ್ತಿವೆ. ಆದರೆ ಯೋಜನೆಯಿಂದ ಅಭಿವೃದ್ಧಿ ಸಾಧಿಸಿದೆಯೇ ಎಂದು ಪ್ರತಿ ವರ್ಷ ಸರ್ಕಾರ ವೈಜ್ಞಾನಿಕ ವಿಶ್ಲೇಷಣೆ, ವಿಮರ್ಶೆ ಮಾಡಿರುವುದೇ? ಹಾಗಾದರೆ ದಲಿತ ಅಭಿವೃದ್ಧಿ ಸಾಧನೆ ಎಷ್ಟು? ರಾಜ್ಯದಲ್ಲಿ ಒಟ್ಟು ಶೇ. 24.1 ಎಸ್.ಸಿ./ಎಸ್.ಟಿ ಜನರಿದ್ದಾರೆ. ರಾಜ್ಯ ಬಜೆಟ್‌ನಲ್ಲಿ 2015-16 ರಲ್ಲಿ 17000 ಕೋಟಿ, 2016-17ರಲ್ಲಿ 19542.96 ಕೋಟಿ, 2017-18 ರಲ್ಲಿ ಒದಗಿಸಿದ 27,840.98 ಕೋಟಿ. ಖರ್ಚು ಮಾಡಿದ್ದು 26,124.33 ಕೋಟಿ ಉಳಿದ ಹಣ 1198.99 ಕೋಟಿ ಎಂದು 28 ನವೆಂಬರ್ 2018 ರಂದು ನಡೆದ, ಮುಖ್ಯಮಂತ್ರಿ ಕುಮಾರಸ್ವಾಮಿ ನೇತೃತ್ವದಲ್ಲಿ ನಡೆದ ಪ್ರಗತಿ ಪರಿಶೀಲನ ಸಭೆಯಲ್ಲಿ ತಿಳಿಸಲಾಗಿದೆ. ಅಲ್ಲದೆ ಕ್ರಿಯಾ ಯೋಜನೆ ಪರಿಶೀಲಿಸಿದಾಗ ಕೆಲವೊಂದು ಇಲಾಖೆಯಲ್ಲಿ ಈ ಯೋಜನೆಗಳಡಿ ಒದಗಿಸಿದ ಅನುದಾನವನ್ನು ಅಂಗನವಾಡಿ ಮತ್ತು ಆಶಾಕಾರ್ಯಕರ್ತರ ವೇತನ ಪಾವತಿಗೆ ಮತ್ತು ಆಸ್ಪತ್ರೆ / ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆಗೆ ಉಪಯೋಗಿಸಿಕೊಳ್ಳಲಾಗಿದೆ. ಮೂಲ ಸೌಕರ್ಯಗಳ ವೆಚ್ಚವೆಂದು ಭಾವಿಸಿ ವೆಚ್ಚಮಾಡಿ ಈ ಹಣವನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ. 2018-19ರಲ್ಲಿ 29209.48 ಕೋಟಿ ಹೀಗೆ ಹಣ ಒದಗಿಸಿದೆ. ಕಾಯಿದೆ ಜಾರಿಗೆ ಬಂದ ನಂತರ ಈಗ 24.1 ಶೇ. ಹಣ ಒದಗಿಸಿದೆ ಎಂದು ಸರ್ಕಾರ ಹೇಳುತ್ತಿದೆ. 33 ಇಲಾಖೆಗಳಿಗೆ ಹಂಚಿಕೆಯಾಗುತ್ತದೆ. ಒದಗಿಸುವ ಹಣ ಸಮರ್ಪಕವಾಗಿ ಜಾರಿಯಾಗಿರುವುದಿಲ್ಲ. ಕೋಟಿಗಟ್ಟಲೆ ಹಣ ಉಳಿಕೆಯಾಗುತ್ತದೆ. ಈ ಉಳಿಕೆ ಹಣವನ್ನು ಬೇರೆ ಯೋಜನೆಗಳಿಗೆ ಬಳಸಬಾರದು ಎಂಬ ನಿಯಮವಿದ್ದರು ದುರುಪಯೋಗ ಮಾಡಿಕೊಳ್ಳಲಾಗುತ್ತದೆ

ರಾಜ್ಯ ಸರ್ಕಾರ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ ಸಂಬಂಧಿಸಿ 2017 ಕಾಯಿದೆ ಮತ್ತು ನಿಯಮಗಳನ್ನು ರೂಪಿಸಿದೆಯಾದರೂ ಜಾರಿ ಮಾಡದ ಒಬ್ಬ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿದ ನಿದರ್ಶನಗಳಿಲ್ಲ. ಆದ್ದರಿಂದ ಈ ಯೋಜನೆ ಸಮರ್ಪಕ ಜಾರಿಗೊಳಿಸಲು ಕ್ರಮ ಜರುಗಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ..

ಗಂಗಾ ಕಲ್ಯಾಣ ಕೊಳವೆ ಬಾವಿ ಯೋಜನೆಗೆ 2018-19 ನೇ ಸಾಲಿನಲ್ಲಿ ಸಾವಿರಾರು ಅರ್ಜಿಗಳನ್ನು



ಪರಿಶಿಷ್ಟ ಜಾತಿ / ಪಂಗಡದವರು ಸಲ್ಲಿಸಿದ್ದಾರೆ. ಆದರೆ ಸರ್ಕಾರದ ಟಾರ್ಗೆಟ್ ಕೇವಲ ಆನೆಗೆ ಹಲ್ಲ ಕೊಟ್ಟಂತಾಗಿದೆ. ಶಾಸಕರ ನೇತೃತ್ವದಲ್ಲಿ ಹಂಚಿಕೆಯಾಗುವ ಈ ಯೋಜನೆ ಬೆರಳೆಣಿಕೆ ಅರ್ಜಿದಾರರಿಗೆ, ರಾಜಕೀಯ ಬೆಂಬಲವಿರುವ ಶಾಸಕರ ಆಪ್ತರಿಗೆ ಮಾತ್ರ ಸಿಗುತ್ತದೆ. ನೂರಾರು ಖರ್ಚು ಅರ್ಜಿ ಸಲ್ಲಿಸಿದವರಿಗೆ ಫಲ ಸಿಗುವುದೇ ಇಲ್ಲ. ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಯೋಜನೆಯಲ್ಲಿ ಕೋಟ್ಯಾಂತರ ರೂ ಬಳಕೆಯಾಗಿ ಉಳಿಕೆಯಾಗುವುದನ್ನು ಕಾಣುತ್ತಿದ್ದೇವೆ. ಈ ಹಣವನ್ನು ಅರ್ಜಿ ಸಲ್ಲಿಸಿದ ಎಲ್ಲಾರಿಗು ನೀಡಲು ಅನುದಾನ ಒದಗಿಸಬೇಕು. ಭೂಮಿ ಇಲ್ಲದ ದಲಿತರಿಗೆ ಭೂಮಿ ನೀಡಲಿಲ್ಲ. ಕನಿಷ್ಠ ಭೂಮಿ ಇರುವ ದಲಿತರಿಗೆ ಕೊಳವೆ ಭಾವಿ ಕಲ್ಪಿಸಿದರೆ ನೀರು ಒದಗಿಸಿದಂತಾಗುತ್ತದೆ. ದಲಿತರ ಅಭಿವೃದ್ಧಿ ಕಾಣಲು ಸಾಧ್ಯವಾಗುತ್ತದೆ.

ರಾಜ್ಯಾದ್ಯಂತ ಡಿಹೆಚ್‌ಎಸ್ ಹೋರಾಟ

ಪ್ರತಿ ವರ್ಷ ಅರ್ಜಿ ಸಲ್ಲಿಸುವ ಪದ್ಧತಿಯನ್ನ ಕೈಬಿಟ್ಟು ಒಂದು ಸಲ ತೆಗೆದುಕೊಂಡು ಅರ್ಜಿ ಸಲ್ಲಿಸಿದ ಎಲ್ಲಾರಿಗೂ ಕೊಳವೆ ಬಾವಿ ನೀಡಬೇಕೇಂದು ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಬೇಕೆಂದು ಜುಲೈ 25ರಂದು ಧರಣಿ ನಡೆಸಿ ಮನವಿ ನೀಡುವುದರ ಮೂಲಕ ಸರ್ಕಾರವನ್ನು ಒತ್ತಾಯಿಸಲಾಗಿದೆ. ತುಮಕೂರು, ಮಂಡ್ಯ ಹಾಸನ ಜಿಲ್ಲೆಗಳಲ್ಲಿ ಹೋರಾಟ ನಡೆದಿದೆ. ಗುಲ್ಬರ್ಗಾ, ಯಾದಗಿರಿ, ಬೆಂಗಳೂರು ಗ್ರಾಮಾಂತರದ ದೊಡ್ಡಬಳ್ಳಾಪುರದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಿಸಿದ್ದಾರೆ. ಕೊಳವೆ ಬಾವಿ ಅರ್ಜಿದಾರರನ್ನು ಸಂಘಟಿಸಿ ಹೋರಾಟ ತೀವ್ರಗೊಳಿಸಲು ನಿರ್ಧರಿಸಲಾಗಿದೆ.

ಬೇಡಿಕೆಗಳು

1. ಪರಿಶಿಷ್ಟ ಜಾತಿ/ ಪಂಗಡದ ಅರ್ಜಿ ಸಲ್ಲಿಸಿದ ಎಲ್ಲಾ ದಲಿತರಿಗೂ ಗಂಗ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿ ಒದಗಿಸಬೇಕು.
2. ಪ್ರತಿ ವರ್ಷ ಅರ್ಜಿ ಸಲ್ಲಿಸುವ ಪದ್ಧತಿ ರದ್ದು ಮಾಡಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹರಿಗೂ ಸೌಲಭ್ಯ ಒದಗಿಸಬೇಕು.
3. ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸ್ವಯಂ ಉದ್ಯೋಗಕ್ಕೆ ಸಲ್ಲಿಸುವ ಎಲ್ಲಾ ಅರ್ಜಿದಾರರಿಗೂ ಸೌಲಭ್ಯ ಒದಗಿಸಬೇಕು.
4. ಎಸ್.ಸಿ./ಎಸ್.ಟಿ. ಉಪಯೋಜನೆ (ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ.) ಯನ್ನು ಜನಸಂಖ್ಯೆ ಆಧಾರದಲ್ಲಿ ಸಮರ್ಪಕವಾಗಿ ಜಾರಿಗೋಳಿಸಬೇಕು. ಜಾರಿಗೋಳಿಸದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕು.
5. ಜನಸಂಖ್ಯೆ ಅನುಗುಣವಾಗಿ ಹಣವನ್ನು ಹೆಚ್ಚಿಸಬೇಕು.
6. ಕೇಂದ್ರ ಸರ್ಕಾರ ನೀತಿ ಆಯೋಗ ಕೈ ಬಿಡಬೇಕು, ದಲಿತರ ಅಭಿವೃದ್ಧಿ ಹಣ ಕಡಿತ ಮಾಡುವುದನ್ನು ನಿಲ್ಲಿಸಬೇಕು.
7. ಜಾತಿ ತಾರತಮ್ಯ, ಅಸ್ಪೃಶ್ಯತೆ ಆಚರಿಸುವ, ಸಾಮಾಜಿಕ ಬಹಿಷ್ಕಾರ, ದಲಿತರ ಮೇಲಿನ ದಾಳಿ ಹಿಮ್ಮೆಟ್ಟಿಸಲು ಎಸ್.ಸಿ / ಎಸ್.ಟಿ ದೌರ್ಜನ್ಯ ತಡೆ ಕಾಯಿದೆಯನ್ನು ಕಟ್ಟು ನಿಟ್ಟಾಗಿ ಜಾರಿಗೋಳಿಸಬೇಕು
8. ಮನೆ ಇಲ್ಲದವರಿಗೆ 4 ಗುಂಟೆ ನಿವೇಶನಕ್ಕೆ ಜಮೀನು, ಹಿತ್ತಲು ಸಹಿತ ವಸತಿ ಮತ್ತು ಭೂಮಿ ಇಲ್ಲದ ದಲಿತರಿಗೆ 5 ಎಕರೆ ಭೂಮಿ ನೀಡಬೇಕು.
9. ಅಂತರ ಜಾತಿ ವಿವಾಹಿತರಿಗೆ ನೀಡುವ ಪ್ರೋತ್ಸಾಹ ಧನವನ್ನು ಹೆಚ್ಚಿಸಬೇಕು, ಉದ್ಯೋಗ ನೀಡಬೇಕು.

ಗೋಪಾಲಕೃಷ್ಣ ಹರಳಹಳ್ಳಿ



➔ ಹಿಂದೆ ಅಪಘಾತದಲ್ಲಿ ಮೃತಪಟ್ಟ ಸಾವಿತ್ರಿ ಎನ್ನುವವರ ಮಗಳಿಗೆ ನೌಕರಿ ನೀಡಬೇಕು.

ಗುತ್ತಿಗೆ ಪಡೆಯುವ ಮ್ಯಾನ್ ಪವರ್ ಏಜೆನ್ಸಿಗಳು ಪ್ರತಿ ವರ್ಷ ತಾತ್ಕಾಲಿಕ ನೇಮಕಾತಿ ಆದೇಶವನ್ನು ನೀಡಬೇಕು ಎಂದು ಧರಣಿ ನಿರತರು ಒತ್ತಾಯಿಸಿದರು.

ಧರಣಿಯಲ್ಲಿ ಸುರೇಶ್ ದೊಡ್ಡಮನಿ, ಭಾಗಣ್ಣ ದೇವನೂರ, ಭೀಮಶೆಟ್ಟಿ ಯಂಪಳ್ಳಿ, ರೇಣುಕಾ ಸಂಗೊಳಗಿ, ಫಾತಿಮಾ ಬೇಗಂ, ಮಲ್ಲಮ್ಮ ಕೋಡ್ಲಿ, ಮೇಘರಾಜ್ ಕಠಾರೆ, ಪರಶುರಾಮ ಹಡಲಗಿ, ಮಾಪಣ್ಣ ಜಾನಕರ್, ಶಾಂತಪ್ಪ ಮುನ್ನಳ್ಳಿ, ನಾಗರಾಜ ಕಾಳಗಿ, ಶಿವಕುಮಾರ ತಡಕಲ್ ಹಾಗೂ ಇತರರಿದ್ದರು. ■



ಕಟ್ಟಡ ಕಾರ್ಮಿಕರಿಂದ ಮನವಿ



ಜುಲೈ 25 ರಂದು ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಕಾರ್ಯದರ್ಶಿ ಶ್ರೀಮತಿ ರೋಹಿಣಿ ಸಿಂಧೂರಿ ಅವರನ್ನು ಸಂಘಟನೆಯ ರಾಜ್ಯ ನಿಯೋಗ ಭೇಟಿ ಮಾಡಿ ಕಟ್ಟಡ ಕಾರ್ಮಿಕರು ಇತ್ತೀಚಿನ ದಿನಗಳಲ್ಲಿ ಎದುರಿಸುತ್ತಿರುವ ಬಹು ಮುಖ್ಯವಾದ ಆನ್ ಲೈನ್ ಸಮಸ್ಯೆ,ನೆಟ್ ವರ್ಕ್ ಸಮಸ್ಯೆ, ನೋಂದಣಿ, ನವೀಕರಣ, ವೈದ್ಯಕೀಯ ನೆರವು, ಇತ್ಯಾದಿ ಸಮಸ್ಯೆಗಳ ಕುರಿತಾಗಿ ಉಂಟಾಗಿರುವ ವಿಳಂಬ ಸೇರಿದಂತೆ ಪ್ರಮುಖ ಹದಿನೈದು ಬೇಡಿಕೆಗಳ ಕುರಿತಾಗಿ ಸುದೀರ್ಘ ಮನವಿ ಸಲ್ಲಿಸಿತು.

ನಿಯೋಗದೊಂದಿಗೆ ಮಾನ್ಯ ಕಾರ್ಯದರ್ಶಿ ಯವರು ಸುಮಾರು ಒಂದೂವರೆ ಗಂಟೆಗಳ ಕಾಲ ಅತ್ಯಂತ ಸಕಾರಾತ್ಮಕ ರೀತಿಯಲ್ಲಿ ಪ್ರತಿಯೊಂದು ಬೇಡಿಕೆಗಳ ಬಗ್ಗೆಯೂ ಸ್ಪಂದಿಸುತ್ತಾ ಭರವಸೆ ಯನ್ನು ಮೂಡಿಸಿದರು. ಅಲ್ಲದೆ ಕೆಲವು ವ್ಯಕ್ತಿಗತವಾದ ಪ್ರಕರಣಗಳ ಸಂಬಂಧಿಸಿದ ವಿಚಾರಗಳಲ್ಲೂ ಅತ್ಯಂತ ಕಾಳಜಿ ವಹಿಸಿ ಒಂದು ನಿರ್ದಿಷ್ಟ ಸಮಯದಲ್ಲಿ ಬಗೆಹರಿಸಲು ಸ್ಪಷ್ಟ ಸೂಚನೆಯನ್ನು ನೀಡಿದರು.

ಮಾನ್ಯ ಕಾರ್ಯದರ್ಶಿ ಗಳ ಜೊತೆ ಮಂಡಳಿಯ ಹಿರಿಯ ಅಧಿಕಾರಿ ಶ್ರೀಮತಿ ಅನುರಾಧ ಹಾಗೂ ಶ್ರೀಸೋಮಣ್ಣ ಹಾಗೂ ತಾಂತ್ರಿಕ ವರ್ಗದ ಸಿಬ್ಬಂದಿ ಉಪಸ್ಥಿತರಿದ್ದು ನಮ್ಮ ಸಮಸ್ಯೆಗಳ ಬಗೆಹರಿಸಲು ಸಹಕರಿಸಿದರು.

ನಿಯೋಗದಲ್ಲಿ ರಾಜ್ಯ ಅಧ್ಯಕ್ಷರಾದ ಎನ್.ವೀರಸ್ವಾಮಿ, ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ, ರಾಜ್ಯ ಉಪಾಧ್ಯಕ್ಷರಾದ ಬಿ. ಉಮೇಶ್, ರಾಮಕೃಷ್ಣ, ಹಾಗೂ ಸಹ ಕಾರ್ಯದರ್ಶಿ ಕೋಲಾರದ ಭೀಮರಾಜ್ ಭಾಗವಹಿಸಿದ್ದರು.

ನಿಯೋಗಕ್ಕೆ ಅವಕಾಶನೀಡಿ ಮನವಿ ಸ್ವೀಕರಿಸಿ ಕಟ್ಟಡ ಕಾರ್ಮಿಕರ ಹಲವು ಪ್ರಮುಖ ಬೇಡಿಕೆಗಳನ್ನು ಬಗೆಹರಿಸುವ ಭರವಸೆ ನೀಡಿದ ಮತ್ತು ಕಾರ್ಮಿಕರ ಬದುಕಿನ ಬಗ್ಗೆ ಅತ್ಯಂತ ಕಾಳಜಿ ಹೊಂದಿರುವ ಶ್ರೀಮತಿ ರೋಹಿಣಿ ಸಿಂಧೂರಿ ಅವರಿಗೆ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಕೃತಜ್ಞತೆ ಸಲ್ಲಿಸುತ್ತದೆ.

ಕೆ. ಮಹಾಂತೇಶ

ಸಂಸದೀಯ ತಪಾಸಣೆಯಿಲ್ಲದೆ ಮಸೂದೆಗಳ ಅಂಗೀಕಾರದ ತರಾತುರಿ

ಆಳುವ ಮಂದಿಗಳ ಸಂಕುಚಿತ ಅಜೆಂಡಾವಷ್ಟೇ ಮುಖ್ಯ, ಯಾರ 'ವಿಶ್ವಾಸ'ವೂ ಬೇಕಿಲ್ಲ!



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

17 ಪ್ರತಿಪಕ್ಷಗಳು ಸಂಸತ್ತಿನಲ್ಲಿ ಯಾವುದೇ ಸಂಸದೀಯ ಸಮಿತಿಯ ತಪಾಸಣೆ ಇಲ್ಲದೆ ತರಾತುರಿಯಿಂದ ಮಸೂದೆಗಳನ್ನು ಪಾಸು ಮಾಡಲಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ ರಾಜ್ಯಸಭಾ ಅಧ್ಯಕ್ಷರಿಗೆ ಪತ್ರ ಬರೆದಿವೆ. ಇದು ಈಗಾಗಲೇ ಸ್ಥಾಪಿಸಿರುವ ಆಚರಣೆಗೆ ವಿರುದ್ಧವಾಗಿದೆ ಎಂದು ಅವು ಈ ಪತ್ರದಲ್ಲಿ ಸಭಾಧ್ಯಕ್ಷರ ಗಮನಕ್ಕೆ ತರುತ್ತ ಪ್ರತಿಪಕ್ಷಗಳ ದನಿಯನ್ನು ಹಿಸುಕದಂತೆ ಖಾತ್ರಿ ಪಡಿಸಿ ಎಂದು ಕೋರಿವೆ.

14ನೇ ಲೋಕಸಭೆಯಲ್ಲಿ 60% ಮಸೂದೆಗಳನ್ನು ಸಂಸದೀಯ ಸಮಿತಿಗಳಿಗೆ ಕಳಿಸಿದ್ದರೆ, 15ನೇ ಲೋಕಸಭೆಯಲ್ಲಿ 71% ಮಸೂದೆಗಳನ್ನು ತಪಾಸಣೆಗೆ ಕಳಿಸಲಾಗಿತ್ತು. ಆದರೆ 16ನೇ ಲೋಕಸಭೆಯಲ್ಲಿ ಕೇವಲ 21% ಮಸೂದೆಗಳನ್ನಷ್ಟೇ ತಪಾಸಣೆಗೆ ಸಂಸದೀಯ ಸಮಿತಿಗಳಿಗೆ ಕಳಿಸಲಾಗಿತ್ತು.

"ಈಗ 17ನೇ ಲೋಕಸಭೆಯಲ್ಲಿ ಮೊದಲ ಅಧಿವೇಶನದಲ್ಲಿ ಈಗಾಗಲೇ 14 ಮಸೂದೆಗಳ ಅಂಗೀಕಾರ ಆಗಿದೆ. ಇವುಗಳಲ್ಲಿ ಯಾವುದನ್ನೂ ಸಂಸತ್ತಿನ ಸ್ಥಾಯೀ ಸಮಿತಿಗಳಿಗಾಗಲೀ, ಆಯ್ಕೆ ಸಮಿತಿಗಳಿಗಾಗಲೀ ಶಾಸನಾತ್ಮಕ ತಪಾಸಣೆಗೆ ಕಳಿಸಿಲ್ಲ" ಎಂದು ಸಭಾಧ್ಯಕ್ಷರ ಗಮನಕ್ಕೆ ಈ ಪತ್ರ ತಂದಿದೆ.

ಇದಲ್ಲದೆ ಇನ್ನೂ 11 ಮಸೂದೆಗಳನ್ನು ಮಂಡಿಸುವ, ಪರಿಶೀಲಿಸುವ ಮತ್ತು ಪಾಸು ಮಾಡಿಸುವ ಯೋಚನೆಯಲ್ಲಿ ಸರಕಾರ ಇದೆ.

ಸಂಸದೀಯ ಸಮಿತಿಗಳಿಂದ ಮಸೂದೆಗಳ ತಪಾಸಣೆ, ಅವುಗಳ ಕುರಿತು ಸಂವಾದ, ಚರ್ಚೆಗಳು ಶಾಸನದ ವಿಷಯವನ್ನು ಶ್ರೀಮಂತಗೊಳಿಸುತ್ತವೆ ಮತ್ತು ಗುಣಮಟ್ಟವನ್ನು ಹೆಚ್ಚಿಸುತ್ತವೆ. ಆದ್ದರಿಂದಲೇ ಇಂತಹ ಸಾರ್ವಜನಿಕ ಸಮಾಲೋಚನೆಯ ಆಚರಣೆ ಸ್ಥಾಪಿತಗೊಂಡಿದೆ ಎಂಬ ಸಂಗತಿಯನ್ನೂ ಪತ್ರಿಪಕ್ಷಗಳ ಪತ್ರ ಅವರಿಗೆ ನೆನಪಿಸುತ್ತ, ಈ ವಿಷಯದಲ್ಲಿ ಮಧ್ಯಪ್ರವೇಶಿಸುವಂತೆ ಕೋರಿವೆ.

"ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ದನಿಯನ್ನು ಹಿಸುಕಿ ಹಾಕದಂತೆ ಖಾತ್ರಿಪಡಿಸಿ ಎಂದು ತಮ್ಮನ್ನು ಆಗ್ರಹಪೂರ್ವಕವಾಗಿ ಕೋರುತ್ತೇವೆ. ನಮಗೆ ನಮ್ಮ ಜವಾಬ್ದಾರಿಯ, ಮತ್ತು ಶಾಸನಗಳನ್ನು ರೂಪಿಸುವ ಅಗತ್ಯದ ಅರಿವು ಇದೆಯಾದರೂ, ಸದಸ್ಯರ ವಿಶೇಷಾಧಿಕಾರಗಳನ್ನು, ನಿಯಮಗಳನ್ನು ಮತ್ತು ಸ್ಥಾಪಿತ ಪದ್ಧತಿಗಳನ್ನು ಬುಡಮೇಲು ಮಾಡುವ ಸರಕಾರದ ಯಾವುದೇ ಪ್ರಯತ್ನ ನಮ್ಮ ಸಂಸ್ಥಾಪನಾ ಪಿತೃಗಳು ಕಂಡರಿಸಿದ ರಾಜ್ಯ ಸಭೆಯ ಪಾತ್ರವನ್ನು ಗೌಣಗೊಳಿಸುತ್ತದೆ" ಎಂದು ಈ ಪತ್ರದಲ್ಲಿ ಹೇಳಲಾಗಿದೆ.

'ವಿಶ್ವಾಸ'ವೋ, ಗೇಲಿಯೋ?

ಮಹತ್ವದ ವಿಷಯಗಳಲ್ಲಿ ಪ್ರತಿಪಕ್ಷಗಳು ಮತ್ತು ನಾಗರಿಕರು ಎತ್ತುವ ಗಹನವಾದ ಪ್ರಶ್ನೆಗಳನ್ನು ಬದಿಗೊತ್ತಿ, ಆಳುವ ಪಕ್ಷದ ಅಜೆಂಡಾವನ್ನು ಕಣ್ಣುಮುಚ್ಚಿ ಈಡೇರಿಸಿಕೊಳ್ಳುವ ಪ್ರಜಾಪ್ರಭುತ್ವ–ವಿರೋಧಿ ಮನೋಭಾವ ಈ ತರಾತುರಿಯ ಹಿಂದೆ ಇದೆ ಎಂದು ಒಬ್ಬ ರಾಜಕೀಯ ವೀಕ್ಷಕರು ಹೇಳುತ್ತಾರೆ.

17ನೇ ಲೋಕಸಭೆಯ ಆರಂಭದಲ್ಲಿ ಪ್ರಧಾನ ಮಂತ್ರಿಗಳು ತಮ್ಮ ಈ ಹಿಂದಿನ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಘೋಷಣೆಯನ್ನು ವಿಸ್ತರಿಸಿ 'ಸಬ್ ಕಾ ವಿಶ್ವಾಸ್' ಅದಕ್ಕೆ ಸೇರಿಸಿದ್ದರು. ಜತೆಗೆ ಪ್ರತಿಪಕ್ಷಗಳು ತಮ್ಮ ಸಂಖ್ಯಾಬಲ ಬಹಳ ಕಡಿಮೆ ಇದೆ ಎಂದು ಭಯಪಟ್ಟುಕೊಳ್ಳಬೇಕಾಗಿಲ್ಲ., ಅವರ ಅಭಿಪ್ರಾಯಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವುದು ಎಂದೂ ಹೇಳಿದ್ದರು. ಆದರೆ ಅದು ಎಲ್ಲರ ವಿಶ್ವಾಸ ಗಳಿಸುವ ಆಶಯದ ಅಭಿವ್ಯಕ್ತಿಯಾಗಿರಲಿಲ್ಲ, ಪ್ರತಿಪಕ್ಷಗಳ ಸಂಖ್ಯಾಹೀನತೆಯ ಗೇಲಿಯಾಗಿದ್ದಿರಬೇಕು ಎಂದೀಗ ಹಲವರಿಗೆ ಸಂದೇಹ ಮೂಡುವಂತಾಗಿದೆ.

ಆಧಾರ್ ಮತ್ತು ಇತರ ಕಾನೂನುಗಳು (ತಿದ್ದುಪಡಿ) ಮಸೂದೆ, ಮಾಹಿತಿ ಹಕ್ಕು (ತಿದ್ದುಪಡಿ) ಮಸೂದೆ, ಮಾನವ ಹಕ್ಕುಗಳ ತಿದ್ದುಪಡಿಮಸೂದೆ ಮತ್ತು ಮೋಟಾರು ವಾಹನಗಳ ತಿದ್ದುಪಡಿ ಮಸೂದೆಯನ್ನು ಅವುಗಳಿಗೆ ದೇಶಾದ್ಯಂತ ವ್ಯಕ್ತಪಟ್ಟಿರುವ ಆಕ್ಷೇಪಗಳನ್ನು ಯಾವುದನ್ನೂ ಪರಿಗಣಿಸದೆ ಪಾಸು ಮಾಡಿಕೊಂಡಿರುವುದು, ದೇಶದ ಎಲ್ಲ ಕಾರ್ಮಿಕ ಸಂಘಟನೆಗಳು ವಿರೋಧಿಸಿರುವ 'ಕಾರ್ಮಿಕ ಸಂಹಿತೆ'ಗಳನ್ನು ಹೇರಲು ಮುಂದಾಗಿರುವುದು ಈ ಸಂದೇಹವನ್ನು ಬಲಪಡಿಸಿದೆ.

ಆಧಾರ್ ಮತ್ತು ಇತರ ಕಾನೂನುಗಳು (ತಿದ್ದುಪಡಿ) ಮಸೂದೆ, 2019 ಇದನ್ನು ಈ ಹಿಂದಿನ ಮೋದಿ–1 ಸರಕಾರ ಸುಗ್ರೀವಾಜ್ಞೆಯಾಗಿ ತಂದಿತ್ತು. ಇದು ಸುಪ್ರಿಂ ಕೋರ್ಟ್ ಕಾನೂನುಬಾಹಿರ ಎಂದು ಸರಕಾರೇತರ ಮತ್ತು ಖಾಸಗಿ ಸಂಸ್ಥೆಗಳಿಗೆ ಆಧಾರ್ ಮಾಹಿತಿ ನೆಲೆಯನ್ನು ಪಡೆಯಲು ಅವಕಾಶ ನೀಡಿದ್ದ ಸೆಕ್ಷನ್ 57 ಮತ್ತು ಇತರ ಕೆಲವು ಅಂಶಗಳನ್ನು ರದ್ದು ಮಾಡಿದ್ದನ್ನು 'ಕಾನೂನುಬದ್ಧ'ಗೊಳಿಸುವ ಪ್ರಯತ್ನ ಎಂಬ ಬಲವಾದ ಆಕ್ಷೇಪ ಜನತೆಯ ಹಕ್ಕುಗಳ ಕಾರ್ಯಕರ್ತರುಗಳಿಂದ ಬಂದಿದ್ದವು. ಇದನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಈ ಮಸೂದೆ ಪಾಸಾಗಿದೆ. ಯಾವ ವ್ಯಕ್ತಿಯನ್ನೂ ಆಧಾರ್ ಇಲ್ಲ ಎಂಬ ಕಾರಣಕ್ಕೆ ಸೇವೆಗಳಿಂದ ವಂಚಿತಗೊಳಿಸಬಾರದು ಎಂಬ ಸುಪ್ರಿಂ ಕೋರ್ಟ್ ಆದೇಶವನ್ನೂ ಈ ತಿದ್ದುಪಡಿ ತಲೆಕೆಳಗು ಮಾಡುತ್ತದೆ ಎಂಬ ಆಕ್ಷೇಪವೂ ಇತ್ತು. ಅದನ್ನು ಕೂಡ ಪರಿಗಣಿಸಲಾಗಿಲ್ಲ.

ಜುಲೈ 19ರಂದು ಲೋಕಸಭೆ ಮಾನವ ಹಕ್ಕುಗಳ ರಕ್ಷಣೆ(ತಿದ್ದುಪಡಿ) ಮಸೂದೆ, 2019ನ್ನು ಅಂಗೀಕರಿಸಿತು. ಇದು ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಗಳಿಗೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ಹೊಂದಿದೆ. ಇದು ಮಾನವ ಹಕ್ಕು ಕಾರ್ಯಕರ್ತರ ಹಕ್ಕುಗಳಿಗೆ ಸಮಗ್ರ ರಕ್ಷಣೆ ಕೊಡುತ್ತಿಲ್ಲ ಎಂಬುದು ಇದನ್ನು ಕುರಿತ ಪ್ರಮುಖ ಆಕ್ಷೇಪಣೆಯಾಗಿತ್ತು. ಇದನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿದೆ.

ಜುಲೈ 19ರಂದು ಮಂಡಿಸಿದ ಮಾಹಿತಿ ಹಕ್ಕು(ತಿದ್ದುಪಡಿ) ಮಸೂದೆ, 2019 ಕೇಂದ್ರೀಯ ಮತ್ತು ರಾಜ್ಯಗಳ ಮಾಹಿತಿ ಆಯುಕ್ತರುಗಳ ಸೇವಾಶರತ್ತುಗಳನ್ನು ಕೇಂದ್ರ ಸರಕಾರದ ಮರ್ಜಿಗೆ ಒಳಪಡಿಸುತ್ತದೆ, ಆಮೂಲಕ ಮಾಹಿತಿ ಹಕ್ಕು ಆಯೋಗದ ಸ್ವಾಯತ್ತೆಯನ್ನು ಭಂಗಪಡಿಸುತ್ತದೆ ಮತ್ತು ಮಾಹಿತಿ ಹಕ್ಕು ಕಾನೂನನ್ನು ನಿಷ್ಪ್ರಯೋಜಕಗೊಳಿಸುತ್ತದೆ ಎಂಬುದು ಪ್ರಮುಖ ಆಕ್ಷೇಪವಾಗಿತ್ತು. ರಾಜ್ಯ ಸರಕಾರಗಳ ಹಕ್ಕನ್ನೂ ಇದು ಮೊಟಕುಗೊಳಿಸುತ್ತದೆ ಎಂಬ ಆಕ್ಷೇಪವೂ ಇದೆ. ಏಳು ನಿವೃತ್ತ ಮುಖ್ಯ ಮಾಹಿತಿ ಆಯುಕ್ತರು ಇದಕ್ಕೆ ವಿರೋಧ'ವನ್ನು ವ್ಯಕ್ತಪಡಿಸಿದ್ದರು. ಇದು ದೇಶದ ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲು ಬಹಳಷ್ಟು ನೆರವಾಗಿರುವ ಈ ಹಕ್ಕನ್ನು ಮೊಟಕುಗೊಳಿಸುತ್ತದೆ ಎಂದು ಅವರು ಹೇಳಿದ್ದರು. ಆದರೂ ಲೋಕಸಭೆ ಇದನ್ನು ಮೂರೇ ದಿನಗಳಲ್ಲಿ ಪಾಸು ಮಾಡಿತು. ರಾಜ್ಯಸಭೆಯಲ್ಲಿ ಇದಕ್ಕೆ ಬಲವಾದ ವಿರೋಧವಿತ್ತು. ಪ್ರತಿಪಕ್ಷಗಳು ಇದಕ್ಕೆ ಇರುವ ಬಲವಾದ ಆಕ್ಷೇಪಗಳ ಹಿನ್ನೆಲೆಯಲ್ಲಿ ಇದನ್ನು ಆಯ್ಕೆ ಸಮಿತಿಯ ತಪಾಸಣೆಗೆ ಕಳಿಸಬೇಕು ಎಂದು ಆಗ್ರಹಿಸಿದ್ದವು. ಆದರೆ ಬಿಜೆಡಿ, ಟಿಆರ್‌ಎಸ್ ಮತ್ತು ವೈಎಸ್‌ಆರ್ ಕಾಂಗ್ರೆಸ್ ತಮ್ಮ ವಿರೋಧವನ್ನು ಬಿಟ್ಟು ಈ ಮಸೂದೆಯನ್ನು ಬೆಂಬಲಿಸುವಂತೆ ಮಾಡುವಲ್ಲಿ ಆಳುವ ಪಕ್ಷ 'ಯಶಸ್ವಿ'ಯಾಯಿತು. ಜುಲೈ 25ರಂದು ರಾಜ್ಯಸಭೆಯಲ್ಲೂ ಇದು ಪಾಸಾಗಿದೆ.

ಇದರಿಂದ ಆತಂಕ ಪಟ್ಟ ನಿವೃತ್ತ ಮುಖ್ಯ ಮಾಹಿತಿ ಆಯುಕ್ತರೊಬ್ಬರು ಈ ಮೂರು ಪಕ್ಷಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ನೀವೇ ಕೈಯಾರೆ ನಿಮ್ಮ ಅಧಿಕಾರಗಳನ್ನು 'ದಿಲ್ಲಿ ಸುಲ್ತಾನ'ರ ಪದತಲದಲ್ಲಿ ಸಮರ್ಪಿಸಿರುವಿರೇಕೆ, ಯಾವ ಭಯದಿಂದ ನೀವು ಈ ಮಸೂದೆಯನ್ನು ಬೆಂಬಲಿಸಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿ ಪತ್ರ ಬರೆದಿರುವುದಾಗಿ ವರದಿಯಾಗಿದೆ.

ಇದಕ್ಕೆ ಮೊದಲು, ವಿವಿಧ ಸಾರಿಗೆ ಕಾರ್ಮಿಕರ ಸಂಘಟನೆಗಳು ಕಳೆದ ಮೂರುವ ರ್ಷಗಳಿಮದ ಸತತವಾಗಿ ವಿರೋಧಿಸಿಕೊಂಡು ಬಂದ ಮೋಟಾರು ವಾಹನಗಳ ತಿದ್ದುಪಡಿ ಮಸೂದೆಯನ್ನೂ ತರಾತುರಿಯಲ್ಲಿ ಪಾಸುಮಾಡಲಾಗಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಪ್ರಧಾನ ಮಂತ್ರಿಗಳಿಗೆ 'ಲಿಂಚಿಂಗ್' ವಿರುದ್ಧ ಪ್ರತಿಷ್ಠಿತರಿಂದ ಮತ್ತೊಂದು ಬಹಿರಂಗ ಪತ್ರ

ಪ್ರಧಾನಿಗಳ ಉತ್ತರದ ಬದಲು ಅವರ ಮಂತ್ರಿಗಳ 'ಅವಾರ್ಡ್ ವಾಪಸಿ–2'ಗೇಲಿ!

ವಿವಿಧ ರಂಗಗಳ 49 ಪ್ರತಿಷ್ಠಿತ ವ್ಯಕ್ತಿಗಳು ದೇಶದಲ್ಲಿ ಪ್ರತಿದಿನ ಕೇಳಬರುತ್ತಿರುವ ಜನಜಂಗುಳಿ ಹೆಚ್ಚಾಗಿ ದಲಿತರು, ಮುಸ್ಲಿಮರನ್ನು ಬಡಿದು ಸಾಯಿಸುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವ ಬಗ್ಗೆ, ಮತ್ತು ಅವುಗಳಿಗೆ ಆಳುವವರಿಂದ ಯಾವುದೇ ಪ್ರತಿಕ್ರಿಯೆ ಬರದಿರುವುದನ್ನು ಕಂಡು ಆತಂಕಿತರಾಗಿ ದೇಶದ 'ಪ್ರಧಾನ ಮಂತ್ರಿಗಳಿಗೆ ಜುಲೈ 23ರಂದು ಒಂದು ಬಹಿರಂಗ ಪತ್ರ ಬರೆದು ಇವನ್ನು ತಕ್ಷಣ ನಿಲ್ಲಿಸುವಂತೆ ಕ್ರಮ ಕೈಗೊಳ್ಳಬೇಕಾಗಿ ಕೋರಿದ್ದಾರೆ.

ಸಿನೆಮಾ ರಂಗದ ಪ್ರಮುಖ ನಿರ್ದೇಶಕರು, ಕಲಾವಿದರುಗಳಾದ ಅಪರ್ಣಾ ಸೆನ್, ಶ್ಯಾಮ್ ಬೆನೆಗಲ್, ಮಣಿರತ್ನಂ, ಕೇತನ್ ಮೆಹ್ತ, ಅಡೂರ್ ಗೋಪಾಲಕೃಷ್ಣನ್, ಅನುರಾಗ್ ಕಶ್ಯಪ್, ಗೌತಮ್ ಘೋಷ್, ಸೌಮಿತ್ರ ಚಟರ್ಜಿ, ಕೊಂಕೊಣ ಸೆನ್, ಸಂಗೀತಗಾರ್ತಿ ಶುಭಾ ಮುದ್ಗಲ್, ಸಾಹಿತಿ ಅಮಿತ್ ಚೌಧುರಿ, ಇತಿಹಾಸಕಾರರಾದ ರಾಮಚಂದ್ರ ಗುಹ, ತನಿಕಾ ಸರ್ಕಾರ್, ವೈದ್ಯರುಗಳು ಮತ್ತು ಸಾಮಾಜಿಕ ಕಾರ್ಯಕರ್ತರುಗಳಾದ ಬಿನಾಯಕ್ ಸೆನ್, ದೆಬಾಲ್ ಸೆನ್, ಪರಿಸರವಾದಿ ಬೊನಾನಿ ಕಕ್ಕರ್, ಡಿಸೈನರ್ ಚಿತ್ರಾ ಸರ್ಕಾರ್, ಮುಂತಾದವರು ಈ ಬಹಿರಂಗ ಪತ್ರಕ್ಕೆ ಸಹಿ ಹಾಕಿದ್ದಾರೆ.


ದಲಿತರ ಮೇಲೆ ಅತ್ಯಾಚಾರಗಳು ಮತ್ತು ಧರ್ಮಾಧ ಹೆಸರಲ್ಲಿ ಹತ್ಯೆಗಳ ಅಂಕಿ–ಅಂಶಗಳು ಗಾಬರಿ ಹುಟ್ಟಿಸುವಂತಿವೆ. ಇಂತಹ ಕೃತ್ಯಗಳನ್ನು ಎಸಗಿರುವವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಇವರು ಪ್ರಶ್ನಿಸಿದ್ದಾರೆ.

'ಜೈಶ್ರೀರಾಮ್' ಒಂದು ಉದ್ರೇಕಕಾರಿ ಯುದ್ಧಘೋಷವಾಗಿ ಬಿಟ್ಟಿರುವುದು ಖೇದಕರ, ಆ ಹೆಸರಿನಲ್ಲಿ ಹಲವರನ್ನು ಬಡಿದು ಹಾಕಲಾಗುತ್ತಿದೆ. ಧರ್ಮದ ಹೆಸರಲ್ಲಿ ಇಷ್ಟೊಂದು ಹಿಂಸಾಚಾರ ಆಘಾತಕಾರಿ. ಇದು ಮಧ್ಯಯುಗವಲ್ಲ. ಶ್ರೀರಾಮನ ಹೆಸರು ಬಹಸಂಖ್ಯಾತ ಸಮುದಾಯದಲ್ಲಿ ಹಲವರಿಗೆ ಪವಿತ್ರ ಹೆಸರು. ಅದನ್ನು ಈ ರೀತಿಯಲ್ಲಿ ಅಪವಿತ್ರಗೊಳಿಸುವುದನ್ನು ದೇಶದ ಅತ್ಯುನ್ನತ ಕಾರ್ಯಕಾರಿ ಮುಖ್ಯಸ್ಥರಾಗಿ ತಾವು ನಿಲ್ಲಿಸಲೇ ಬೇಕು" ಎಂದು ಈ ಪ್ರತಿಷ್ಠಿತರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

"ನಾವು ಪ್ರಧಾನ ಮಂತ್ರಿಗಳಿಗೆ ಎರಡು ಮನವಿಗಳನ್ನು ಮಾಡಿದ್ದೇವೆ. ಒಂದು, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಹಿಂಸಾಚಾರ ಎಸಗುವವರನ್ನು ಜಾಮೀನುರಹಿತ ಸೆಕ್ಷನ್‌ಗಳ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು. ಎರಡನೆಯದಾಗಿ, ಜನಗಳಿಗೆ ಪ್ರತಿಭಟಿಸುವ, ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಇರಬೇಕು. ಅದಕ್ಕೆ ರಾಷ್ಟ್ರ–ವಿರೋಧಿಗಳು ಅಥವ ನಗರ ನಕ್ಸಲರೆಂದು ಹಣೆಪಟ್ಟಿ ಹಚ್ಚಬಾರದು. ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಬೇಕು ಎಂದಷ್ಟೇ ನಾವು ಬಯಸುತ್ತೇವೆ" ಎಂದು ಈ ಕುರಿತು ಮಾತಾಡುತ್ತ ಅಪರ್ಣಾ ಸೆನ್ ಹೇಳಿದ್ದಾರೆ.


ಆದರೆ 'ಸಬ್ ಕಾ ವಿಶ್ವಾಸ್'ನ ಪ್ರಧಾನ ಮಂತ್ರಿಗಳು ಸ್ಪಂದಿಸಿಲ್ಲ ಅವರ ಬದಲು ಅವರ ಅಲ್ಪಸಂಖ್ಯಾತ ವ್ಯವಹಾರಗಳ ಮಂತ್ರಿಗಳು ಗೇಲಿಗೆ ಇಳಿದಿದ್ದಾರೆ. ದಲಿತರು ಮತ್ತು ಅಲ್ಪಸಂಖ್ಯಾತರು ದೇಶದಲ್ಲಿ ಸುರಕ್ಷಿತರಾಗಿದ್ದಾರೆ, ಇದು 2014ರ ನಂತರ ನಡೆದ 'ಅವಾರ್ಡ್ ವಾಪಸಿ'ಯ ಎರಡನೇ ಭಾಗ ಎಂದು ಎನ್ನುತ್ತ ಲೋಕಸಭಾ ಚುನಾವಣೆಗಳ ಸೋಲಿನಿಂದ ಇನ್ನೂ ಚೇತರಿಸಿಕೊಳ್ಳಲಾರದವರು ಕ್ರಿಮಿನಲ್ ಪ್ರಕರಣಗಳನ್ನು ಕೋಮುಗ್ರಸ್ತಗೊಳಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು **"ಇಂದು ನಮ್ಮ ವಾಸ್ತವತೆಯ ಸತ್ಯವನ್ನು ತೋರಿಸಿದಾಗ ಈ ಸರಕಾರ ಮಾಡುವ ಒಂದೇ ಕೆಲಸವೆಂದರೆ ಅದನ್ನು ನಿರಾಕರಿಸುವುದು. ಏಕೆಂದರೆ ಈ ಶಕ್ತಿಗಳಿಗೆ ಪೋಷಣೆ ನೀಡುತ್ತಿರುವುದು ಆಳುವ ಪಕ್ಷವೇ, ಇವರೇ ಇಂತಹ 'ಹಿಂಸಾಚಾರದ ಪಂಥ'ದ ಪ್ರಾಯೋಜನೆಗೆ ಪೋಷಣೆ ನೀಡುವವರು"** ಎಂದು ಟಿಪ್ಪಣಿ ಮಾಡಿದ್ದಾರೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಬ್ಯಾಂಕ್ ರಾಷ್ಟ್ರೀಕರಣದ 50 ವರ್ಷಗಳ ನಂತರ



ಯಾವ ಉದ್ದೇಶ ಸಾಧನೆಗಾಗಿ ಬ್ಯಾಂಕ್‌ಗಳ ರಾಷ್ಟ್ರೀಕರಣವಾಗಿತ್ತೋ, ಆ ಉದ್ದೇಶದಿಂದ ಸರ್ಕಾರ ವಿಮುಖವಾಗಿದೆ. ನಿಜಕ್ಕೂ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಮೇಲುಗೈ ಹೊಂದಿರುವ ಜಗತ್ತಿನಲ್ಲಿ, ರಾಷ್ಟ್ರೀಕೃತ ಬ್ಯಾಂಕ್‌ಗಳ ವಿದ್ಯಮಾನವು ಒಂದು ರೀತಿಯ ಮುಜುಗರದಲ್ಲಿ ಕುಳಿತಿದೆ. ನವ ಉದಾರವಾದದ ಗುಣ ಲಕ್ಷಣಗಳು ರಾಷ್ಟ್ರೀಕೃತ ಬ್ಯಾಂಕ್‌ಗಳ ಕಾರ್ಯವೈಖರಿಯನ್ನು ಹಾಳುಗೆಡಹುವ ಕಾರಣದಿಂದಾಗಿ ಅವು ನೋವು ತಿನ್ನುತ್ತಿವೆ. ಆದರೆ, ರಾಷ್ಟ್ರೀಕರಣವನ್ನು ತಿರುಗುಮುರುಗು ಮಾಡುವುದರಿಂದ, ಅದಾಗಲೇ ಮೇಲುಗೈ ಹೊಂದಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಮತ್ತಷ್ಟು ಬಲಪಡಿಸಿದಂತಾಗುತ್ತದೆ. ಅದು ರಾಷ್ಟ್ರದ ಸಾರ್ವಭೌಮತೆಯನ್ನು ಮತ್ತಷ್ಟು ಕುಂದಿಸುತ್ತದೆ. ಮತ್ತು, ಕಿರು ಉತ್ಪಾದಕರು ಹಾಗೂ ರೈತ ಕೃಷಿಯನ್ನು ತುಳಿಯುವ ಮೂಲಕ ಬಂಡವಾಳವು ತೊಡಗಿರುವ ಆದಿಮ ಶೇಖರಣೆಯ ಪ್ರಕ್ರಿಯೆಯನ್ನು ಮತ್ತಷ್ಟು ತೀವ್ರಗೊಳಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಐವತ್ತು ವರ್ಷಗಳ ಹಿಂದೆ, ಜುಲೈ 19, 1969 ರಂದು, ದೇಶದ ಹದಿನಾಲ್ಕು ದೊಡ್ಡ ಖಾಸಗಿ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಲಾಗಿತ್ತು. ದೇಶದ ಆರ್ಥಿಕ ಸಂರಚನಾ ಪ್ರಕ್ರಿಯೆಯಲ್ಲಿ ಒಂದು ಮಹತ್ವದ ಹೆಜ್ಜೆಯಾದ ಬ್ಯಾಂಕ್ ರಾಷ್ಟ್ರೀಕರಣದ ಸುವರ್ಣ ಮಹೋತ್ಸವವನ್ನು ಬ್ಯಾಂಕಿಂಗ್ ವಲಯದ ಕಾರ್ಮಿಕ ಸಂಘಟನೆಗಳು ಆಚರಿಸುತ್ತಿವೆ. ಆದರೆ, ವರ್ತಮಾನದ ಸರ್ಕಾರವು ಆಚರಿಸದಿರುವುದು ಒಂದು ವಿಡಂಬನೆಯೇ ಸರಿ.

ಬ್ಯಾಂಕ್ ರಾಷ್ಟ್ರೀಕರಣದ ಸಮರ್ಥನೆ ಬಹಳ ಸರಳವಾಗಿತ್ತು: ಬಂಡವಾಳದಂತೆಯೇ ಸಾಲವೂ ಸಹ ಆರ್ಥಿಕ ಅಧಿಕಾರ ಚಲಾವಣೆಯ ಒಂದು ಪ್ರತೀಕವಾಗಿರುವುದರಿಂದ, ಈ ಅಧಿಕಾರ ಭಾಗ್ಯವು ಎಲ್ಲ ವಲಯಗಳಿಗೂ, ಎಲ್ಲ ಸಾಮಾಜಿಕ ಸಮುದಾಯಗಳಿಗೂ, ಎಲ್ಲ ಪ್ರದೇಶಗಳಿಗೂ ಹಂಚಿಕೆಯಾಗಿರುವ ರೀತಿಯೇ ಸಾಮಾಜಿಕ ಅಭಿವೃದ್ಧಿಯ ದಿಕ್ಪಥವನ್ನು ನಿರ್ಧರಿಸುತ್ತದೆ. ಬ್ಯಾಂಕ್ ಸಾಲಗಳ ಹಂಚಿಕೆಯು ಅಷ್ಟೊಂದು ಪ್ರಭಾವಶಾಲಿ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂದಾದರೆ, ಆಗ, ಸಾಲ ಹಂಚಿಕೆಯ ಮೇಲೆ ಸಾಮಾಜಿಕ ನಿಯಂತ್ರಣ ಇರಲೇ ಬೇಕಾಗುತ್ತದೆ. ಬ್ಯಾಂಕ್ ಸಾಲಗಳನ್ನು ಪರಿಣಾಮಕಾರಿಯಾಗಿ ಹಂಚಬೇಕು ಎಂದಾದರೆ, ಬ್ಯಾಂಕ್‌ಗಳು, ಸಮಾಜದ ಒಡೆತನದಲ್ಲಿರಬೇಕು. ಅಂದರೆ, ಬ್ಯಾಂಕ್‌ಗಳು ಪ್ರಭುತ್ವದ ಒಡೆತನದಲ್ಲೇ ಇರಬೇಕಾಗುತ್ತದೆ. ವಾಸ್ತವವಾಗಿ, ಬ್ಯಾಂಕ್ ರಾಷ್ಟ್ರೀಕರಣ ಪೂರ್ವದಲ್ಲಿ, 1968ರಲ್ಲಿ, ಖಾಸಗಿ ಬ್ಯಾಂಕ್‌ಗಳ ಮೇಲೆ ಸಾಮಾಜಿಕ ನಿಯಂತ್ರಣ ಹಾಕಲಾಗಿತ್ತು. ಬ್ಯಾಂಕ್‌ಗಳು ಖಾಸಗಿ ಒಡೆತನದಲ್ಲಿದ್ದ ಕಾರಣದಿಂದಾಗಿ, ಸಾಮಾಜಿಕ ನಿಯಂತ್ರಣ ಹಾಕಿದ ಸರ್ಕಾರದ ಪ್ರಯತ್ನ ವಿಫಲವಾಗಿತ್ತು. ಹಾಗಾಗಿ, ಬ್ಯಾಂಕ್‌ಗಳ ಮೇಲೆ ಸಾಮಾಜಿಕ ನಿಯಂತ್ರಣವನ್ನು ಕಾರ್ಯರೂಪಕ್ಕೆ ತರುವ ಒಂದೇ ಸಾಧನವೆಂದರೆ ರಾಷ್ಟ್ರೀಕರಣವೇ ಎಂಬ ತೀರ್ಮಾನಕ್ಕೆ ಹಿಂದಿನ ಪ್ರಯತ್ನದ ವೈಫಲ್ಯವೂ ಪ್ರೇರೇಪಣೆಯಾಗಿತ್ತು.

ಭರಪೂರ ಭರವಸೆಗಳ ಹೊರತಾಗಿಯೂ, ಬ್ಯಾಂಕ್ ರಾಷ್ಟ್ರೀಕರಣದಿಂದ ಬ್ಯಾಂಕ್ ಸಾಲಗಳ ಲಭ್ಯತೆಯ ಪ್ರಜಾಪ್ರಭುತ್ವೀಕರಣವಾಗಲಿಲ್ಲ ಎಂಬುದು ನಿಜ; ಒಂದು ಬಂಡವಾಳಶಾಹಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಅರ್ಥವ್ಯವಸ್ಥೆಯಲ್ಲಿ ಅದು ಸಾಧ್ಯವಾಗುವುದಾದರೂ ಹೇಗೆ? ಆದಾಗ್ಯೂ, ಬ್ಯಾಂಕ್ ರಾಷ್ಟ್ರೀಕರಣದಿಂದಾಗಿ ಆಗಿದ್ದೇನೆಂದರೆ, ದೇಶದ ಮೂಲೆ ಮೂಲೆಯಲ್ಲೂ ಬ್ಯಾಂಕ್ ಶಾಖೆಗಳ ಆರಂಭ ಮತ್ತು ಬ್ಯಾಂಕಿಂಗ್ ಸೌಲಭ್ಯಗಳ ಬೃಹತ್ ವಿಸ್ತರಣೆ. ಅಲ್ಲಿಯ ತನಕ ವ್ಯವಸ್ಥಿತ ನಿರಾಕರಣೆಗೆ ಒಳಗಾಗಿದ್ದ ಕೃಷಿ ಸಾಲಗಳು ಕೃಷಿ ವಲಯಕ್ಕೆ ಲಭ್ಯವಾಗತೊಡಗಿದವು ಮತ್ತು ಅದರಿಂದಾಗಿ ಹಸಿರು ಕ್ರಾಂತಿ ಎಂದು ಹೇಳಲಾಗುವ ಕೃಷಿ ಚಟುವಟಿಕೆಗಳ ಬೃಹತ್ ವಿಸ್ತರಣೆಯ ಮೂಲಕ ಬಂಡವಾಳಶಾಹಿ ಅಭಿವೃದ್ಧಿಯ ತಳಾದಿಯ ವಿಸ್ತರಣೆ. ಜೊತೆಗೆ, ಅಲ್ಲಿಯ ತನಕವೂ ಸಾಲ ಸೌಲಭ್ಯಗಳು ಉದ್ದಿಮೆಗಳನ್ನು ಕೊಳ್ಳುವ ಮತ್ತು ಸಟ್ಟಾ ಬಾಜಿ ಉದ್ದೇಶಗಳಿಗೆ ಬಳಕೆಯಾಗುತ್ತಿದ್ದವು. ಈ ಪರಿಸ್ಥಿತಿಗೆ ಬದಲಾಗಿ, ರಾಷ್ಟ್ರೀಕರಣದ ನಂತರ, ಸಾಲ ಸೌಲಭ್ಯಗಳನ್ನು ಉತ್ಪಾದನಾ ಉದ್ದೇಶಗಳಿಗೆ ಅಧೀನಗೊಳಿಸಲಾಯಿತು.

ದೊಡ್ಡ ದೊಡ್ಡ ಬಂಡವಾಳಗಾರರು ಹಣಕಾಸು ವಲಯದ ಮೇಲೆ ಹೊಂದಿದ್ದ ಹಿಡಿತವನ್ನು ಅವರಿಂದ ಬಿಡಿಸಿದ ಕೂಡಲೇ ಅವರು ಬ್ಯಾಂಕ್ ರಾಷ್ಟ್ರೀಕರಣದ ವಿರೋಧ ಆರಂಭಿಸಿದರು. "ಆರ್ಥಿಕ ಉದಾರೀಕರಣ" ಜಾರಿಯಾದ ನಂತರ, ಅವರ ರಾಷ್ಟ್ರೀಕರಣ ವಿರೋಧ ಇನ್ನಷ್ಟು ತೀವ್ರಗೊಂಡಿತು. ಈ ಕಾಲಘಟ್ಟದಲ್ಲಿ ಒಂದು ಪ್ರಬಲ ಶಕ್ತಿಯಾಗಿ ಹೊರ ಹೊಮ್ಮಿದ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು (ಅದರೊಂದಿಗೆ ದೇಶಿ ಕಾರ್ಪೊರೇಟ್-ಹಣಕಾಸು ಕುಳಗಳು ಸಂಯೋಜಿತವಾಗಿವೆ), ಇಡೀ ವಿಶ್ವವನ್ನೇ ತನ್ನ ಕಾರ್ಯ ಕ್ಷೇತ್ರದೊಳಗೆ ತರುವ ಹವಣಿಕೆಯಲ್ಲಿರುವಾಗ, ಭಾರತದಂತಹ ಒಂದು ದೊಡ್ಡ ದೇಶದ ಹಣಕಾಸು ವಲಯದ ಒಡೆತನದ ಹೆಚ್ಚಿನ ಪಾಲು ಪ್ರಭುತ್ವದ ಕೈಯಲ್ಲಿರುವುದೇ ಒಂದು ಅನಿಷ್ಟ ಎಂದು ಭಾವಿಸಿದೆ.

ದೇಶದ ಹಣಕಾಸು ವ್ಯವಸ್ಥೆಯು ಪ್ರಭುತ್ವದ ಒಡೆತನದಲ್ಲಿದ್ದ ಕಾರಣದಿಂದಾಗಿ, 2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನ ಹೊಡೆತದಿಂದ ಅಮೇರಿಕಾ, ಯೂರೋಪ್ ಸೇರಿದಂತೆ ಜಗತ್ತಿನ ಹಲವಾರು ದೈತ್ಯ ಬ್ಯಾಂಕ್‌ಗಳು ಮುಳುಗಿದರೂ ಸಹ ಭಾರತದ ಬ್ಯಾಂಕ್‌ಗಳು ಪಾರಾದ ಬಗೆ ಯಾವುದೆಂದರೆ, ಅದು ಪ್ರಭುತ್ವದ ಒಡೆತನದಿಂದ ಒದಗಿದ ರಕ್ಷಣಾ ಕವಚವೇ ಎಂಬುದನ್ನು ಪ್ರತ್ಯಕ್ಷವಾಗಿಯೇ ಕಂಡಿದ್ದೇವೆ. ಮತ್ತು, ಭಾರತದ ಇಡೀ ಬ್ಯಾಂಕಿಂಗ್ ವ್ಯವಸ್ಥೆಯು ಹೊಂದಿದ್ದ ವಿದೇಶ ಆಸ್ತಿಗಳು ತಮ್ಮ ಒಟ್ಟು ಆಸ್ತಿಗಳ ಕೇವಲ ಶೇ.7ರಷ್ಟಿದ್ದವು, ಅದೂ ಸಹ ಮುಖ್ಯವಾಗಿ ಐಸಿಐಸಿಐ ನಂತಹ ಖಾಸಗಿ ಬ್ಯಾಂಕ್‌ಗಳಿಗೆ ಸೇರಿತ್ತು. ರಾಷ್ಟ್ರೀಕೃತ ಬ್ಯಾಂಕ್‌ಗಳು ಹೊಂದಿದ್ದ ವಿದೇಶ ಆಸ್ತಿಗಳು, ನಂಜಿನ ಆಸ್ತಿಗಳ ಮಾತಿರಲಿ, ಅತ್ಯಲ್ಪ ಪ್ರಮಾಣದಲ್ಲಿದ್ದ ಕಾರಣದಿಂದಾಗಿ ಜಾಗತಿಕ ಹಣಕಾಸು ಬಿಕ್ಕಟ್ಟಿನ ಕಂಪನಗಳು ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ತಟ್ಟಲಿಲ್ಲ. ಆದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳು ಹೊಂದಿರುವ ಈ ಕಂಪನ ನಿರೋಧಕ ಶಕ್ತಿಯೇ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಕೆಂಗಣ್ಣಿಗೆ ಗುರಿಯಾಗಿದೆ.

ಭಾರತದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವಂತೆ, ಮತ್ತು ಅದರ ಕುರುಹಾಗಿ "ಸಂಕೇತಿಕವಾಗಿ", ಕೊನೆಯ ಪಕ್ಷ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನಾದರೂ ಖಾಸಗೀಕರಣ ಗೊಳಿಸುವಂತೆ ಅಮೇರಿಕಾದ ಆಡಳಿತವು ಭಾರತದ ಮೇಲೆ ಅಪಾರ ಒತ್ತಡ ಹಾಕಿದೆ. ಕಿಂಟನ್ ಮತ್ತು ಒಬಾಮ ಆಡಳಿತಗಳಲ್ಲಿ ಖಜಾನೆಯ ಕಾರ್ಯದರ್ಶಿಗಳಾಗಿದ್ದ, ಅನುಕ್ರಮವಾಗಿ, ಲಾರೆನ್ಸ್ ಸಮರ್ಸ್ ಮತ್ತು ತಿಮೋತಿ ಗೀತ್ನರ್, ಇವರುಗಳು ಭಾರತಕ್ಕೆ ಭೇಟಿ ಕೊಟ್ಟಾಗಲೆಲ್ಲಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು ಖಾಸಗೀಕರಿಸುವಂತೆ ಒತ್ತಿ ಒತ್ತಿ ಹೇಳಿದ್ದಾರೆ. ಅವರ ಈ ಅಪೇಕ್ಷೆಯನ್ನು ಈಡೇರಿಸಲು ಸಾಕಾಗುವಷ್ಟು ಧೈರ್ಯ ತಂದುಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ, ಬ್ಯಾಂಕ್ ರಾಷ್ಟ್ರೀಕರಣದ ಪರಿಕಲ್ಪನೆ ಜನರ ಮನಸ್ಸಿನೊಳಕ್ಕೆ ಇಳಿದಿದೆ.

ನಂತರದಲ್ಲಿ, ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಕಷ್ಟು ಲಾಭ ಮಾಡುತ್ತಿಲ್ಲ, ಖಾಸಗಿ ಬ್ಯಾಂಕ್‌ಗಳಿಗೆ ಹೋಲಿಸಿದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳ ಲಾಭದಾಯಕತೆ ಬಹಳ ಕಡಿಮೆ ಎಂಬುದಾಗಿ ಒಂದು ಆಕ್ರಮಣಕಾರಿ ಪ್ರಚಾರ ದಾಳಿ ನಡೆಸಲಾಯಿತು. ಇದು ಸಂಪೂರ್ಣವಾಗಿ ಒಂದು ದಿಕ್ಕು ತಪ್ಪಿಸುವ ಕೆಲಸ. ಏಕೆಂದರೆ, ಒಂದು ಸಾಮಾಜಿಕ ಉದ್ದೇಶವನ್ನು ಸಾಧಿಸಲು ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಲಾಗಿತ್ತು, ಅತಿ ಹೆಚ್ಚು ಲಾಭ ಸಂಪಾದಿಸುವುದಕ್ಕಲ್ಲ. ಬ್ಯಾಂಕ್‌ಗಳ ಸಾಧನೆಯನ್ನು ಅಳೆಯುವಾಗ ಅವು ಈ ಸಾಮಾಜಿಕ ಉದ್ದೇಶವನ್ನು ಎಷ್ಟರ ಮಟ್ಟಿಗೆ ಸಾಧಿಸಿವೆ ಎಂಬ ಮಾನದಂಡವಾಗಬೇಕೇ ವಿನಃ, ಅವು ಎಷ್ಟು ಲಾಭ ಗಳಿಸಿವೆ ಎಂಬುದಲ್ಲ. ಆದಾಗ್ಯೂ, ಕೆಲವು ವ್ಯಕ್ತಿಗಳು ಮತ್ತು ಸರ್ಕಾರ ಬಯಸುವಂತೆ ವರದಿ ಕೊಡಲು "ಸ್ಲಾಟ್ ಮಷೀನ್"ಗಳಂತೆ ಕೆಲಸಮಾಡುವ ಸಮಿತಿಗಳು (ನರಸಿಂಹಂ ಸಮಿತಿ, ನಾಯಕ್ ಸಮಿತಿ, ಇತ್ಯಾದಿ) ಸ್ವಲ್ಪವೂ ನಾಚಿಕೆ ಇಲ್ಲದೆ, ಕಾಲ ಕ್ರಮೇಣ ಖಾಸಗೀಕರಣವನ್ನು ಒಪ್ಪಿಕೊಳ್ಳುವಂತೆ ಜನರ ಮನ ಪರಿವರ್ತಿಸುವ ಉದ್ದೇಶದಿಂದ, ರಾಷ್ಟ್ರೀಕೃತ ಬ್ಯಾಂಕ್‌ಗಳ ಹೆಸರು ಕೆಡಿಸುವ ಕೆಲಸಮಾಡಿವೆ.

ಅಂತಿಮವಾಗಿ, ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ಕೊಡುವಾಗ ಅನುಸರಿಸುವ "ಬೇಜವಾಬ್ದಾರಿ" ನಡವಳಿಕೆಗಳಿಂದಾಗಿ ಬ್ಯಾಂಕ್‌ಗಳು "ವಸೂಲಾಗದ ಸಾಲ"ಗಳ ಅತಿ ದೊಡ್ಡ ಹೊರೆ ಹೊರುವಂತಾಗಿದೆ ಎಂಬ ವಾದವೂ ಪ್ರಚಲಿತವಿದೆ. ವಾಸ್ತವಾಗಿ, ರಾಷ್ಟ್ರೀಕೃತ ಬ್ಯಾಂಕ್‌ಗಳ ವಸೂಲಾಗದ ಸಾಲಗಳು ಬೆಟ್ಟದಂತೆ ಬೆಳೆದಿರುವುದು, ಅವುಗಳ "ಬೇಜವಾಬ್ದಾರಿತನ"ದಿಂದಲ್ಲ, ಸರ್ಕಾರದ ನೀತಿಗಳು ಬದಲಾದ ಸನ್ನಿವೇಶದಲ್ಲಿ ಬ್ಯಾಂಕ್‌ಗಳು ನಿರ್ವಹಿಸಲೇಬೇಕಾದ ಜವಾಬ್ದಾರಿಯ ಕಾರಣದಿಂದಾಗಿ. ತಮ್ಮದಲ್ಲದ ತಪ್ಪಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳು ಜವಾಬ್ದಾರಿ ಹೊರುವಂತಾಗಿರುವ ಪರಿಸ್ಥಿತಿಗೆ ಸರ್ಕಾರದ ನೀತಿಗಳಲ್ಲಿ ಮೂರು ಮುಖ್ಯ ಬದಲಾವಣೆಗಳು ಎದ್ದು ಕಾಣುತ್ತವೆ.

ಮೊದಲನೆಯ ಬದಲಾವಣೆ ವಿತ್ತೀಯ ನೀತಿಗೆ ಸಂಬಂಧಿಸುತ್ತದೆ. ವಿತ್ತೀಯ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾಯ್ದೆಯ ಪ್ರಕಾರ ಸರ್ಕಾರವು ಒಂದು ಕಡೆ ತನ್ನ ವಿತ್ತೀಯ ಕೊರತೆಯ ಗಾತ್ರದ ಮೇಲೆ ಮಿತಿ ವಿಧಿಸಿಕೊಳ್ಳುವ ಮೂಲಕ, ಮತ್ತೊಂದು ಕಡೆ ಖಾಸಗಿ ಕಾರ್ಪೊರೇಟ್ ವಲಯಕ್ಕೆ ಅಪಾರ ತೆರಿಗೆ ರಿಯಾಯ್ತಿ ಕೊಡುವ ಮೂಲಕ ತನ್ನ ಮೇಲೇ ತಾನೇ ವಿತ್ತೀಯ ಬಿಗಿತದ ಚಪ್ಪಡಿ ಎಳೆದುಕೊಂಡಿದೆ. ಪರಿಣಾಮವಾಗಿ, ಬೃಹತ್ ಪ್ರಮಾಣದ ಹೂಡಿಕೆ ಬೇಕಾಗುವ ಮತ್ತು ಗಜ ಗರ್ಭಾವಧಿಯ ಮತ್ತು ಅಪಾರ ರಿಸ್ಕ್‌ನಿಂದ ಕೂಡಿರುವ ಮೂಲಸೌಕರ್ಯ ಯೋಜನೆಗಳನ್ನು ಖಾಸಗಿ ವಲಯವು ಕಾರ್ಯಗತ ಮಾಡುತ್ತಿದೆ. ಇದೇ ಕಾರ್ಯವನ್ನು ಈ ಮೊದಲು ಸಾರ್ವಜನಿಕ ವಲಯವೇ ಮಾಡುತ್ತಿತ್ತು.

ಎರಡನೆಯ ಬದಲಾವಣೆ, ನಿರ್ದಿಷ್ಟ ಉದ್ದೇಶಗಳಿಗಾಗಿ ಸ್ಥಾಪಿಸಿದ ಪರಿಣಿತ ಹಣಕಾಸು ಸಂಸ್ಥೆಗಳ ಸಮಾಪ್ತಿಗೆ ಸಂಬಂಧಿಸುತ್ತದೆ. ನಿರ್ದಿಷ್ಟ ಉದ್ದೇಶಗಳಿಗಾಗಿ ಸ್ಥಾಪಿಸಿದ ಐಡಿಬಿಐ, ಐಎಫ್‌ಸಿಐ, ರಾಜ್ಯಗಳ ಹಣಕಾಸು ಕಾರ್ಪೊರೇಷನ್‌ಗಳು, ಐಸಿಐಸಿಐ ಮುಂತಾದ ಪರಿಣಿತ ಹಣಕಾಸು ಸಂಸ್ಥೆಗಳು ಈ ಮೊದಲು ಇಂತಹ ಮೂಲಸೌಕರ್ಯ ಯೋಜನೆಗಳಿಗೆ ದೀರ್ಘಾವಧಿಯ ಸಾಲ ಒದಗಿಸುತ್ತಿದ್ದವು ಮತ್ತು ವಾಣಿಜ್ಯ ಬ್ಯಾಂಕ್‌ಗಳು ಲಘು ಅವಧಿಯ ಸಾಲ ಒದಗಿಸುತ್ತಿದ್ದವು. ಉದಾರೀಕರಣದ ಅವಧಿಯಲ್ಲಿ ಇಂತಹ ಪರಿಣಿತ ಹಣಕಾಸು ಸಂಸ್ಥೆಗಳನ್ನು ನಿರ್ವೀರ್ಯಗೊಳಿಸಲಾಗಿದೆ. ಐಡಿಬಿಐ ಮತ್ತು ಐಸಿಐಸಿಐ ಸಂಸ್ಥೆಗಳು ವಾಣಿಜ್ಯ ಬ್ಯಾಂಕ್ ಆಗಿ ಪರಿವರ್ತನೆಗೊಂಡಿವೆ. ಇಂತಹ ಪರಿಣಿತ ಹಣಕಾಸು ಸಂಸ್ಥೆಗಳ ಕಾರ್ಯಾಚರಣೆಯನ್ನು ಬದಲಿಸಿದ ಪರಿಣಾಮವಾಗಿ, ರಾಷ್ಟ್ರೀಕೃತ ಬ್ಯಾಂಕ್‌ಗಳು ಈ ಮೂಲಸೌಕರ್ಯ ಯೋಜನೆಗಳಿಗೆ ದೀರ್ಘಾವಧಿ, ಮಧ್ಯಮಾವಧಿ ಮತ್ತು ಅಲ್ಪಾವದಿಯ ಸಾಲ ಸೌಲಭ್ಯ ಒದಗಿಸಬೇಕಾದ ಪರಿಸ್ಥಿತಿ ಬಂದಿದೆ. ಇದರಲ್ಲೊಂದು ತೊಡಕಿದೆ. ಬ್ಯಾಂಕ್ ಎಂದರೆ, ಸಾಲ ಕೊಡುವುದಕ್ಕಾಗಿಯೇ ಠೇವಣಿ ಸ್ವೀಕರಿಸುವ ಒಂದು ಸಂಸ್ಥೆ. ಯಾವಾಗ ಬೇಕಾದರೂ ಹಿಂಪಡೆಯಬಹುದಾದ ಈ ಠೇವಣಿಗಳನ್ನು ಬ್ಯಾಂಕ್‌ಗಳು ಅಲ್ಪ ಮತ್ತು ಮಧ್ಯಮ ಅವಧಿಗೆ ಮಾತ್ರ ಸ್ವೀಕರಿಸುತ್ತವೆ. ಆದರೆ, ಈ ಮೂಲಸೌಕರ್ಯ ಯೋಜನೆಗಳಿಗೆ ಒದಗಿಸಿದ ಬೃಹತ್ ಮೊತ್ತದ ಹೆಚ್ಚಿನ ಸಾಲಗಳು ದೀರ್ಘಾವಧಿಯವು. ಹಾಗಾಗಿ, ಠೇವಣಿಗಳಿಗೂ ಮತ್ತು ಸಾಲಗಳಿಗೂ ತಾಳ ಮೇಳವೇ ತಪ್ಪಿದೆ. ಮೇಲಾಗಿ, ಹಲವಾರು ಬೃಹತ್ ಮೂಲಸೌಕರ್ಯ ಯೋಜನೆಗಳು ಅಪಾರ ರಿಸ್ಕ್‌ನಿಂದ ಕೂಡಿವೆ. ಹಾಗಾಗಿ, ರಾಷ್ಟ್ರೀಕೃತ ಬ್ಯಾಂಕ್‌ಗಳ "ವಸೂಲಾಗದ ಸಾಲ"ಗಳ ಪೈಕಿ ಮೂಲಸೌಕರ್ಯ ವಲಯದ ಪಾಲು ಸುಮಾರು ಅರ್ಧ ಭಾಗಕ್ಕಿಂತಲೂ ಹೆಚ್ಚಿಗೆ ಇದೆ.

ಇಂತಹ ಮೂಲಸೌಕರ್ಯ ಯೋಜನೆಗಳಿಗೆ ಸಾಲ ಕೊಡಲು ಖಾಸಗಿ ಬ್ಯಾಂಕ್‌ಗಳು ನಿರಾಕರಿಸಿದವು. ರಾಷ್ಟ್ರೀಕೃತ ಬ್ಯಾಂಕ್‌ಗಳೂ ಸಹ ಅದನ್ನೇ ಮಾಡಬಹುದಿತ್ತು. ಅವು ಹಾಗೆ ಮಾಡಲಿಲ್ಲ, ಏಕೆಂದರೆ, ಅವು ರಾಷ್ಟ್ರೀಕೃತ ಬ್ಯಾಂಕ್‌ಗಳು. ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ಸೌಲಭ್ಯ ಒದಗಿಸುವಂತೆ ಬಯಸಿದ ಸರ್ಕಾರದ ನಿರ್ದೇಶನವನ್ನು ಅವು ಕರ್ತವ್ಯವಾಗಿ ಪಾಲಿಸಿದವು. ಆದರೆ, ಈ ಯೋಜನೆಗಳನ್ನು ಈಗ ಖಾಸಗಿ ವಲಯವು ಕೈಗೊಳ್ಳುತ್ತಿರುವುರಿಂದ, ಖಾಸಗಿ ಉದ್ದಿಮೆದಾರರಿಗೆ "ಉದ್ದೇಶಪೂರ್ವಕ ಸುಸ್ತಿದಾರ"ರಾಗುವ ಅವಕಾಶಗಳಿವೆ. ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಯೋಜನೆಗೆ ವಿನಿಯೋಗಿಸುವುದರ ಬದಲು ಬಂಡವಾಳಗಾರರು ತಮ್ಮ ಜೇಬಿಗೆ ಇಳಿಸಿಕೊಂಡು ಬ್ಯಾಂಕ್‌ಗಳಿಗೆ ಕೈ ಎತ್ತಿ ಹೋಗಿರುವ ಅನೇಕ ನಿದರ್ಶನಗಳಿವೆ. ಇಂತಹ ಪ್ರಕರಣಗಳಿಂದಾಗಿ ಸಾಲ ಕೊಟ್ಟ ರಾಷ್ಟ್ರೀಕೃತ ಬ್ಯಾಂಕ್‌ಗಳ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ಸೌಲಭ್ಯ ಒದಗಿಸುವಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ನಿರ್ದೇಶನ ಕೊಟ್ಟ ಸರ್ಕಾರವೇ ವಸೂಲಾಗದ ಸಾಲದ ಬಗ್ಗೆ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ದೂರುವುದು ಮತ್ತು ವಸೂಲಾಗದ ಸಾಲಗಳ ಕಾರಣದ ಮೇಲೆ ಅವುಗಳನ್ನು ಖಾಸಗಿಕರಣಗೊಳಿಸಲು ಹಾತೊರೆಯುತ್ತಿರುವುದು ಒಂದು ವಿಡಂಬನೆಯೇ.

ಮೂರನೆಯ ಬದಲಾವಣೆ, ಕೃಷಿ ವಲಯದ ಲಾಭದಾಯಕತೆಯಲ್ಲಿ ಆಗಿರುವ ಮಹತ್ತರ ಇಳಿಕೆಗೆ ಸಂಬಂಧಿಸುತ್ತದೆ. ಕೃಷಿಯನ್ನೊಳಗೊಂಡ "ಆದ್ಯತಾ

ಪುಟ 14 ಕ್ಕೆ

ಭಾಗ-8 ಆದಿಮ ಬಂಡವಾಳದ ಶೇಖರಣೆ

ಪುಟ 6 ರಿಂದ

ಪ್ರದೇಶಗಳಲ್ಲಿ ಅದು ಬೆಳೆಯಲಾರಂಭಿಸಿತು. ಊಳಿಗಮಾನ್ಯ ಸಮಾಜ ವ್ಯವಸ್ಥೆ ಕುಸಿಯುತ್ತಿದ್ದಂತೆ ಅದು ವೇಗವಾಗಿ ಕೈಗಾರಿಕಾ ಬಂಡವಾಳವಾಗಿ ಬೆಳೆಯಲಾರಂಭಿಸಿತು. ವಸಾಹತುಶಾಹಿಯ ಬೆಳವಣಿಗೆ ಆದಿಮ ಬಂಡವಾಳದ ಉಗಮಕ್ಕೆ ಒಂದು ಮುಖ್ಯ ಕಾರಣ. ಯುರೋಪಿಯನ್ ದೇಶಗಳ ನಡುವೆ ವಾಣಿಜ್ಯ ಯುದ್ಧಗಳೂ ಈ ಪ್ರಕ್ರಿಯೆಗೆ ಆವೇಗ ಒದಗಿಸಿದವು. ವಸಾಹತುಶಾಹಿಯಿಂದ ಲೂಟಿ, ಅದರ ಕ್ರೌರ್ಯಗಳನ್ನು ಜಾವಾ, ಭಾರತ, ವೆಸ್ಟ್ ಇಂಡೀಸ್, ಅಮೆರಿಕದ ಉದಾಹರಣೆಗಳೊಂದಿಗೆ ಅಧ್ಯಾಯ 31ರಲ್ಲಿ ವಿವರಿಸಲಾಗುತ್ತದೆ.

ವಸಾಹತುಶಾಹಿ ಪದ್ಧತಿ, ಸಾರ್ವಜನಿಕ ಸಾಲದ ವ್ಯವಸ್ಥೆ, ವಿಪರೀತ ತೆರಿಗೆಗಳು, ತಯಾರಿಕೋದ್ಯಮಗಳಿಗೆ ಸಿಕ್ಕಿದ ರಕ್ಷಣೆಗಳು, ವಾಣಿಜ್ಯ ಯುದ್ಧಗಳು ಬಂಡವಾಳಶಾಹಿಯ ಮೊದಲ ಹಂತದ ತಯಾರಿಕೋದ್ಯಮಕ್ಕೆ ಭಾರೀ ಉತ್ತೇಜನ ನೀಡಿದವು. ಆಧುನಿಕ ಕೈಗಾರಿಕೋದ್ಯಮಗಳ ಆರಂಭಾವಸ್ಥೆಯಲ್ಲಿ ಇನ್ನೂ ಹೆಚ್ಚಿನ ದೈತ್ಯ ಆಯಾಮವನ್ನು ಪಡೆದುಕೊಂಡವು. ಮುಗ್ಧ ಜನತೆಯ ಭಾರೀ ನರಮೇಧದೊಂದಿಗೆ ಆಧುನಿಕ ಕೈಗಾರಿಕೋದ್ಯಮಗಳು ಉದ್ಭವಿಸಿವೆ. ಲ್ಯಾಂಕೆಶೈರಿನ ಬಾಲಗುಲಾಮ ದುಡಿಮೆ ಮತ್ತು ಲಿವರ್‌ಪೂಲಿನ ಗುಲಾಮ ಸಾಗಾಣಿಕೆಯ ಉದಾಹರಣೆಗಳೊಂದಿಗೆ ಹೇಳಲಾಗಿದೆ.

ಒಟ್ಟಾರೆಯಾಗಿ "ಬಂಡವಾಳವು ಅಡಿಯಿಂದ ಮುಡಿಯವರೆಗೂ, ಪ್ರತಿಯೊಂದು ರೋಮ ರಂಧ್ರದಿಂದಲೂ ರಕ್ತವನ್ನು, ಕೊಳಕನ್ನೂ ಸುರಿಸುತ್ತಾ ಆವಿರ್ಭವಿಸಿದೆ." ಎಂದು ಆದಿಮ ಬಂಡವಾಳದ ಮತ್ತು ಬಂಡವಾಳಿಗರ ಹುಟ್ಟಿನ ಬಗ್ಗೆ ಅಧ್ಯಾಯ-31 ಮನಮುಟ್ಟುವಂತೆ ಹೇಳುತ್ತದೆ.

ಬಂಡವಾಳದ ಆದಿಮ ಶೇಖರಣೆಯ ಹುಟ್ಟು ಮತ್ತು ವಿಕಾಸದಲ್ಲಿ ಕಂಡು ಬಂದ ಅದರ ಚಾರಿತ್ರಿಕ ಪ್ರವೃತ್ತಿಗಳ ಮತ್ತು ದ್ವಂದ್ವಮಾನ ಭೌತವಾದದ ನಿಯಮಗಳ ಆಧಾರದ ಮೇಲೆ ಬಂಡವಾಳಶಾಹಿ ವ್ಯವಸ್ಥೆಯ ಅಂತಿಮ ಘಟ್ಟದಲ್ಲಿ ಏನಾಗಬಹುದು ಎಂಬುದನ್ನು ಮುಂಗಾಣುವ ಪ್ರಯತ್ನವನ್ನು ಅಧ್ಯಾಯ-32ರಲ್ಲಿ ಮಾಡಲಾಗಿದೆ.

ಬಂಡವಾಳದ ಕೇಂದ್ರೀಕರಣದಿಂದ ಸತತವಾಗಿ ಸಂಖ್ಯಾತ್ಮಕವಾಗಿ ಕಡಿಮೆಯಾಗುತ್ತಿರುವ ಶ್ರೀಮಂತರ ಕೈಯಲ್ಲಿ ಏಕಸ್ವಾಮ್ಯ ಹೆಚ್ಚುತ್ತದೆ. ಇದರ ಜತೆಗೆ ಒಂದು ಕಡೆ ಕಾರ್ಮಿಕ ವರ್ಗದ ಸಂಕಟ, ಶೋಷಣೆಯೂ, ಇನ್ನೊಂದು ಕಡೆ ಅದರ ಪ್ರತಿಭಟನೆ, ಐಕ್ಯತೆ, ಸಂಘಟನೆಯೂ ಬೆಳೆಯುತ್ತದೆ. ಉತ್ಪಾದನಾ ಸಾಧನಗಳ ಕೇಂದ್ರೀಕರಣ ಮತ್ತು ಶ್ರಮದ ಸಾಮಾಜೀಕರಣ ಹೆಚ್ಚುತ್ತಾ ಹೋಗಿ ಬಂಡವಾಳದ ಏಕಸ್ವಾಮ್ಯ, ಅದೇ ಉತ್ಪಾದನಾ ವಿಧಾನದ ಬೇಡಿಯಾಗುತ್ತದೆ. ಅವೆರಡನ್ನು ಹಿಡಿದಿಟ್ಟಿರುವ ಬಂಡವಾಳಶಾಹಿ ಕವಚ ಹರಿದು ಬೀಳುತ್ತದೆ. ಬಂಡವಾಳಶಾಹಿ ಖಾಸಗಿ ಆಸ್ತಿಯು, ಸಾಮಾಜೀಕರಣಗೊಂಡ ಆಸ್ತಿಯಾಗಿ ಮಾರ್ಪಡುತ್ತದೆ. ಇದು ಬಂಡವಾಳ ಶೇಖರಣೆಯ ಚಾರಿತ್ರಿಕ ಪ್ರವೃತ್ತಿಯಾಗಿರುತ್ತದೆ ಎಂಬ ಆಶಾದಾಯಕ ಭವಿಷ್ಯವನ್ನು ಭಾಗ-8 ಮುಂದಿಡುತ್ತದೆ. ●

ಕರ್ನಾಟಕದ ಪ್ರಾಂತ ರೈತ ಸಂಘದ ಐತಿಹಾಸಿಕ ದಾಖಲೆ

ಪುಟ 16 ರಿಂದ

ರೈತರಿಗೆ ಅವಕಾಶಗಳನ್ನು ಒದಗಿಸಿಕೊಡಬೇಕಾಗಿದೆ. ಕರ್ನಾಟಕದಲ್ಲಿ ಇಂದೂ ಕೂಡಾ ಭೂಮಿಯ ಪ್ರಶ್ನೆ ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. .. .. ಭೂ ಸಂಬಂಧಗಳ ಬದಲಾವಣೆಯಾಗಬೇಕಾದರೆ ಸುಮಾರು 75 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲಿ 1 ಎಕರೆ ಭೂಮಿಯನ್ನು ಹೊಂದಿದ 35 ಲಕ್ಷ ರೈತರಿದ್ದಾರೆ. ಕರ್ನಾಟಕ ರಾಜ್ಯದ 7 ಲಕ್ಷ ರೈತರಲ್ಲಿ 40% ಭೂಮಿಯನ್ನು ಹೊಂದಿದ್ದಾರೆ. ಕುಟುಂಬ ಎಂಬ ವ್ಯಾಖ್ಯಾನದ ಬಲಹೀನತೆಯನ್ನು ಹೋಗಲಾಡಿಸಲು ಭೂಸುಧಾರಣೆ ಜಾರಿಗೆ ತರುವ ಹೋರಾಟಗಳು ನಡೆಯಬೇಕಾಗಿರುವುದು ಇಂದಿನ ಅವಶ್ಯಕತೆಯಾಗಿದೆ. ಉಳುಮೆಗಾರನಿಗೆ ಭೂಮಿಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಚಳುವಳಿಗಳನ್ನು ಕಟ್ಟುವ ಅಗತ್ಯವಿದೆ. ಇಂತಹ ಚಳುವಳಿಗಳನ್ನು ಕಟ್ಟುವ ಮುಖಾಂತರ ಜಾತಿವಾದ, ಕೋಮುವಾದಗಳನ್ನು ಎದುರಿಸಬೇಕಾಗಿದೆ.

.. .. ಒಂದು ಕಡೆಗೆ 'ಉಳುವವನೆ ಭೂಮಿಯ ಒಡೆಯ' ಎಂಬುದು ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಸರಕಾರಿ ಭೂಮಿಯಲ್ಲಿ ಉಳುಮೆ ಮಾಡಿದವರ ಪ್ರಶ್ನೆ, ಅರಣ್ಯ ಭೂಮಿಯಲ್ಲಿ ಉಳುಮೆ ಮಾಡಿದವರ ಪ್ರಶ್ನೆ, ಭೂಸ್ವಾಧೀನತೆಗೆ ತಂದಂತಹ 2019 ಕಾಯಿದೆ ಈ ಎಲ್ಲಾ ವಿಷಯಗಳನ್ನಿಟ್ಟುಕೊಂಡು ವಿಶೇಷವಾಗಿ ಬಡರೈತ, ಕೂಲಿ ಕಾರ್ಮಿಕರನ್ನು ಸಂಘಟಿಸುವುದರ ಮೂಲಕ, ಭೂ ಸಂಬಂಧಗಳ ಸುಧಾರಣೆ ಮಾಡುವುದರ ಮೂಲಕ ಜಮೀನ್ದಾರಿ ನೇತೃತ್ವದ ಕಾಂಗ್ರೆಸ್, ಬಿಜೆಪಿಯ ರೈತವಿರೋಧಿ ನಿಲುವುಗಳ ಬದಲಾವಣೆಗಾಗಿ ಒತ್ತಾಯಿಸುವಂತಹ ದೃಢವಾದಂತಹ ಹೋರಾಟಗಳನ್ನು ಕಟ್ಟುವ ಅವಶ್ಯಕತೆ ಕರ್ನಾಟಕದಲ್ಲಿದೆ. ಅಂತಹ ಚಳುವಳಿಗಳನ್ನು ಕಟ್ಟುವಲ್ಲಿ ಶ್ರೀಯಾನರವರು ಬರೆದಿರುವ ಈ ಪುಸ್ತಕವು ಐತಿಹಾಸಿಕವಾದ ದಾಖಲೆಯಾಗಲಿ ಎಂದು ಆಶಿಸಿ ಮುಂದಿನ ಚಳುವಳಿಯ ದಿಕ್ಕಿಗೆ ಇಂದಿನ ಇತಿಹಾಸ ನೆನಪಿನಲ್ಲಿಟ್ಟುಕೊಂಡು ಮುಂದಾಗೋಣ, ಹೋರಾಡೋಣ. ಈ ಎಲ್ಲ ನೆಲೆಗಳಲ್ಲಿ ಕಾಮ್ರೇಡ್ ಶ್ರೀಯಾನ್ ಅವರ ಈ ಪುಸ್ತಕವು ರೈತ ಹೋರಾಟಗಳಿಗೆ ಮಾರ್ಗದರ್ಶಿಯಾಗಿ ಮುಂಬರುವ ದಿನಗಳಲ್ಲಿ ಸ್ಫೂರ್ತಿ ನೀಡುತ್ತದೆ. ಹೀಗಾಗಿ ಇನ್ನೊಮ್ಮೆ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಆಗಸ್ಟ್ 4, 2019 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ರಾಜ್ಯ ಸರ್ಕಾರ ನೌಕರರ ಸಂಘದ 'ನಂದಿನಿ' ಸಭಾಂಗಣ, ತಾಲೂಕು ಕಛೇರಿ ಆವರಣ, ಹಂಪನಕಟ್ಟ, ಮಂಗಳೂರಿನಲ್ಲಿ ನಡೆಯಲಿದೆ. ಪುಸ್ತಕ ಲೋಕಾರ್ಪಣೆ – ಬಿ. ರಮಾನಾಥ ರೈ, ಕರ್ನಾಟಕ ರಾಜ್ಯ ಮಾಜಿ ಸಚಿವರು, ಅಧ್ಯಕ್ಷತೆ– ಮಾರುತಿ ಮಾನ್ಪಡೆ ರಾಜ್ಯ ಉಪಾಧ್ಯಕ್ಷರು ಕೆಪಿಆರ್‌ಎಸ್, ಕೃತಿ ಪರಿಚಯ– ಜಿ. ರಾಜಶೇಖರ್ ಲೇಖಕರು ಹಾಗೂ ಹಿರಿಯ ಚಿಂತಕರು, ಅತಿಥಿಗಳು – ರವಿಕಿರಣ, ರಾಜ್ಯ ಕಾರ್ಯದರ್ಶಿ ಕೆಆರ್‌ಆರ್‌ಎಸ್, ವಸಂತರಾಜ್ ಎನ್.ಕೆ. ಪ್ರಕಾಶಕರು ಕ್ರಿಯಾಪ್ರಕಾಶನ ಮುಂತಾದವರು ಭಾಗವಹಿಸುತ್ತಾರೆ. ●

ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ತಕ್ಷಣವೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪತ್ರಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಿ ಚಂದಾಗಳನ್ನು ನವೀಕರಿಸಬೇಕೆಂದು ಕೋರುತ್ತೇವೆ.

–ಸಂಪಾದಕರು

ಬ್ಯಾಂಕ್ ರಾಷ್ಟ್ರೀಕರಣದ 50 ವರ್ಷಗಳ ನಂತರ

ಪುಟ 13 ರಿಂದ

ವಲಯ" ಎಂಬುದರ ಅರ್ಥನಿರೂಪಣೆಯನ್ನು ಹಾಸ್ಯಾಸ್ಪದ ಮಟ್ಟಕ್ಕೆ ವಿಸ್ತರಿಸಲಾಗಿದೆಯಾದರೂ, ರಾಷ್ಟ್ರೀಕೃತ ಬ್ಯಾಂಕ್‌ಗಳು ಕೃಷಿಗೆ ಸಾಲ ಕೊಡುತ್ತವೆ. ವಿದೇಶಿ ಮತ್ತು ಖಾಸಗಿ ಬ್ಯಾಂಕ್‌ಗಳು ಸಾಮಾನ್ಯವಾಗಿ ಕೃಷಿ ಸಾಲ ಕೊಡಲು ಹಿಂಜರಿಯುತ್ತವೆ. ಅನೇಕ ಖಾಸಗಿ ಬ್ಯಾಂಕ್‌ಗಳು ಮಧ್ಯವರ್ತಿಗಳಿಗೆ ಸಾಲ ಕೊಡುತ್ತವೆ. ಈ ಮಧ್ಯವರ್ತಿಗಳು ಇದೇ ಹಣವನ್ನು ರೈತರಿಗೆ ಸಾಲ ಕೊಡುತ್ತಾರೆ. ಹಾಗಾಗಿ, ಒಂದು ಹೊಸ ಖಾಸಗಿ ಲೇವಾದೇವಿದಾರರ ವರ್ಗವೇ ಸೃಷ್ಟಿಯಾಗಿದೆ. ವಾಸ್ತವವಾಗಿ, ಐಸಿಐಸಿಐ ಬ್ಯಾಂಕ್ ನೇರವಾಗಿ ಕೃಷಿಕರಿಗೆ ಸಾಲ ಕೊಡುವುದೇ ಇಲ್ಲ. ಬದಲಿಗೆ, ಈ ಮಧ್ಯವರ್ತಿಗಳ ಮೂಲಕವೇ ವ್ಯವಹರಿಸುತ್ತಿದೆ.

ಕೃಷಿ ಸಾಲಗಳನ್ನು ಮತ್ತೆ ಮತ್ತೆ ಮನ್ನಾ ಮಾಡುತ್ತಿರುವ ಕ್ರಮವು, ತಾವೇ ಸರ್ವಜ್ಞರು ಎಂಬಂತೆ ಕೃಷಿ ಸಾಲ ಮನ್ನಾ ವಿರೋಧಿಸುವ ಅನೇಕ ಬೂರ್ಜ್ವಾ ವ್ಯಾಖ್ಯಾನಕಾರರು ಆರೋಪಿಸುವಂತೆ ರೈತರು ಬೆಳೆಸಿಕೊಂಡಿರುವ "ದುರಭ್ಯಾಸ"ದಿಂದಾಗಿ ಅಲ್ಲ, ಬದಲಿಗೆ, ಕೃಷಿಯ ಲಾಭದಾಯಕತೆ ನಿಂತು ಹೋಗಿರುವುದರಿಂದಾಗಿ. ಹಾಗಾಗಿ, ಕೃಷಿ ಸಾಲಗಳಿಂದಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೇಲೆ ಹೊರೆ ಬಿದ್ದಿರುವುದು ಬ್ಯಾಂಕ್‌ಗಳ "ಬೇಜವಾಬ್ದಾರಿತನ"ದಿಂದಾಗಿ ಅಲ್ಲ, ಬದಲಿಗೆ, ಸರ್ಕಾರದ ನೀತಿಗಳು ಕೃಷಿಯ ಲಾಭದಾಯಕತೆಯನ್ನು ಹಾಳುಗೆಡವಿರುವ ಸನ್ನಿವೇಶದಲ್ಲಿ ಕೃಷಿ ಸಾಲ ಕೊಟ್ಟಿರುವ ಅವರ "ಜವಾಬ್ದಾರಿತನ"ದಿಂದಾಗಿ.

ಇದನ್ನೆಲ್ಲಾ ಹೇಳುತ್ತಿರುವುದು ರಾಷ್ಟ್ರೀಕೃತ ಬ್ಯಾಂಕ್‌ಗಳ ಬಗ್ಗೆ ವರ್ಣರಂಜಿತವಾಗಿ ಬಣ್ಣಿಸುವುದಕ್ಕಲ್ಲ; ಯಾವ ಉದ್ದೇಶ ಸಾಧನೆಗಾಗಿ ಬ್ಯಾಂಕ್‌ಗಳ ರಾಷ್ಟ್ರೀಕರಣವಾಗಿತ್ತೋ, ಆ ಉದ್ದೇಶದಿಂದ ಸರ್ಕಾರ ವಿಮುಖವಾಗಿದೆ ಎಂಬ ಅಂಶವನ್ನು ಒತ್ತಿ ಹೇಳುವುದಕ್ಕಾಗಿ. ನಿಜಕ್ಕೂ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಮೇಲುಗೈ ಹೊಂದಿರುವ ಜಗತ್ತಿನಲ್ಲಿ, ರಾಷ್ಟ್ರೀಕೃತ ಬ್ಯಾಂಕ್‌ಗಳ ವಿದ್ಯಮಾನವು ಒಂದು ರೀತಿಯ ಮುಜುಗರದಲ್ಲಿ ಕುಳಿತಿದೆ. ನವ ಉದಾರವಾದದ ಗುಣ ಲಕ್ಷಣಗಳು ರಾಷ್ಟ್ರೀಕೃತ ಬ್ಯಾಂಕ್‌ಗಳ ಕಾರ್ಯವೈಖರಿಯನ್ನು ಹಾಳುಗೆಡವುವ ಕಾರಣದಿಂದಾಗಿ ಅವು ನೋವು ತಿನ್ನುತ್ತಿವೆ. ಆದರೆ, ರಾಷ್ಟ್ರೀಕರಣವನ್ನು ತಿರುಗುಮುರುಗು ಮಾಡುವುದರಿಂದ, ಅದಾಗಲೇ ಮೇಲುಗೈ ಹೊಂದಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಮತ್ತಷ್ಟು ಬಲಪಡಿಸಿದಂತಾಗುತ್ತದೆ. ಅದು ರಾಷ್ಟ್ರದ ಸಾರ್ವಭೌಮತೆಯನ್ನು ಮತ್ತಷ್ಟು ಕುಂದಿಸುತ್ತದೆ. ಮತ್ತು, ಕಿರು ಉತ್ಪಾದಕರು ಹಾಗೂ ರೈತ ಕೃಷಿಯನ್ನು ತುಳಿಯುವ ಮೂಲಕ ಬಂಡವಾಳವು ತೊಡಗಿರುವ ಆದಿಮ ಶೇಖರಣೆಯ ಪ್ರಕ್ರಿಯೆಯನ್ನು ಮತ್ತಷ್ಟು ತೀವ್ರಗೊಳಿಸುತ್ತದೆ.

ರಾಷ್ಟ್ರೀಕೃತ ಬ್ಯಾಂಕ್‌ಗಳ ಭವಿತವ್ಯ ಕುರಿತ ಎಲ್ಲ ವಾದ-ಸಂವಾದಗಳಲ್ಲಿ, ಈ ಬ್ಯಾಂಕ್‌ಗಳು ಸರ್ಕಾರದ ಒಡೆತನದಲ್ಲಿಲ್ಲ; ಪ್ರಭುತ್ವದ ಒಡೆತನದಲ್ಲಿವೆ ಎಂಬ ಒಂದು ಮುಖ್ಯವಾದ ಅಂಶವು ಕಡೆಗಣಿತವಾಗಿದೆ. ಪ್ರಭುತ್ವದ ಕಾರ್ಯನಿರ್ವಹಣೆಯ ಅಂಗ ಮಾತ್ರವಾದ ಸರ್ಕಾರವು, ಈ ಬ್ಯಾಂಕ್‌ಗಳ ಭವಿತವ್ಯ ಏನಾಗಬೇಕು ಎಂಬುದನ್ನು ಸಂಪೂರ್ಣವಾಗಿ ತನ್ನಷ್ಟಕ್ಕೆ ತಾನೇ ನಿರ್ಧರಿಸಲಾಗದು. ಆದರೂ, ಸರ್ಕಾರವು ಇದನ್ನೇ ಮಾಡಲು ಉದ್ದೇಶಿಸಿದೆ. ಉದಾಹರಣೆಗೆ, ಸರ್ಕಾರವು ಈ ಬ್ಯಾಂಕ್‌ಗಳಲ್ಲಿ ಖಾಸಗಿಯವರು ಷೇರು ಕೊಳ್ಳಲು ಅನುಮತಿಸಿದೆ ಮತ್ತು ಅದನ್ನು ಹೆಚ್ಚಿಸುವ ಮೂಲಕ ಖಾಸಗಿ ಒಡೆತನವನ್ನೂ ಹೆಚ್ಚಿಸಿದೆ. ಈ ಸಂಬಂಧವಾಗಿ, ಹೂಡಿಕೆ ಹಿಂತೆಗೆಯುವ ಬಗ್ಗೆ ಬಜೆಟ್‌ನಲ್ಲಿ ಕೇವಲ ಒಂದು ಘೋಷಣೆ ಮಾಡಲಾಗುತ್ತದೆ. ಬಜೆಟ್ ಅಂಗೀಕಾರವಾಗುತ್ತದೆ ಮತ್ತು ಆ ಸಂಗತಿಯಿಂದಲೇ ಹೂಡಿಕೆ ಹಿಂತೆಗೆಯುವ ಪ್ರಸ್ತಾಪವೂ ಊರ್ಜಿತಗೊಳ್ಳುತ್ತದೆ. ಈ ಪ್ರವೃತ್ತಿ ನಿಲ್ಲಬೇಕು.

1969ರಲ್ಲಿ ಬ್ಯಾಂಕ್ ರಾಷ್ಟ್ರೀಕರಣದ ನಿರ್ಧಾರವನ್ನು ಸಂಸತ್ತು ಅಂಗೀಕರಿಸಿತ್ತು ಮಾತ್ರವಲ್ಲ, ನ್ಯಾಯಾಂಗ ಕೂಡ ಅನುಮೋದಿಸಿತು. ಏಕೆಂದರೆ, ಬ್ಯಾಂಕ್ ರಾಷ್ಟ್ರೀಕರಣಕ್ಕೆ ಸುಪ್ರಿಂ ಕೋರ್ಟ್‌ನಲ್ಲಿ ಸವಾಲು ಹಾಕಲಾಗಿತ್ತು, ಆಗ ಸುಪ್ರಿಂ ಕೋರ್ಟ್ ಕೂಡ ತನ್ನ ಸಮ್ಮತಿಯನ್ನು ಕೊಡಬೇಕಾಗಿತ್ತು. ಅಂದರೆ, ಪ್ರಭುತ್ವದ ಎಲ್ಲ ಅಂಗಗಳೂ ಬ್ಯಾಂಕ್ ರಾಷ್ಟ್ರೀಕರಣವನ್ನು ಅನುಮೋದಿಸಿದ್ದವು. ಹಾಗಾಗಿ, ಪ್ರಭುತ್ವದ ಒಡೆತನದ ಮಟ್ಟವನ್ನು ಶೇ.51ಕ್ಕಿಂತ ಮೇಲಿಟ್ಟುಕೊಳ್ಳುವ ಅಥವಾ ಖಾಸಗಿಯವರ ಷೇರುಗಳ ಮಟ್ಟವನ್ನು ಶೇ.51ಕ್ಕಿಂತ ಕೆಳಗಿಟ್ಟುಕೊಳ್ಳುವ ಪ್ರಸ್ತಾಪವೂ ಸೇರಿದಂತೆ, ರಾಷ್ಟ್ರೀಕೃತ ಬ್ಯಾಂಕ್‌ಗಳ ಒಡೆತನದ ಸಂರಚನೆಯನ್ನು ತೆಳುವಾಗಿಸುವ ಯಾವುದೇ ನಿರ್ದಿಷ್ಟ ಹಸ್ತಕ್ಷೇಪವು ಸಂಸದೀಯ ಮಂಜೂರಾತಿ ಪಡೆಯಲೇಬೇಕು. ●

ವಿಶ್ವಸಂಸ್ಥೆಯ ಪಕ್ಷಪಾತದ ವರದಿ: ವೆನೆಜುವೆಲಾ ತಿರಸ್ಕಾರ

ಜುಲೈ 13 ರಂದು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಹೈ ಕಮಿಷನ್ 'ಮಿಚೆಲ್ ಬ್ಯಾಚೆಲೆಟ್' ವೆನೆಜುವೆಲಾ ಕುರಿತಾಗಿ ಮಂಡಿಸಿದ ವರದಿಯನ್ನು ತಿರಸ್ಕರಿಸಿ, ಹಾಗೂ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಅಧ್ಯಕ್ಷ ನಿಕೋಲಸ್ ಮಡುರೊ ರವರ ಸರ್ಕಾರಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ತೋರಿಸಲು ಲಕ್ಷಾಂತರ ವೆನೆಜುವೆಲಾದ ಜನರು ರಾಜಧಾನಿ ಕ್ಯಾರಕಾಸ್ ಮತ್ತು ದೇಶದ ಇತರೆ ನಗರ ಗಳಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ವಿಶ್ವ ಸಂಸ್ಥೆಯ ವರದಿಯಲ್ಲಿ ಏನಿದೆ?

ರಾಜಕೀಯ ಅಸ್ಥಿರತೆ, ಆರೋಗ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ; ಸರಿಯಾದ ಔಷಧ, ವೈದ್ಯಕೀಯ ಸರಬರಾಜು ಮತ್ತು ಆಹಾರದ ಕೊರತೆ; ಸಾಮಾಜಿಕ ಕಾರ್ಯಕ್ರಮಗಳಿಗೆ ಲಭ್ಯವಿರುವ ಹಣದ ಇಳಿಕೆ ಮತ್ತು ರಾಜಕೀಯ ಹಿಂಸಾಚಾರ ದಂತಹ, ಎಲ್ಲಾ ಸಮಸ್ಯೆಗಳಿಗೆ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಹೈ ಕಮಿಷನವೆನೆಜುವೆಲಾ ಸರ್ಕಾರವನ್ನು ಉಗ್ರವಾಗಿ ದೂಷಿಸಲಾಗಿದೆ. ಇದನ್ನು ವೆನೆಜುವೆಲಾ ಸರ್ಕಾರ ಮತ್ತು ಅಲ್ಲಿನ ಜನರು ಮುಲಾಜಿಲ್ಲದೆ ಸಾರಾಸಗಟಾಗಿ ನಿರಾಕರಿಸಿದ್ದಾರೆ.

ಆದರೆ, ಜಿನಿವಾದಲ್ಲಿ ಮಂಡಿಸಿದ ವರದಿಯಲ್ಲಿ ಅಮೆರಿಕಾ ವಿಧಿಸಿರುವ ಆರ್ಥಿಕ ಮತ್ತು ರಾಜಕೀಯ ನಿರ್ಬಂಧಗಳ ಪ್ರಭಾವವನ್ನು ಮತ್ತು ಅಮೆರಿಕದ ಬೆಂಬಲಿತ ಬಲಪಂಥೀಯ ವಿರೋಧ ಪಕ್ಷದವರ ನಡೆಸಿದ ಹಲವಾರು ದಂಗೆ ಮತ್ತು ಹಿಂಸಾತ್ಮಕ ದೌರ್ಜನ್ಯಗಳನ್ನು ಈ ವರದಿಯು ನಿರ್ಲಕ್ಷಿಸಿದೆ ಎಂದು ಪ್ರತಿಭಟನೆಕಾರರು ದೂರಿದ್ದಾರೆ.

ಅಧ್ಯಕ್ಷ ಮಡುರೊ ಟ್ವಿಟರ್ ನಲ್ಲಿ ಈ ರೀತಿ ಹೇಳಿದ್ದಾರೆ: "ವಿಶ್ವಸಂಸ್ಥೆಯ ಈ ಕುಟಿಲ ಸುಳ್ಳನ್ನು ವೆನೆಜುವೆಲಾ ಜನರು ನಿರಾಕರಿಸಿದ್ದಾರೆ. ಶಾಂತಿ ಮತ್ತು ಸತ್ಯಕ್ಕಾಗಿ! ವೆನೆಜುವೆಲಾ ದ ಜನರು ಮಾನವ ಹಕ್ಕುಗಳ ಖಾತರಿದಾರರು ಮತ್ತು ಪ್ರವರ್ತಕರು. ವೆನೆಜುವೆಲಾ ಸಾಮಾಜಿಕ ನ್ಯಾಯ ಮತ್ತು ಘನತೆಯನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಹ್ಯೂಗೊ ಚಾವೆಜ್ ರ ಅನುಯಾಯಿಗಳು. ಆದ್ದರಿಂದಲೇ ಈ ಸುಳ್ಳು ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸುತ್ತೇವೆ ಎಂದಿದ್ದಾರೆ. ಹಾಗೂ ➔

ಗ್ವಾಟೆಮಾಲನ್ ವಲಸೆಗಾರ ಕೊಲೆ ಅಮೆರಿಕದ ಕಟು ವಲಸೆ-ನೀತಿ ವಿರುದ್ಧ ಪ್ರತಿರೋಧ



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಎರಡು ವಾರದ ಹಿಂದೆ, ಮೆಕ್ಸಿಕೊ ದಲ್ಲಿ, ಗ್ವಾಟೆಮಾಲದ ರೂಡಿ ಅಲೋನ್ಸೊ ತನ್ನ ನಾಲ್ಕು ಜನ ಕುಟುಂಬ ಸದಸ್ಯರೊಂದಿಗೆ ಅಮೆರಿಕಕ್ಕೆ ಪ್ರಯಾಣಿಸುತ್ತಿದ್ದಾಗ ಮೆಕ್ಸಿಕೋ-ಅಮೆರಿಕಾದ ಗಡಿ ಪ್ರದೇಶವಾದ ಪೂರ್ವ ಮೊರೆಲೋಸ್ ನಲ್ಲಿ ಸಂಶಯಾಸ್ಪದವಾಗಿ ಕೊಲ್ಲಲ್ಪಟ್ಟಿದ್ದಾನೆ. ಕೊಲೆಯಾದ ರೂಡಿಯ ದೇಹವನ್ನು ತಬ್ಬಿಕೊಂಡು ಅವನ 11 ವರ್ಷದ ಮಗ ಕ್ರಿಸ್ಟಿಯನ್ ಇಬಾನ್ ಆ ಪ್ರದೇಶದಲ್ಲಿ ಇದ್ದುದನ್ನು ಮೆಕ್ಸಿಕನ್ಸ್ ಅಧಿಕಾರಿಗಳು ಸ್ವತಃ ಕಂಡು ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ. ಪ್ರಯಾಣಿಸುತ್ತಿದ್ದ ಕೊಲೆಯಾದ ತಂದೆ ರೂಡಿಯೊಂದಿಗೆ, ಇವನ ಚಿಕ್ಕಪ್ಪ ಲೂಯಿಸ್ ಆರ್ಟುರೊ ಹಾಗೂ ಸೋದರ ಸಂಬಂಧಿ ಬೈರಾನ್ ಅಮಿಲ್ಕಾರ್ ರವರು ಜೊತೆಯಲ್ಲಿ ಅಮೆರಿಕಾಕ್ಕೆ ಪ್ರಯಾಣಿಸುತ್ತಿದ್ದರು.

ಜುಲೈ ತಿಂಗಳ ವಾರಾಂತ್ಯದಲ್ಲಿ ನಡೆದ ಎರಡನೇ ವಲಸೆಗಾರನ ಕೊಲೆ ಇದಾಗಿದೆ. ಈ ದುರಂತವು ಮೆಕ್ಸಿಕೊ ಮತ್ತು ನಡು ಅಮೆರಿಕಾವನ್ನು ಬೆಚ್ಚಿ ಬೀಳಿಸಿದೆ. ಸ್ಥಳೀಯ ಮಾಧ್ಯಮಗಳ ಪ್ರಕಾರ, ವಲಸಿಗರರ ಗುಂಪೊಂದು ಕಳೆದ ಮೇ 28 ರಂದು ಗ್ವಾಟೆಮಾಲಾದಿಂದ ಅಮೆರಿಕಾಕ್ಕೆ ತೆರಳಿತ್ತು. ಅಮೆರಿಕಾದಲ್ಲಿ ನೆಲೆಸಿರುವ ತಮ್ಮ ಕುಟುಂಬದ ಜತೆ ಸೇರಿಕೊಳ್ಳಲು ಅವರು ಪ್ರಯಾಣವನ್ನು ಕೈಗೊಂಡಿದ್ದರು. ಪ್ರಯಾಣಿಸುವ ಮುನ್ನಾ ಏಜಂಟರಿಗೆ ಹಣವನ್ನು ಪಾವತಿಸಿದ್ದರು. ಆ ಏಜೆಂಟರು ಮೆಕ್ಸಿಕೊದ ಮೂಲಕ ಅವರನ್ನ ಕರೆತರುವ ಭರವಸೆಯನ್ನು ನೀಡಿದ್ದರು. ಆದರೆ, 15 ದಿನಗಳ ಪ್ರಯಾಣದ ನಂತರ, ಅವರನ್ನು ವೆರಾಕ್ರಜ್ ನಲ್ಲಿ ಮಧ್ಯದಲ್ಲಿಯೇ ಅವರ ಕೈ ಬಿಡಲಾಗಿದೆ. ಅಲ್ಲಿಂದ ಇವರನ್ನು ಅಪರಾಧಿ ಗ್ಯಾಂಗ್ ಅಪಹರಣ ಮಾಡಿದೆ.

ಅಮೆರಿಕಾದಲ್ಲಿರುವ ಇವರ ಕುಟುಂಬದ ಸದಸ್ಯರಿಗೆ ಮೆಕ್ಸಿಕೊದ ಗ್ಯಾಂಗಿನಿಂದ ಜುಲೈ 1 ರಂದು, ಒಂದು ಬಂದಿದೆ. ನಿಮ್ಮ ಕುಟುಂಬದವರನ್ನು ಅಪಹರಿಸಿದ್ದು, 12 ಸಾವಿರ ಯುಎಸ್ ಡಾಲರನ್ನು ಕೊಡಬೇಕೆಂದು ಈ ಅಪಹರಣಕಾರರು ಬೆದರಿಸಿದ್ದಾರೆ. ಈ ಕುಟುಂಬದವರಿಗೆ 8 ಸಾವಿರ ಯುಎಸ್ ಡಾಲರನ್ನು ಮಾತ್ರ ಕೂಡಿಸಿ ಕೊಡಲು ಸಾಧ್ಯವಾಗಿದೆ. ಈ ಹಣವನ್ನು ಠೇವಣಿಯ ರೂಪದಲ್ಲಿ ಪಾವತಿಸಿದ್ದಾರೆ. ಆ ನಂತರ ಅಪಹರಣಕಾರರು ಪುನಃ ಏನನ್ನೂ ಕೇಳಲಿಲ್ಲವೆಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಕೆಲವು ದಿನಗಳ ನಂತರ, ಅಂದರೆ, ಜುಲೈ 6 ರಂದು, ಕೊಲೆಯಾದ ರೂಡಿಯ ಮಗ ಕ್ರಿಸ್ಟಿಯನ್ ಇಬಾನ್ ಮೊರೆಲೋಸ್ ನ ಆಸ್ಪತ್ರೆಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾನೆ. ಇವನ ತಂದೆಯ ಮೃತದೇಹ ಪತ್ತೆಯಾಗಿದ್ದು ಮೊರೆಲೋಸ್ಸನ ಆಸ್ಪತ್ರೆ ಯಲ್ಲಿ ಇಡಲಾಗಿದೆ ಕರೆ ಅಮೆರಿಕದ ಇವರ ಕುಟುಂಬಕ್ಕೆ ಬಂದಿದೆ.. ಕ್ರಿಸ್ಟಿಯನ್ ಇಬಾನ್ ಗೆ ಚಿಕಿತ್ಸೆ ನೀಡಿದ ನಂತರ, ಈ ಬಾಲಕನಿಂದ ಪ್ರಾಸಿಕ್ಯೂಟರ್ ಕಛೇರಿಯ ಅಧಿಕಾರಗಳು ಹೇಳಿಕೆ ಪಡೆದಿದ್ದಾರೆ. ಅದರಂತೆ, 'ಯಾರೋ ಅಪರಿಚಿತ ವ್ಯಕ್ತಿಗಳು ನಮ್ಮನ್ನು ಬೆನ್ನಟ್ಟಿದ್ದು, ನಾನು ಮತ್ತು ನನ್ನ ತಂದೆಯವರು ಅವರಿಂದ ತಪ್ಪಿಸಿ ಕೊಳ್ಳಲು ಸಾಧ್ಯವಾಗಲಿಲ್ಲ. ಉಳಿದ ಇಬ್ಬರು ತಪ್ಪಿಸಿಕೊಂಡರು' ಎಂದು ಅವನು ತಿಳಿಸಿದ್ದಾನೆ.

ಈ ದುರಂತಮಯ ಘಟನೆ ಈ ಪ್ರದೇಶಗಳಲ್ಲಿನ ಜನರನ್ನು ಬೆಚ್ಚಿ ಬೀಳಿಸಿದೆ. ಏಕೆಂದರೆ, ನಡು ಅಮೆರಿಕಾದಿಂದ ಉದ್ಯೋಗವನ್ನು ಅರಸಿ ಅಮೆರಿಕಾಕ್ಕೆ ವಲಸೆ ಹೋಗುವ ಪ್ರಮಾಣವು ಹೆಚ್ಚಳವಾಗಿದೆ. ಇವರೆಲ್ಲಾ ಕಡಿಮೆ ಕೂಲಿಗೆ ದೊರೆಯುವ ಕಾರ್ಮಿಕರು ಎಂದು ಕರೆಯಬಹುದು. ಇದರಿಂದಾಗಿ, ಟ್ರಂಪ್ ಆಡಳಿತದಿಂದ ಮಾತ್ರವಲ್ಲದೇ, ಇಡೀ ಈ ಪ್ರದೇಶದಲ್ಲಿನ ಇನ್ನಿತರೆ ಸರ್ಕಾರಗಳ ಆಡಳಿತಗಳು ಕೂಡ, ಇಂತಹ ಕಠಿಣ ಹಾಗೂ ದುರಂತಗಳ ರೂಪದಲ್ಲಿ ಗ್ವಾಟೆಮಾಲನ್ಸ್ ವಲಸೆ ಜನರಿಗೆ ಹಿಂಸೆ ನೀಡುತ್ತಿದ್ದಾರೆ. ಇದರಿಂದ ವಲಸೆಗಾರ ಕುಟುಂಬಗಳು ಆತಂಕಕ್ಕೆ ಒಳಗಾಗಿದ್ದಾರೆ. ಜನರು ತಮ್ಮ ಮನೆಗಳನ್ನು ತೊರೆಯಲು ಕಾರಣವಾಗಿರುವ ಮೂಲ ಸಮಸ್ಯೆಗಳನ್ನು ತಿಳಿದು, ಅದನ್ನು ನಿಭಾಯಿಸುವ ಬದಲಿಗೆ, ಅವರನ್ನು ಇನ್ನಷ್ಟು ಹಿಂಸಾಚಾರಕ್ಕೆ ತುತ್ತಾಗಿಸುವ ಕ್ರಮಗಳನ್ನು ಕೈಗೊಳ್ಳುತ್ತಿವೆ. ಇದರಿಂದ ಜನರ ಜೀವಕ್ಕೆ ಅಪಾಯ ಉಂಟಾಗುತ್ತದೆ ಎಂಬ ಅಭಿಪ್ರಾಯ ಎಲ್ಲೆಡೆ ಮೂಡಿದೆ.

ಆದಾಗ್ಯೂ, ಈ ದುರಂತದ ಘಟನೆಗೆ ಪ್ರತಿಕ್ರಿಯೆಯಾಗಿ, ರೂಡಿ ಅಲೊನ್ಸ್ ಅವರ ಕುಟುಂಬ ಸದಸ್ಯರನ್ನು ಬೆಂಬಲಿಸಲು ಮತ್ತು ಅವರ ದೇಹವನ್ನು ಗ್ವಾಟೆಮಾಲಾ ಕ್ಕೆ ವಾಪಸ್ ತರಬೇಕೆಂದು ಸರ್ಕಾರಕ್ಕೆ ಒತ್ತಾಯಿಸುವ ಸಲುವಾಗಿ ಮೆಕ್ಸಿಕೊದಲ್ಲಿನ ಸಾಮಾಜಿಕ ಸಂಘಟನೆಗಳು, ಚಳುವಳಿಗಳು ಸಜ್ಜುಗೊಂಡು ಬಾರಿ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಇಂತಹ ಅನೇಕ ಪ್ರಕರಣಗಳಲ್ಲಿ ವಲಸಿಗರನ್ನು ಅಪರಾದಿಗಳಂತೆ ಕಾಣಲಾಗುತ್ತದೆ ಎಂಬುದನ್ನು ಹಲವರು ಟೀಕಿಸಿದ್ದಾರೆ. ಅವರಲ್ಲಿ ಮೆಕ್ಸಿಕೊದ ರಾಷ್ಟ್ರೀಯ ಸ್ವಾಯತ್ತ ವಿಶ್ವವಿದ್ಯಾಲಯ ದ ಪ್ರಾಧ್ಯಾಪಕ ಮ್ಯಾಗಿಯಲ್ ಸ್ಯಾಂಚ್ ಜ್ ಕ್ವಿರಾಜ್ ಅವರು ಪ್ರಮುಖರಾಗಿದ್ದಾರೆ. ಇವರು ಮೆಕ್ಸಿಕನ್ ನ ನ್ಯೂವಾ ಸಿಯುಡಾನಾ ಪಾಪ್ಯುಲರ್ ಸಂಘಟನೆಯ ಸದಸ್ಯರು ಕೂಡಾ ಹೌದು. ಇವರು ಈ ಪ್ರಕರಣದಲ್ಲಿ ಸರ್ಕಾರದ ನಡವಳಿಕೆ ಸಾಮಾನ್ಯವಾಗಿ ಉತ್ತಮವಾಗಿದೆ, ರೂಡಿ ಮಗನಿಗೆ ಮಾನವೀಯ ರೀತಿಯಲ್ಲಿ ಚಿಕಿತ್ಸೆ ನೀಡಲಾಗಿದೆ ಎಂಬ ಮೆಚ್ಚುಗೆಯನ್ನು ಸಹ ವ್ಯಕ್ತ ಪಡಿಸಿದ್ದಾರೆ. ಇದಕ್ಕೆ ವಿವಿಧ ಸಾಮಾಜಿಕ ಚಳವಳಿಗಳು ತಂದ ಒತ್ತಡವೇ ಕಾರಣವೆಂದಿದ್ದಾರೆ. ಆದರೆ ಇಂತಹ ಪ್ರಕರಣದಲ್ಲಿ ಹೆಚ್ಚಾಗಿ ವಲಸಿಗರನ್ನು ಅಪಾಧಿಗಳಂತೆ ಪರಿಗಣಿಸಿ, ಚಿತ್ರ- ಹಿಂಸೆಗೆ ಗುರಿ ಪಡಿಸಲಾಗುತ್ತದೆ. ಇದು ಖಂಡನೀಯ ಎಂದಿದ್ದಾರೆ.

ಇಂತಹ ಪ್ರಕರಣಗಳು ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಯಿದೆ. ಕಳೆದ ವಾರಾಂತ್ಯದಲ್ಲಿಯೇ ಇದು ವಲಸಿಗರ ಎರಡನೇ ಕೊಲೆಯಾಗಿದೆ. ಇದಕ್ಕೆ ಕಾರಣ ಮೆಕ್ಸಿಕನ್ ಸರಕಾರ ದೊಂದಿಗೆ, ಟ್ರಂಪ್ ಆಡಳಿತ ಮಾಡಿಕೊಂಡಿರುವ ವಲಸೆ ವಿರೋಧಿ ಕಠಿಣ ಕ್ರಮಗಳೇ ಕಾರಣವೆಂದು ಕ್ವಿರಾಜ್ ತಿಳಿಸಿದ್ದಾರೆ.

ಅಮೆರಿಕಾ-ಮೆಕ್ಸಿಕೊ ವಲಸೆ-ವಿರೋಧಿ ನೀತಿ ಒಪ್ಪಂದ

ಜೂನ್ 7 ರಂದು, ಯುಎಸ್ ಮತ್ತು ಮೆಕ್ಸಿಕೊ ನಡುವೆ, ನಡು-ಅಮೆರಿಕಾದ ದೇಶಗಳಿಂದ ವಲಸೆ ಬರುವವರನ್ನು ನಿಯಂತ್ರಿಸುವ ಸಲುವಾಗಿಯೇ, ಕಠಿಣ ಕ್ರಮಗಳ ಒಪ್ಪಂದವನ್ನು ಘೋಷಿಸಲಾಗಿದೆ. ಇದರೊಂದಿಗೆ ಮೆಕ್ಸಿಕೊಗೆ ಪ್ರತಿ ತಿಂಗಳು ಶೇ.25 ರಷ್ಟು ಹೆಚ್ಚುವರಿ ವಾಣಿಜ್ಯ ದರಗಳನ್ನು ಹೆಚ್ಚಿಸುವ ಬೆದರಿಕೆಯನ್ನು ಒಡ್ಡಲಾಗಿದೆ. ಈ ಕ್ರಮಗಳನ್ನು ತೆಗೆದುಕೊಳ್ಳಲು ಮೆಕ್ಸಿಕೋದ ಹೊಸ ಅಧ್ಯಕ್ಷ ಆಂಡ್ರಸ್ ಮ್ಯಾನುಯಲ್ ಲೋಪೆಜ್ ಒಬ್ರಡಾರ್ ರವರು ಒಪ್ಪಿರುವುದು ಆಶ್ಚರ್ಯ ಹಾಗೂ ದುರದೃಷ್ಟಕರ ಎಂದಿದ್ದಾರೆ. ಇವರು ಪ್ರಗತಿಪರರೆಂದು ಜಗತ್ತಿನಾದ್ಯಂತ ಪರಿಗಣಿಸಲಾಗಿದ್ದು, ಟ್ರಂಪ್ ಯಾವುದೇ ಕಠಿಣ ಕ್ರಮಗಳನ್ನು ಹೇರಲು ಬಿಡುವುದಿಲ್ಲವೆಂದು ಈ ಹಿಂದೆ ಭರವಸೆ ನೀಡಿದ್ದರು. ಆದಾಗ್ಯೂ, ಇಂತಹ ಕ್ರಮಗಳನ್ನು ಹೇರಲು ಅವರು ಉದ್ದೇಶಿಸಿರುವುದು ಸಮಂಜಸವಲ್ಲವೆಂಬ ಬಲವಾದ ಅಭಿಪ್ರಾಯವಿದೆ. ವಾಸ್ತವವಾಗಿ, ವಲಸೆ ಬರುವ ಕಾರವಾನ್ ಗಳು, ಮೆಕ್ಸಿಕೊದ ಮೂಲಕ ಅಮೆರಿಕಾಕ್ಕೆ ಹಾದು ಹೋಗುವ ಸಾವಿರಾರು ನಡು-ಅಮೆರಿಕನ್ಸ್ ವಲಸೆಗಾರರ ಬಗ್ಗೆ ಮೆಕ್ಸಿಕನ್ ಸರಕಾರ ಹೆಚ್ಚು ಮಾನವೀಯ ನೀತಿಗಳನ್ನು ಅನುಸರಿಸುತ್ತದೆ ಎಂದು ಮೆಕ್ಸಿಕೋ ಅಧ್ಯಕ್ಷ ಒಬ್ರಡಾರ್ ಘೋಷಿಸಿದ್ದರು. ಮೆಕ್ಸಿಕೊ ಮೇಲೆ ಆಮದು ಸುಂಕ ಏರಿಸುವ ಟ್ರಂಪ್ ನ ವಾಣಿಜ್ಯ ಬೆದರಿಕೆಯ ಒತ್ತಡ ಇದಕ್ಕೆ ಕಾರಣವಿರಬಹುದು.

ಗ್ವಾಟೆಮಾಲ ದಕ್ಷಿಣದ ಗಡಿಯನ್ನು ಕೇಂದ್ರೀಕರಿಸಿ, ತನ್ನ ರಾಷ್ಟ್ರೀಯ ಗಾರ್ಡುಗಳ ಹೆಚ್ಚುವರಿ 6,000 ಸದಸ್ಯರನ್ನು ಮೆಕ್ಸಿಕೊ ನಿಯೋಜಿತಗೊಳಿಸಿರುವುದು ವಲಸಿಗ-ವಿರೋಧಿ ನೀತಿಯ ವಿವಾದಾತ್ಮಕ ಅಂಶವಾಗಿದೆ. ಗಾರ್ಡ್ ಗಳ ನಿಯೋಜನೆಯ, ಮೂಲ ಉದ್ದೇಶ ವಲಸಿಗರ ಮೇಲ್ವಿಚಾರಣೆ ಅಥವಾ ವಲಸಗೆ ಸಂಬಂಧಿಸಿದ ಮೂಲ ಸಮಸ್ಯೆ ಗಳ ಪರಿಹಾರಕ್ಕಾಗಿ ಇರಬೇಕೇತ್ತೇ ವಿನಹಃ, ವಲಸೆಗಾರರಿಗೆ ಹಿಂಸೆಯನ್ನು ನೀಡಲು ಅಲ್ಲ ಎಂಬ ಎಂದು ಸ್ಯಾಂಚೆಜ್ ಕ್ವಿರಾಜ್ ಹೇಳಿದ್ದಾರೆ.

ರಾಜಕೀಯ ದುರುದ್ದೇಶ ಪೂರಿತ

ಅನೇಕ ರಾಜಕೀಯ ವಕ್ತಾರರ ಪ್ರಕಾರ, ಟ್ರಂಪ್ ನೇತೃತ್ವದ ಅಮೆರಿಕದ ಆಡಳಿತವು ತನ್ನ ಅಧಿಪತ್ಯದ ಹಿಡಿತವನ್ನು ಕಳೆದು ಕೊಳ್ಳಲಾರಂಬಿಸಿದೆ. ಅದನ್ನು ಪುನರ್ ಸ್ಥಾಪಿಸುವ ದುರುದ್ದೇಶದಿಂದ, ಎಲ್ಲಾ ತರದ ರಾಜಕೀಯ ಹಸ್ತಕ್ಷೇಪವನ್ನು ನಡೆಸುತ್ತಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ವಲಸೆ-ವಿರೋಧಿ ನೀತಿ ಈ ದುರುದ್ದೇಶ ರಾಜಕೀಯದ ಒಂದು ಭಾಗವಾಗಿದೆ. ವೆನೆಜುವೆಲಾ, ಕ್ಯೂಬಾ, ಇರಾನ್ ಮತ್ತು ಚೀನಾ ಗಳಲ್ಲಿ ಅಮೆರಿಕಾದ ಹಸ್ತಕ್ಷೇಪ ಮತ್ತು ದಾಳಿಗಳನ್ನು ಗಮನಿಸಬಹುದಾಗಿದೆ ಎಂದು ಹೇಳಲಾಗಿದೆ.

ಮೆಕ್ಸಿಕನ್ ಪ್ರಕರಣದಲ್ಲಿ, ಅದು ತನ್ನ ಅಗ್ಗದ ಕಾರ್ಮಿಕರ ದೊಡ್ಡ ಪೂರೈಕೆ ದಾರರ ಮೇಲೆ ದಾಳಿ ನಡೆಸುತ್ತಿದೆ. ಹಾಗೆಯೇ, ಮಧ್ಯ- ಅಮೆರಿಕ ಮತ್ತು ಕೆರಿಬಿಯನ್ ಅಗ್ಗದ ಕಾರ್ಮಿಕರ ಮತ್ತು ಚೀನಾದ ವಿರುದ್ಧ ವ್ಯಾಪಾರ ಸಮರದಲ್ಲಿ ಅದರ ಪ್ರಾಥಮಿಕ ಪಾಲುದಾರರಲ್ಲಿ ಒಬ್ಬರ ಮೇಲೆ ಒಬ್ಬರಂತೆ, ವಾಣಿಜ್ಯ ಆಕ್ರಮಣ ಮಾಡುತ್ತಿದೆ. ಚೀನಾ ಮತ್ತು ಕೆನಡಾ ನಂತರ, ಮೆಕ್ಸಿಕೊ ಅಮೆರಿಕದ ಮೂರನೇ ಅತಿದೊಡ್ಡ ವ್ಯಾಪಾರ ಪಾಲುದಾರ ರಾಗಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬೇಕು.

ಕೇವಲ ಹೆಚ್ಚು ಸುಂಕಗಳಿಂದ ತನ್ನನ್ನು ಅಮೆರಿಕಾ ಬೆದರಿಸುತ್ತಿರುವುದು ಒತ್ತಡದ ತಂತ್ರವೆಂದು ಭಾವಿಸಿ, ತೋರ್ಯಕೆಗಾದರು ಪ್ರತಿರೋಧವನ್ನು ಮೆಕ್ಸಿಕೊ ವ್ಯಕ್ತ ಪಡಿಸಬೇಕಾಗಿತ್ತು. ಆದರೆ, ಅದು ಹಾಗೆ ಮಾಡಲಿಲ್ಲ. ಮೊದಲ ಬೆದರಿಕೆಗೆ ಮಣಿದಿದೆ. ಬೆದರಿಕೆಯಿಂದ ಏನನ್ನು ಸಾಧಿಸಬಹುದು ಎಂದು ಸಾಧಿಸಬಯಸುವ ಟ್ರಂಪ್ ಗೆ ಮಣಿಯುವುದು ನೆರೆಯ ದೇಶಗಳಿಗೆ ಮತ್ತು ಇಡೀ ಜಗತ್ತಿಗೆ ಅಪಾಯಕಾರಿ ಅಂಶ. ಗ್ವಾಟೆಮಾಲಾ ವಲಸೆಗಾರರ ಕೊಲೆಯ ಮತ್ತು ಇದಕ್ಕೆ ಕಾರಣವಾಗಿರುವ ವಲಸೆ ನೀತಿಯ ಒಪ್ಪಂದದ ವಿರುದ್ಧವಾಗಿ ಅಲ್ಲಿ ಸಾಮಾಜಿಕ ಚಳುವಳಿಗಳು ಉಗ್ರವಾಗಿ ಪ್ರತಿಭಟನೆ ನಡೆಸುತ್ತಿವೆ. ●


➔ ವೆನೆಜುವೆಲಾ ಸರ್ಕಾರದ ಜೊತೆಯಲ್ಲಿ ದೃಢಚಿತ್ತರಾಗಿ ನಿಂತಿರುವ ಜನರಿಗೆ ಧನ್ಯವಾದ ಹೇಳಿದ್ದಾರೆ.

ಈ ವರದಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಖಂಡಿಸಲಾಗಿದೆ. ವೆನೆಜುವೆಲಾ ಸರ್ಕಾರವು ವರದಿಯಲ್ಲಿ ಕಂಡು ಬಂದಿರುವ 70 ದೋಷಗಳನ್ನು ಹೊಂದಿರುವ ಅಂಶಗಳ ದಾಖಲೆಗಳನ್ನು ಬಿಡುಗಡೆ ಮಾಡಿದೆ. ಈ ವರದಿಯನ್ನು ರಷ್ಯಾ, ಚೀನಾ, ಟರ್ಕಿ ಕ್ಯೂಬಾ ಬೊಲಿವಿಯ, ಬೆಲಾರಸ್, ಇರಾನ್ ಮತ್ತು ನಿಕರಾಗುವಾ ಸರ್ಕಾರಗಳ ಪ್ರತಿನಿಧಿಗಳು ತೀವ್ರವಾಗಿ ಖಂಡಿಸಿದ್ದಾರೆ.

ವಿಶ್ವ ಸಂಸ್ಥೆಯ ಈ ವರದಿಯನ್ನು ಒ.ಎ.ಎಸ್. (ಅಮೆರಿಕನ್ ದೇಶಗಳ ಸಂಘಟನೆ), ಲಿಮಾ ಗುಂಪು ಬೆಂಬಲಿಸಿದೆ. ಆದರೂ ಸಹಾ, ವೆನೆಜುವೆಲಾ ವನ್ನು ಸೋಲಿಸಲು ಸಾಧ್ಯವಿಲ್ಲ ಏಕೆಂದರೆ, ವೆನೆಜುವೆಲಾದ ಜನರು ಸ್ವತಂತ್ರರಾಗಿರಲು ನಿರ್ಧರಿಸಿದ್ದಾರೆ. ಎಂದು ವೆನೆಜುವೆಲಾ ರಾಷ್ಟ್ರೀಯ ಸಂವಿಧಾನ ಸಭೆಯ ಅಧ್ಯಕ್ಷ ಡಿಯೋಸ್ಡಾಡೊ ಕ್ಯಾಬೆಲ್ ಪ್ರತಿಪಾದಿಸಿದ್ದಾರೆ. ●



JANASHAKTHI KANNADA VARA PATRIKE JULY 29-August 4, 2019 Price: Rs. 10/- Date of Publication: 26 JULY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಕರ್ನಾಟಕದ ಪ್ರಾಂತ ರೈತ ಸಂಘದ ಐತಿಹಾಸಿಕ ದಾಖಲೆ

ಅಗಸ್ಟ್ 4 ರಂದು ಮಂಗಳೂರಿನಲ್ಲಿ ನಾಡಿನ ಹಿರಿಯ ಕಮ್ಯುನಿಸ್ಟ್ ನಾಯಕ ಮತ್ತು ರೈತ ಚಳುವಳಿಯ ಹಲವು ದಶಕಗಳ ಕಾಲದ ಅನುಭವ ಇರುವ ಕೆ.ಆರ್. ಶ್ರೀಯಾನ್ ಬರೆದ 'ಕರ್ನಾಟಕದ ರೈತ ಚಳುವಳಿ' ಎಂಬ ಪುಸ್ತಕ ಬಿಡುಗಡೆ ಆಗುತ್ತಿದೆ. ಈ ಸಂದರ್ಭದಲ್ಲಿ ನಾಡಿನ ಹಿರಿಯ ರೈತ ನಾಯಕರಾದ ಮಾರುತಿ ಮಾನ್ಪಡೆ ಅವರು ಬರೆದ ಈ ಪುಸ್ತಕದ ಪರಿಚಯ ಮಾಡುವ ದೀರ್ಘ ಮುನ್ನುಡಿಯ ಆಯ್ದ ಭಾಗ.

ಕಾಮ್ರೇಡ್ ಶ್ರೀಯಾನ್ ಅವರು ಇದುವರೆಗಿನ ಕರ್ನಾಟಕ ಪ್ರಾಂತ ರೈತ ಸಂಘದ ಚರಿತ್ರೆಯನ್ನು ಈ ಪುಸ್ತಕದಲ್ಲಿ ದಾಖಲಿಸಲು ಪ್ರಯತ್ನಿಸಿದ್ದಾರೆ. .. .. ಕರ್ನಾಟಕ ಪ್ರಾಂತ ರೈತ ಸಂಘ ನಡೆದು ಬಂದ ದಾರಿಯನ್ನು ಎದುರಿಸಿದ ಸವಾಲುಗಳನ್ನು ಶಕ್ತಿ ರಾಜಕರಣದ ಹಿಂದೆ ಹೋದ ಇತರೆ ರೈತ ಸಂಘಗಳಿಗೂ ಇದಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಶ್ರೀಮಂತ ವರ್ಗ ಹಾಗೂ ಭೂಮಾಲಿಕ ವರ್ಗದ ರೈತರ ಹಿಂದೆ ಹೋದ ಇತರ ರೈತ ಸಂಘಟನೆಗಳು ಅಧಿಕಾರದೊಂದಿಗೆ ರಾಜಿಯಾದರೆ ಕರ್ನಾಟಕ ಪ್ರಾಂತ ರೈತ ಸಂಘವು ಹೇಗೆ ಅತ್ಯಂತ ತಳಸಮುದಾಯದ ರೈತರೊಂದಿಗೆ, ಕೃಷಿ ಕಾರ್ಮಿಕರೊಂದಿಗೆ ಉಳಿದು ಬದ್ಧತೆಯನ್ನು ಸಾಬೀತುಪಡಿಸಿದೆ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಈ ಪುಸ್ತಕವು ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ರೈತರ ಸ್ಥಿತಿಗತಿಗಳನ್ನು ಅದರ ಜೊತೆಗೆ ಆ ರೈತರ ಹೋರಾಟಗಳು ಹೇಗೆ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾಗಿದ್ದವು ಎಂಬುದನ್ನು ಬಿಚ್ಚಿಡುತ್ತದೆ.

.. .. .. ಸ್ವಾತಂತ್ರ್ಯಾ ನಂತರದಲ್ಲಿ ದೇಶಾದ್ಯಂತ ಅಖಿಲ ಭಾರತ ಕಿಸಾನ್ ಸಭಾ ನಡೆಸಿದ ಹೋರಾಟಗಳು 1936 ಎಪ್ರಿಲ್ 11 ರಂದು ಹುಟ್ಟಿದ್ದ ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ ಕರ್ನಾಟಕದ ಭೂ ಹೋರಾಟಗಳಿಗೆ ಸ್ಫೂರ್ತಿಯಾಗಿದ್ದವು.

.. .. .. ಎಲ್ಲ ರಾಜ್ಯಗಳಲ್ಲಿ ಭೂ ಚಳುವಳಿಗಳು ಸಕ್ರಿಯವಾದರೆ ಕಾಂಗ್ರೆಸ್ ಪಕ್ಷವು ಅಧಿಕಾರವನ್ನು ಕಳೆದುಕೊಳ್ಳುವ ಭೀತಿಯಿಂದ ಭೂಸುಧಾರಣಾ ಕಾಯಿದೆಯನ್ನು ತರಲು ನಿರ್ಧರಿಸಿತು. ಇದರ ಅಂಗವಾಗಿಯೇ ಸ್ವತ: ಜಮೀನ್ದಾರರೇ ಆಗಿರುವ ಡಾ.ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಇಡೀ ದೇಶಾದ್ಯಂತ ಮೊಳಗುತ್ತಿರುವ 'ಉಳುವವನೆ ಭೂಮಿಯ ಒಡೆಯ' ಎಂಬ ದನಿಯನ್ನು ತುಂಬ ಚಾಕಚಕ್ಯತೆಯಿಂದ ಹತ್ತಿಕ್ಕಲು ಈ ಸಮಿತಿ ಪ್ರಯತ್ನಿಸಿತ್ತು.. ..

ಒಟ್ಟು 18 ಲಕ್ಷ ಗೇಣಿದಾರರಲ್ಲಿ 14 ಲಕ್ಷ ಗೇಣಿದಾರರನ್ನು ಭೂಮಿಯಿಂದ ಹೊರದೂಡುವ ಪ್ರಯತ್ನವನ್ನು ಬಿ.ಡಿ.ಜತ್ತಿಯವರು ಮಾಡಿದರು. ಇಂತಹ ಸವಾಲಿನ ಸಮಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ಗಟ್ಟಿಯಾಗಿ ನಿಂತು 6 ಲಕ್ಷ ಗೇಣಿದಾರರಿಗೆ ಭೂಮಿಯನ್ನು ಪಡೆಯುವಲ್ಲಿ ಹೋರಾಟದ ಮೂಲಕ ಯಶಸ್ವಿಯಾಯಿತು. ಅವಿಭಜಿತ ಕೋಲಾರ ಜಿಲ್ಲೆಯಲ್ಲಿದ್ದ ಜೋಡಿ ಇನಾಂ ಪದ್ಧತಿಯ ರದ್ಧತಿಗಾಗಿ ಹೋರಾಟ ನಡೆಸಿ ಯಶಸ್ವಿಯಾಯಿತು. ಹೀಗೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಬಿಡಿಯಾಗಿ ಉಳುವವನೇ ಭೂಮಿಯ ಒಡೆಯ ಎನ್ನುವುದನ್ನು ಸಾಕಾರ ಮಾಡಿತ್ತು. ಇಂತಹ ಹೋರಾಟಗಳ ದಾಖಲೀಕರಣ ಮಾಡಿದ ಕಾರಣಕ್ಕಾಗಿ ಕಾಮ್ರೇಡ್ ಕೆ.ಆರ್.ಶ್ರೀಯಾನ್ ಅವರು ಅಭಿನಂದನಾರ್ಹರಾಗಿದ್ದಾರೆ.

ಎರಡನೆಯ ಭಾಗದಲ್ಲಿ ಈ ಪುಸ್ತಕವು ಜಾಗತೀಕರಣದ ಎರಡು ಕಣ್ಣುಗಳಾದ ಉದಾರೀಕರಣ ಮತ್ತು ಖಾಸಗೀಕರಣವನ್ನು ಕುರಿತು ಮಾತನಾಡುತ್ತದೆ. ಈ ನೀತಿಗಳು ರೈತರ ಮೇಲೆ ಮಾಡಿದ ಪ್ರಹಾರಗಳನ್ನು ಕುರಿತು ಹೇಳುತ್ತದೆ. ಈ ನೀತಿಯು ತಂದ ಸಂಕಷ್ಟಗಳನ್ನು ಎದುರಿಸುವಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹೆಚ್ಚು ಹೋರಾಟಗಳನ್ನು ಸಂಘಟಿಸಿ ರೈತರ ಕಷ್ಟಗಳಿಗೆ ಸ್ಪಂದಿಸಿದೆ. ಈ ಹೊಸ ಆರ್ಥಿಕ ನೀತಿಯ ವಿರುದ್ಧದ ಹೋರಾಟದಲ್ಲಿ ನಾಲ್ಕು ಮುಖ್ಯ ಸಂಗತಿಗಳಿಗಾಗಿ ರೈತ ಸಂಘವು ಬೀದಿಗಿಳಿದಿದೆ.

ಮೊದಲನೆಯದಾಗಿ ವಿದ್ಯುತ್ ವಲಯದ ಖಾಸಗೀಕರಣದ ವಿರುದ್ಧದ ಹೋರಾಟ.

ಇನ್ನು ಎರಡನೆಯದಾಗಿ ನೀರಾವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ ಸಮರ್ಥವಾಗಿ ಎದುರಿಸಿದೆ.

ಮೂರನೆಯದಾಗಿ 80ರ ದಶಕದಲ್ಲಿ ರೈತರ ಉತ್ಪಾದನೆಗಳಿಗೆ ಬೆಂಬಲ ಬೆಲೆಯನ್ನು ನೀಡಬೇಕೆಂದು ಕುರಿತು ನಡೆದ ಹೋರಾಟ.

ರೈತರ ಚಳುವಳಿಯ ಭಾಗವಾಗಿ 1988 ರಿಂದ ಈಚೆಗೆ ಸರಕಾರಿ ಭೂಮಿ ಉಳುಮೆ ಮಾಡುವವರಿಗೆ ಹಕ್ಕು ಪತ್ರವನ್ನು ಕೊಡಲಾಗಿತ್ತು. ಆದರೆ ಆರ್.ಎಸ್.ಎಸ್. ಕಾರ್ಯಕರ್ತರು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಹಾಕಿ ಸೆಕ್ಷನ್ 71ರ ಪ್ರಕಾರ ಗೋಮಾಳಕ್ಕಾಗಿ ಇರುವ ಭೂಮಿಯನ್ನು ಉಳುಮೆಗಾಗಿ ನೀಡಬಾರದು ಎಂದು ಆದೇಶವನ್ನು ತಂದರು. ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಕಾಗೋಡು ತಿಮ್ಮಪ್ಪ ಮುಂತಾದವರು ಸೇರಿ ಕಾನೂನು ತಿದ್ದುಪಡಿ ಮಾಡಲು ಆದೇಶ ನೀಡುವಂತೆ ಕರ್ನಾಟಕ ಪ್ರಾಂತ ರೈತ ಸಂಘವು ಹೋರಾಟಗಳ ಮೂಲಕ ಒತ್ತಡ ತಂದಿತು. ಅದರಂತೆ ಸರಕಾರಿ ಜಮೀನು ಉಳುವವನಿಗೆ ಸಿಗುವಂತೆ ಆಗಬೇಕೆಂಬ ನೀತಿಯನ್ನು ಜಾರಿಗೆ ತರಲಾಯಿತು.

ಇಲ್ಲಿ ಮುಖ್ಯವಾದ ಪ್ರಶ್ನೆಯನ್ನು ಕಾಮ್ರೇಡ್ ಶ್ರೀಯಾನ್ ಅವರು ಎತ್ತಿದ್ದಾರೆ. ಅದೇನೆಂದರೆ ನಿರೀಕ್ಷಿಸಿದ ಮಟ್ಟದಲ್ಲಿ ಕರ್ನಾಟಕದಲ್ಲಿ ಚಳುವಳಿಗಳು ನಡೀಲಿಲ್ಲ ಎಂಬ ಈ ಮಾತನ್ನು ನಾವೆಲ್ಲರೂ ಕೇಳಿಕೊಳ್ಳಬೇಕಾಗಿದೆ. ಕರ್ನಾಟಕದಲ್ಲಿ 75 ಲಕ್ಷ ಜನ ಭೂಮಿ ಇರುವವರಿದ್ದಾರೆ. 62 ಲಕ್ಷ ಜನ ಕೃಷಿ ಕೂಲಿ ಕಾರ್ಮಿಕರಿದ್ದಾರೆ. ಇಷ್ಟೊಂದು ಅಗಾಧ ಪ್ರಮಾಣದಲ್ಲಿರುವ ಜನರು ಒಂದಾಗಿ ಹೊರಹೊಮ್ಮುವ ಚಳುವಳಿಗಳನ್ನು ನಾವು ಮುನ್ನೆಲೆಗೆ ತರಬೇಕಾಗಿದೆ. ಬಡ ರೈತರು, ಕೂಲಿ ಕಾರ್ಮಿಕರು ಬಂದರೆ ಅವರ ಹಿಂದೆ ಮಧ್ಯಮ ಮತ್ತು ಶ್ರೀಮಂತ ವರ್ಗದ ರೈತರು ಬರಬಹುದಾಗಿದೆ. ಈ ದಿಸೆಯಲ್ಲಿ ನಮ್ಮ ಕೆಲಸಗಳು ಏನಾಗಬೇಕು? ರೈತರ ಆದ್ಯತೆಗಳಾವುವು, ಪ್ರಭುತ್ವಗಳು ರೈತರನ್ನು ಯಾವ ದೃಷ್ಟಿಯಿಂದ ನೋಡುತ್ತವೆ?

.. .. ಎಲ್ಲ ರೈತರನ್ನು ಸಂಘಟಿಸಿ ಚಳುವಳಿ ನಡೆಸುವ ಅವಶ್ಯಕತೆಯಿದೆ. ಹೀಗೆ ಸಂಘಟಿಸಬೇಕಾದರೆ ಮೂರು ರೀತಿಯ ಅಂಶಗಳು ನಮ್ಮ ಹೋರಾಟಕ್ಕೆ ಪದೇ ಪದೇ ಅಡ್ಡಿಯನ್ನುಂಟು ಮಾಡುತ್ತಿವೆ.

ಶ್ರೀಮಂತರು ಹಾಗೂ ಭೂಮಾಲಿಕರನ್ನು ಅವಲಂಬಿಸಿದ ರಾಜ್ಯ ರೈತ ಸಂಘವು ನಂಜುಂಡ ಸ್ವಾಮಿಯವರ ನೇತೃತ್ವದಲ್ಲಿ ಜಾಗತೀಕರಣ ನೀತಿಯನ್ನು ವಿರೋಧಿಸಿತು. ಆದರೆ ವಾಸ್ತವದಲ್ಲಿ ಅದು ಬಡ ರೈತರ ಕೃಷಿ ಕೂಲಿ ಕಾರ್ಮಿಕರ ಜೊತೆಗೆ ನಿಲ್ಲಲಿಲ್ಲ. ರೈತರಲ್ಲಿ ಭ್ರಮೆ ಹುಟ್ಟಿಸುವ ಕೆಲಸವನ್ನಷ್ಟೇ ಮಾಡಿತು. ಹೀಗಾಗಿ ರಾಜ್ಯ ರೈತ ಸಂಘವು ಹಲವಾರು ಗುಂಪುಗಳಾಗಿ ಒಡೆದು ಹೋಗಿದೆ. ನಿಜವಾಗಿಯೂ ಚಾರಿತ್ರಿಕವಾಗಿ ವೈಜ್ಞಾನಿಕವಾಗಿ ವರ್ಗದೃಷ್ಟಿಕೋನದಿಂದ ರೈತರ ಸಂಕಷ್ಟಗಳಿಗೆ ಧ್ವನಿಯಾಗುವ ಶಕ್ತಿ–ಅದರಲ್ಲೂ ಬಡ ರೈತರಿಗೆ, ಕೃಷಿಕೂಲಿ ಕಾರ್ಮಿಕರಿಗೆ ಧೈರ್ಯ ತುಂಬುವ ಚೈತನ್ಯ–ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಮಾತ್ರ ಇದೆ. ಅದನ್ನಿಟ್ಟುಕೊಂಡು ಬಲಿಷ್ಟವಾದ ಚಳುವಳಿಯನ್ನು ಕಟ್ಟಬೇಕಾದ ಜರೂರಿ ನಮ್ಮೆದುರಿಗೆ ಇದೆ.. ..

ಹಿಂದಿನ ಕಾಂಗ್ರೆಸ್ ಸರಕಾರವು ಜಾತಿ ಆಧಾರದಲ್ಲಿ ರೈತರನ್ನು ಒಡೆದರೆ, ಇಂದಿನ ಬಿಜೆಪಿ ಸರಕಾರವು ಧರ್ಮದ ಆಧಾರದಲ್ಲಿ ರೈತರನ್ನು ಒಡೆಯುತ್ತಿದೆ. ಜಾಗತೀಕರಣದಿಂದಾಗಿ ಶ್ರೀಮಂತ ರೈತರು ಕೂಡಾ ಸಂಕಷ್ಟಕ್ಕೆ ಸಿಲುಕಿದ್ದಾರೆ ಎನ್ನುವುದನ್ನು ನಾವು ಮರೆಯಬಾರದು. ಶ್ರೀಮಂತ ಹಾಗೂ ಬಡ ರೈತರನ್ನು ಸಂಘಟಿಸಿಯೇ ನಮ್ಮ ಹೋರಾಟಗಳು ಮುಂದುವರಿಯಬೇಕಾಗಿದೆ. .. .. ಆರ್ಥಿಕ ನೀತಿಗಳ ಕಾರಣವಾಗಿ ಕುಟುಂಬಗಳ ಹೊರೆ ಮಹಿಳೆಯರ ಮೇಲೆ ಬಿದ್ದಿದೆ. ಹೀಗಾಗಿ ಮಹಿಳೆಯರು ನಮ್ಮ ಚಳುವಳಿಗೆ ಹೆಚ್ಚು ಹೆಚ್ಚು ಬರುತ್ತಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯು ಕೂಡಾ ರೈತರನ್ನು ನಮ್ಮ ಬಳಿಗೆ ತರುತ್ತಿದೆ. ಈ ಎಲ್ಲ ಸದವಕಾಶಗಳನ್ನು ಬಳಸಿಕೊಂಡು ಚಳುವಳಿಯನ್ನು ಬೆಳೆಸಬಹುದಾದ ಎಲ್ಲಾ ಸಾಧ್ಯತೆಗಳಿವೆ.

ಲಾಭದಾಯಕ ಕೃಷಿ, ಸಾಲಮನ್ನಾ, ಸಬ್ಸಿಡಿ, ಬೆಂಬಲ ಬೆಲೆ ಇತ್ಯಾದಿಗಳನ್ನು ಎದುರಿಗಿಟ್ಟುಕೊಂಡು ಚಳುವಳಿಯನ್ನು ಸಂಘಟಿಸುವ ಜವಾಬ್ದಾರಿ ನಮ್ಮ ಮೇಲಿದೆ. ಆರ್ಥಿಕ ನೀತಿಗಳಿಂದಾಗಿ ಕರ್ನಾಟಕದಲ್ಲಿ 21 ಲಕ್ಷ ಎಕರೆ ಭೂಮಿ ಪಾಳು ಬಿದ್ದಿದೆ. ಇದನ್ನು ಮರುಬಳಕೆ ಮಾಡಿಕೊಳ್ಳುವಂತೆ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**